ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಸೆಪ್ಟೆಂಬರ್ 13 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 147 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಗಣೇಶಮೂರ್ತಿ ಮೆರವಣಿಗೆ ಮೇಲೆ ನುಗ್ಗಿದ ಕ್ಯಾಂಟರ್

ಒಂಭತ್ತು ಮಂದಿ ದುರ್ಮರಣ

- ಹಾಸನ–ಹೊಳೆನರಸೀಪುರ ನಡುವೆ ಮೊಸಳೆ ಹೊಸಳ್ಳಿಯಲ್ಲಿ ದುರಂತ
- 20ಕ್ಕೂ ಅಧಿಕ ಮಂದಿಗೆ ಗಾಯ; 10 ಮಂದಿಯ ಸ್ಥಿತಿ ಗಂಭೀರ

ಹಾಸನ, ಸೆ.12– ಸಂಭ್ರಮದಿಂದ ನಡೆಯುತ್ತಿದ್ದ ಗಣೇಶ ಮೂರ್ತಿ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುವ ವೇಳೆ ಏಕಾಏಕಿ ವೇಗವಾಗಿ ಬಂದ ಕ್ಯಾಂಟರ್ ನುಗ್ಗಿದ ಪರಿಣಾಮ ಐವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಒಟ್ಟು 9 ಮಂದಿ ಸಾವನ್ನಪ್ಪಿ, 20ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆ ಮೈಸೂರು–ಬೇಲೂರು ರಾಷ್ಟ್ರೀಯ ಹೆದ್ದಾರಿ, ಹೊಳೆನರಸೀಪುರ–ಹಾಸನ ನಡುವೆ ಬರುವ ಮೊಸಳೆ ಹೊಸಳ್ಳಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ್ದು, ಗಾಯಾಳುಗಳಲ್ಲಿ ಸುಮಾರು 10 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ.

ಮೃತರನ್ನು ಕಬ್ಬನಹಳ್ಳಿ ಪವನ್, ಕುಮಾರ್, ಡಣಾಯಕನಹಳ್ಳಿ ಈಶ್ವರ್, ಮತ್ತಿಗೆರೆಹಳ್ಳಿ ಗೋಕುಲ್, ಚಿಕ್ಕಮಗಳೂರು ಜಿಲ್ಲೆ ಮರ್ಲೆ ಬಳಿಯ ಮಣಿನಾಯಕನಹಳ್ಳಿಯ ಸುರೇಶ್ ಎಂದು ಗುರುತಿಸಲಾಗಿದ್ದು, ಉಳಿದವರ ಗುರುರು ಪತ್ತೆಯಾಗಬೇಕಿದೆ.

ಮೊಸಳೆ ಹೊಸಳ್ಳಿಯಲ್ಲಿ ಇಂದು ಗಣೇಶ ವಿಸರ್ಜನೆ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯುತ್ತಿತ್ತು. ಅಲ್ಲದೇ ಅಲ್ಲಿನ ಸರ್ಕಲ್‌ನಲ್ಲಿ ಆರ್ಕೆಸ್ಟ್ರಾ ಕೂಡ ಏರ್ಪಡಿಸಲಾಗಿತ್ತು. ಇಂದು ರಾತ್ರಿ 8.30ರ ಸುಮಾರಿನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಡಿಜೆಯೊಂದಿಗೆ ಗಣೇಶ ಮೂರ್ತಿ ಮೆರವಣಿಗೆ ನಡೆಯುತ್ತಿದ್ದ ವೇಳೆ ಹಾಸನದ ಕಡೆಯಿಂದ ಹೊಳೆನರಸೀಪುರ ಕಡೆಗೆ ತೆರಳುತ್ತಿದ್ದ ಸರಕು ಸಾಗಾಣಿಕೆ ಕ್ಯಾಂಟರ್ ವಾಹನದ ಚಾಲಕ ಅಡ್ಡ ಬಂದ ಬೈಕ್ ಸವಾರನ ಪಾರು ಮಾಡುವ ಪ್ರಯತ್ನವಾಗಿ ಬಲಕ್ಕೆ ತಿರುಗಿಸಿದಾಗ ಅದು ರಸ್ತೆ ವಿಭಜಕವನ್ನು ಹಾರಿ, ಮತ್ತೊಂದು ಪಥದಲ್ಲಿ ಸಾಗುತ್ತಿದ್ದ ಮೆರವಣಿಗೆಯಲ್ಲಿ ನೃತ್ಯ ಮಾಡುತ್ತಿದ್ದ ಯುವಕರ ಮೇಲೆ ಹರಿದಿದೆ.

> ಮೊಸಳೆ ಹೊಸಳ್ಳಿಯಲ್ಲಿ ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಭೀಕರ ಅಪಘಾತ ಸಂಭವಿಸಿ, ಹಲವರು ಜೀವ ಕಳೆದುಕೊಂಡು 20ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿರುವ ಸುದ್ದಿ ಕೇಳಿ ತೀವ್ರ ಆಘಾತವುಂಟಾಯಿತು. ಗಣಪತಿ ಮೆರವಣಿಗೆಯಲ್ಲಿ ಹೋಗುತ್ತಿದ್ದವರ ಮೇಲೆ ಕ್ಯಾಂಟರ್ ಹರಿದು ಭಕ್ತರ ಸಾವು ಉಂಟಾಗಿರುವುದು ನನಗೆ ಅತ್ಯಂತ ನೋವುಂಟು ಮಾಡಿದೆ. ಇದು ಅತ್ಯಂತ ದುರ್ದೈವದ ಘಟನೆಯಾಗಿದ್ದು, ಮೃತರ ಆತ್ಮಕ್ಕೆ ಭಗವಂತ ಸದ್ಗತಿ ಕರುಣಿಸಲಿ ಹಾಗೂ ದುಃಖತಪ್ತ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ. ಎಲ್ಲಾ ಗಾಯಾಳುಗಳೂ ಆದಷ್ಟು ಬೇಗ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ರಾಜ್ಯ ಸರ್ಕಾರ ಗಾಯಾಳುಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕು.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ (ಎಕ್ಸ್‌ನಲ್ಲಿ ಪೋಸ್ಟ್)


ಘಟನೆ ನಡೆದ ಸ್ಥಳದಲ್ಲಿ ಶವಗಳು, ಗಾಯಗೊಂಡವರನ್ನು ಕಾಣಬಹುದು.

ಗಣೇಶ ಮೂರ್ತಿ ಮೆರವಣಿಗೆಯ ವಾಹನದ ಮುಂಭಾಗ ಗಾರುಡಿ ಗೊಂಬೆ, ಕೀಲು ಕುದುರೆ ಮುಂತಾದ ಕಲಾ ತಂಡಗಳಿದ್ದರೆ, ಅಲ್ಲಿಂದ ಸುಮಾರು 100 ಮೀ. ಅಂತರದಲ್ಲಿ ಯುವಕರು ಡ್ಯಾನ್ಸ್ ಮಾಡುತ್ತಿದ್ದರು. ಈ ಯುವಕರ ಮೇಲೆಯೇ ಕ್ಯಾಂಟರ್ ನುಗ್ಗಿದ್ದು, ಸ್ಥಳದಲ್ಲೇ ಐವರು ಮೃತಪಟ್ಟಿದ್ದಾರೆ. ಸುಮಾರು 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಮೆರವಣಿಗೆಯಲ್ಲಿದ್ದವರು ಹಾಗೂ ಸ್ಥಳೀಯರು ಸಿಕ್ಕ ಸಿಕ್ಕ ವಾಹನಗಳಲ್ಲಿ ಗಾಯಾಳುಗಳನ್ನು ಹಾಸನ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ. ಮಾರ್ಗ ಮಧ್ಯೆ ಓರ್ವ, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೂವರು ಸಾವನ್ನಪ್ಪಿದ್ದು, ಸಾವಿನ ಸಂಖ್ಯೆ 9ಕ್ಕೆ ಏರಿಕೆ ಆಗಿದೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮ್ಮದ್ ಸುಜೀತಾ, ಜಿಲ್ಲಾಧಿಕಾರಿ ಲತಾ ಕುಮಾರಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಕಾರ್ಯಗಳನ್ನು ಕೈಗೊಂಡ ಬಳಿಕ ಜಿಲ್ಲಾಸ್ಪತ್ರೆಗೆ ತೆರಳಿ ■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಸಂತಾಪ; ತಲಾ 5 ಲಕ್ಷ ಪರಿಹಾರ ಘೋಷಣೆ

ಬೆಂಗಳೂರು, ಸೆ.12–ಹಾಸನದ ಬಳಿಯ ಮೊಸಳೆ ಹೊಸಳ್ಳಿಯಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ಕ್ಯಾಂಟರ್ ಹರಿದು ಮೃತಪಟ್ಟವರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಈ ಕುರಿತು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ತಿಳಿಸಿದ್ದಾರೆ. ಹಾಸನದಲ್ಲಿ ಗಣೇಶ ವಿಸರ್ಜನೆ ವೇಳೆ ಮೆರವಣಿಗೆಯಲ್ಲಿ ತೆರಳುತ್ತಿದ್ದವರ ಮೇಲೆ ಕ್ಯಾಂಟರ್ ಹರಿದು 9 ಮಂದಿ ಸಾವಿಗೀಡಾಗಿ, 20ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿರುವ ಸುದ್ದಿ ತಿಳಿದು ಅತೀವ ದುಃಖವಾಯಿತು.

ಮೃತರ ಆತ್ಮಕ್ಕೆ ಶಾಂತಿ ಸಿಗಲಿ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಇದು ಅತ್ಯಂತ ನೋವಿನ ಘಳಿಗೆ. ಅಪಘಾತ ಸಂತ್ರಸ್ತರ ಕುಟುಂಬಗಳ ಜೊತೆ ನಾವೆಲ್ಲಾ ನಿಲ್ಲೋಣ ಎಂದು ಸಿಎಂ ಸಿದ್ದರಾಮಯ್ಯ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

ಸಿನಿಮಾ ಪ್ರಿಯರಿಗೆ ಸಿಹಿಸುದ್ದಿ

ಏಕರೂಪ ಸಿನಿಮಾ ಟಿಕೆಟ್ ದರ 200 ರೂ. ಜಾರಿ



ಬೆಂಗಳೂರು, ಸೆ.12– ದುಬಾರಿ ಸಿನಿಮಾ ಟಿಕೆಟ್ ದರಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಸರ್ಕಾರ ಏಕರೂಪ ಟಿಕೆಟ್ ದರವನ್ನು ಇಂದಿನಿಂದ (ಸೆ.12) ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

ಇದರ ಪ್ರಕಾರ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ನಲ್ಲಿ ಟಿಕೆಟ್‌ನ ಮೂಲ ಬೆಲೆ 200 ರೂ. ದಾಟುವಂತಿಲ್ಲ. ಶೇ.18 ತೆರಿಗೆಯೂ ಸೇರಿದರೆ ಸಿನಿಮಾದ ಟಿಕೆಟ್ ದರ 236 ರೂಪಾಯಿ ಆಗಲಿದೆ. ಸಿನಿಮಾ ಪ್ರಿಯರಿಗೆ ಇದರಿಂದ ಕೊಂಚ ಸಮಾಧಾನವಾಗಿದೆ. ಇನ್ನು ಕೆಲವು ಷರತ್ತುಗಳನ್ನು ಕೂಡ ಸರ್ಕಾರ ಹೇರಿದೆ. ಅನೇಕ ಮಲ್ಟಿಪ್ಲೆಕ್ಸ್‌ಗಳಲ್ಲಿ ಗೋಲ್ಡ್ ಕ್ಲಾಸ್ ವ್ಯವಸ್ಥೆ ಇರುತ್ತವೆ. ಇವುಗಳಿಗೆ 200 ರೂ.ಟಿಕೆಟ್ ದರದ ಮಿತಿ ಇಲ್ಲ ಆ ಆಸನಗಳಿಗೆ ಮಲ್ಟಿಪ್ಲೆಕ್ಸ್‌ಗಳು ತಮ್ಮಿಷ್ಟದ ದರ ನಿಗದಿ ಮಾಡಬಹುದು.

ಬಹುತೇಕ ಮಲ್ಟಿಪ್ಲೆಕ್ಸ್‌ಗಳಲ್ಲಿ ರಿಕ್ಲೈನ್ ಸೀಟ್‌ಗಳು ಇರುತ್ತವೆ. ಅವುಗಳಿಗೂ 200 ರೂ. ಟಿಕೆಟ್ ದರ ಅನ್ವಯ ಆಗುತ್ತದೆ ಎನ್ನಲಾಗಿದೆ.

ಜಂಬೂಸವಾರಿ ಪುಷ್ಪಾರ್ಚನೆ ಪೂರ್ವಾಭ್ಯಾಸ


ದಸರಾ ಮಹೋತ್ಸವಕ್ಕೆ ಮೈಸೂರು ಸಜ್ಜಾಗುತ್ತಿದ್ದು, ಅರಮನೆ ಅಂಗಳದಲ್ಲೂ ಅಂತಿಮ ಹಂತದ ಸಿದ್ಧತೆ ನಡೆದಿದೆ. ಶುಕ್ರವಾರ ಅಂಬಾರಿ ಹೊರಲಿರುವ ಅಭಿಮನ್ಯುವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂಸವಾರಿ ಪೂರ್ವಾಭ್ಯಾಸ ನಡೆಸಲಾಯಿತು. ಈ ವೇಳೆ ನಗರ ಪೊಲೀಸ್ ಆಯುಕ್ತೆ ಸೀಮಾಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಕೆ.ಎಸ್.ಸುಂದರರಾಜ್, ಡಿಸಿಎಫ್ ಐ.ಬಿ. ಪ್ರಭುಗೌಡ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮೌಂಟೆಡ್ ಕಮಾಂಡೆಂಟ್ ಎ.ಮಾರುತಿ, ಅರಮನೆ ಭದ್ರತಾ ಎಸಿಪಿ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಸೆ. 22ರಿಂದ ಮತ್ತೆ ಜಾತಿಗಣತಿ

- ಡಿಸೆಂಬರ್ ವೇಳೆಗೆ ವರದಿ ಸಲ್ಲಿಕೆ
- ವೈಜ್ಞಾನಿಕ ಮಾನದಂಡದಲ್ಲಿ ಸಮೀಕ್ಷೆ
- ಸಮೀಕ್ಷೆಗಾಗಿ 1.75 ಲಕ್ಷ ಶಿಕ್ಷಕರ ನಿಯೋಜನೆ; 425 ಕೋಟಿ ಮಂಜೂರು

ಬೆಂಗಳೂರು, ಸೆ.12(ಕೆಎಂಶಿ)– ಬಡತನ, ನಿರುದ್ಯೋಗ, ಅನಕ್ಷರತೆ ಹೋಗಲಾಡಿಸುವ ಉದ್ದೇಶದಿಂದ ಹಿಂದುಳಿದ ವರ್ಗಗಳ ಆಯೋಗ ಇದೇ 22ರಿಂದ ಸಮೀಕ್ಷೆ (ಜಾತಿ ಗಣತಿ) ನಡೆಸಿ ಡಿಸೆಂಬರ್ ಒಳಗೆ ವರದಿ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದ್ದಾರೆ.



ಗೃಹ ಕಚೇರಿ ಕೃಷ್ಣಾದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧುಸೂದನ ನಾಯಕ್ ಸಮಿತಿ ಮತ್ತು ಹಿಂದುಳಿದ ವರ್ಗಗಳ ಆಯೋಗ ವೈಜ್ಞಾನಿಕ ಮಾನದಂಡದಲ್ಲಿ ಸಮೀಕ್ಷೆ ನಡೆಸಿ ನಿಗದಿತ ಸಮಯದಲ್ಲಿ ವರದಿ ನೀಡಲಿದೆ ಎಂದರು.

ಎಲ್ಲಾ ಜಾತಿ, ಧರ್ಮದವರ ದತ್ತಾಂಶ ಅಂಗೈ ಯಲ್ಲಿದ್ದರೆ ಮಾತ್ರ ಸಾಮಾಜಿಕ ನ್ಯಾಯದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯ. ಅಮೆರಿಕದಲ್ಲೂ ಕರಿಯರಿಗೆ ದೊರಕಬೇಕಾದ ಅವಕಾಶಗಳನ್ನು ನೀಡಿದೆ. ಅದರಂತೆ, ನಾವು ಬಡತನ, ನಿರುದ್ಯೋಗ, ಅನಕ್ಷರತೆ ಹೋಗಲಾಡಿಸಲು ಸಂವಿಧಾನದ ಕಲಂ 15, 16(5)ರಡಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ.

ಹೊಸದಾಗಿ ರಾಜ್ಯದ 7 ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಅರಿಯಲು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಈ ಸಮೀಕ್ಷೆ ನಡೆಸಲಾಗುವುದು. ಆದಷ್ಟೂ ಜಾಗ್ರತೆಯಿಂದ ಸಮೀಕ್ಷೆ ನಡೆಸಿ ವರದಿ ಕೊಡಲು ಆಯೋಗಕ್ಕೆ ಸರ್ಕಾರ ಸೂಚಿಸಿದೆ. ಇದೇ 22ರಿಂದ ಅಕ್ಟೋಬರ್ 7ರವರೆಗೆ ಸಮೀಕ್ಷೆ ಕಾರ್ಯ ನಡೆಯಲಿದೆ. ಇದಕ್ಕಾಗಿ 1,75,000 ಸರ್ಕಾರಿ ಶಾಲಾ ಶಿಕ್ಷಕರನ್ನು ವಿಶೇಷ ಭತ್ಯೆ ನೀಡಿ ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ. ಸಮೀಕ್ಷೆಗಾಗಿ ಸರ್ಕಾರ ■6ನೇ ಪುಟಕ್ಕೆ

ಯುವ ಸಂಭ್ರಮ-3

ಜನಪದ ಸೊಗಡು, ದೇಶಭಕ್ತಿಗೆ ತಲೆದೂಗಿದ ಪ್ರೇಕ್ಷಕ ಸಮೂಹ


ನವಶಕ್ತಿ ವೈಭವದ ದೃಶ್ಯರೂಪಕ ಸಾದರಪಡಿಸಿದ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು


ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ತಂಡದಿಂದ ಜನಪದ ಪರಂಪರೆ ನೃತ್ಯ ಪ್ರದರ್ಶನ

> ನಾನು ಇದೇ ಮೈಸೂರಿನ ಶಾರದಾದೇವಿ ನಗರದವನು. ನನ್ನೂರಿನ ಸಂಭ್ರಮವಾದ 'ಯುವ ಸಂಭ್ರಮ' ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಸಂತಸದ ವಿಷಯ. ಪ್ರತಿಯೊಂದು ಕಾರ್ಯಕ್ರಮಕ್ಕೂ ಮೈಸೂರು ಜನತೆ ನೀಡುವ ಪ್ರೋತ್ಸಾಹ ಶ್ಲಾಘನೀಯ. ಮೈಸೂರಿಗರೂ ಯಾರನ್ನು ಕೈಬಿಡುವುದಿಲ್ಲ ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ.
>
> -ಕಾರ್ತಿಕ್ ಮಹೇಶ್, ನಟ

ಮೈಸೂರು, ಸೆ.12(ವಿವಿಹೆಚ್)– ಡೊಳ್ಳು, ನಗಾರಿ, ಕಂಸಾಳೆ, ಪಟ್ಟದ ಕುಣಿತ, ಪೂಜಾ ಕುಣಿತ, ವೀರಗಾಸೆ ಒಳಗೊಂಡ ಜನಪದ ಕಲಾ ಪ್ರಕಾರಗಳ ನೃತ್ಯ ಪ್ರದರ್ಶನ ರಂಗಮಂದಿರ ವೇದಿಕೆಯಲ್ಲಿ ಜನಪದ ರಂಗನ್ನು ಮೂಡಿಸುವಂತಿತ್ತು. ನಮ್ಮ ಮೂಲ ಕಲಾ ಪ್ರಕಾರಗಳನ್ನು ಸಾದರಪಡಿಸುವ ಜೊತೆಗೆ ನೆರೆದಿದ್ದವರಿಗೆ ಜನಪದ ಪರಂಪರೆಯನ್ನು ಸಾರುವ ಜೊತೆಗೆ ಮನರಂಜನೆಯ ರಸದೌತಣ ಉಣಬಡಿಸಿದರು.

ಮೈಸೂರು ದಸರಾ ಮಹೋತ್ಸವದ ಯುವ ಸಂಭ್ರಮ ಕಾರ್ಯಕ್ರಮದ ಮೂರನೇ ದಿನವಾದ ಶುಕ್ರವಾರ, ಜನಪದ ಲೋಕದೊಂದಿಗೆ ಸಿನಿಮಾ, ದೇಶಭಕ್ತಿ, ಸಂಸ್ಕೃತಿ, ನಾಡ ದೇವತೆ ವೈಭವ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿದರು. ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ತಂಡದಿಂದ ಪೂಜಾ ಕುಣಿತ, ಪಟ್ಟದ ಕುಣಿತ ನೆರೆದವರ ಬೆರಗುಗೊಳಿಸಿತು. ನಗಾರಿ ವಾದನದೊಂದಿಗೆ ಪಟ್ಟದ ಕುಣಿತಕ್ಕೆ ಹೆಜ್ಜೆ ಹಾಕಿದ ಕಲಾ ತಂಡಗಳೊಂದಿಗೆ ನೆರೆದಿದ್ದ ಪ್ರೇಕ್ಷಕ ಸಮೂಹ ಹೆಜ್ಜೆಗೂಡಿಸಿತು.

ಗಂಗೋತ್ರಿ ಆವರಣದಲ್ಲೆಲ್ಲಾ ಪ್ರತಿಧ್ವನಿಸುತ್ತಿದ್ದ ಕನ್ನಡದ ಹಾಡುಗಳಿಗೆ ಯುವಕ, ಯುವತಿಯರು ಹುಚ್ಚೆದ್ದು ಕುಣಿದರು, ಕಲಾವಿದರ ನೃತ್ಯ ಭಂಗಿಗಳು ಸಂಭ್ರಮಕ್ಕೆ ಕಿಚ್ಚು ಹಚ್ಚಿತು. ರಾಜ್ಯದ ವಿವಿಧ ಭಾಗಗಳಿಂದ ಸುಮಾರು 59 ತಂಡಗಳು ವಿಭಿನ್ನ ವಿಷಯದಲ್ಲಿ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಂಡರು.

ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪಂಚ ಗ್ಯಾರಂಟಿ ಯೋಜನೆಗಳು ಜನ ಸಮೂಹಕ್ಕೆ ಹೇಗೆ ■6ನೇ ಪುಟಕ್ಕೆ


ಬಯಲು ರಂಗಮಂದಿರದಲ್ಲಿ ಕನ್ನಡದ ಹಾಡುಗಳಿಗೆ ಹುಚ್ಚೆದ್ದು ಕುಣಿದ ಯುವಕ, ಯುವತಿಯರು.

ಮೈಸೂರು ಮಿತ್ರ ಶನಿವಾರ 13 ಸೆಪ್ಟೆಂಬರ್ 2025

ಸಮೀಕ್ಷೆಯಲ್ಲಿ ಬ್ರಾಹ್ಮಣ ಜಾತಿಗೆ ಒಂದೇ ಗಣಕ ಚಿಹ್ನೆ ನೀಡುವಂತೆ ಒತ್ತಾಯ

ಮೈಸೂರು, ಸೆ.12(ಜಿಎ)–ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮಗ್ರ ಬ್ರಾಹ್ಮಣ ಜಾತಿಗೆ, ಒಂದೇ ಗಣಕ ಚಿಹ್ನೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್‌ನ ರಾಜ್ಯಾಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದ ಮೂರ್ತಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ ಸಮೀಕ್ಷೆಯಲ್ಲಿ ಬ್ರಾಹ್ಮಣರೆಲ್ಲರನ್ನೂ ಒಂದೇ ಜಾತಿಯೆಂದು ಪರಿಗಣಿಸಬೇಕು. ಆದರೆ, ತಮ್ಮ ಪ್ರಕಟಣೆಯಲ್ಲಿ ಬ್ರಾಹ್ಮಣರನ್ನು 45ಕ್ಕೂ ಹೆಚ್ಚು ಉಪಜಾತಿಗಳನ್ನಾಗಿ ವರ್ಗೀಕರಿಸಿ ದತ್ತಾಂಶ ಸಂಗ್ರಹಣೆ ಮಾಡಲು ಉದ್ದೇಶಿಸಲಾಗಿದೆ. ಗಾಯತ್ರಿ ಮಂತ್ರದ ಸೂತ್ರದಡಿ ಬರುವ ಎಲ್ಲಾ ಬ್ರಾಹ್ಮಣರನ್ನು ಬ್ರಾಹ್ಮಣ ಎಂಬ ಏಕಜಾತಿಯಡಿ ವರ್ಗೀಕರಿಸಬೇಕು ಎಂದು ಆಗ್ರಹಿಸಿದರು.

ಮುಸ್ಲಿಂ ಬ್ರಾಹ್ಮಣ, ಕ್ರಿಶ್ಚಿಯನ್ ಬ್ರಾಹ್ಮಣ ಮುಂತಾದವರನ್ನು ಸೇರಿಸಬಾರದು. ಸಮೀಕ್ಷೆಯಲ್ಲಿ ಬ್ರಾಹ್ಮಣರಲ್ಲಿಯೇ ಉಪಜಾತಿಗಳನ್ನು ಬೇರೆ ಬೇರೆಯೆಂದು ಪರಿಗಣಿಸಿ, ಅವುಗಳನ್ನು ವಿಭಾಗಿಸದೇ, ಪ್ರತಿಯೊಂದು ಉಪಜಾತಿಗೆ ಪ್ರತ್ಯೇಕ ಗಣಕ ಚಿಹ್ನೆ ನೀಡದೇ, ಸಮಗ್ರ ಬ್ರಾಹ್ಮಣ ಜಾತಿಯನ್ನು ಒಂದೇ ಎಂದು ಪರಿಗಣಿಸಿ, ಎಲ್ಲ ಉಪಜಾತಿಗಳಿಗೆ ಒಂದೇ ಗಣಕ ಚಿಹ್ನೆ ನೀಡಬೇಕು ಎಂದರು.

ಆಯೋಗವು ಸಮೀಕ್ಷೆಯಲ್ಲಿ ದತ್ತಾಂಶ ಸಂಗ್ರಹಣೆ ಮಾಡುವಾಗ, ಬ್ರಾಹ್ಮಣ ಉಪಜಾತಿಗಳ ದತ್ತಾಂಶವನ್ನು ಬೇರೆ ಬೇರೆ ಗಣಕ ಚಿಹ್ನೆಗಳನ್ನು ನೀಡಿ ಸಂಗ್ರಹಿಸಿದರೂ, ಸರ್ಕಾರಕ್ಕೆ ವರದಿ ನೀಡುವಾಗ 45 ಉಪಜಾತಿಗಳ ಜನಸಂಖ್ಯೆಯ ದತ್ತಾಂಶವನ್ನು ಏಕೀಕರಿಸಿ, ಒಂದು ಸಮಗ್ರ ಜಾತಿಗೆ ಸಂಬಂಧಿಸಿದ ಜನಸಂಖ್ಯೆಯ ಸಮಗ್ರ ಮತ್ತು ವಸ್ತುನಿಷ್ಠ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಜಿಲ್ಲಾಧ್ಯಕ್ಷ ಕಡಕೋಳ ಜಗದೀಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆಆರ್. ಸತ್ಯನಾರಾಯಣ್, ಮಹಿಳಾ ವಿಪ್ರ ಮುಖಂಡರಾದ ವತ್ಸಲ ನಾಗರಾಜ್ ಉಪಸ್ಥಿತರಿದ್ದರು.

ಸಂಭ್ರಮಾಚರಣೆ



ಕನ್ನಡ ಚಿತ್ರರಂಗದ ಜೀವಮಾನದ ಸಾಧನೆಗಾಗಿ ಕರ್ನಾಟಕ ರತ್ನ ಪ್ರಶಸ್ತಿಗೆ ದಿವಂಗತ ಡಾ. ವಿಷ್ಣುವರ್ಧನ್ ಹಾಗೂ ಬಿ.ಸರೋಜಾದೇವಿ ರವರು ಭಾಜನರಾದ ಪ್ರಯುಕ್ತ ಗಾಂಧಿ ವೃತ್ತದಲ್ಲಿ ಕನ್ನಡ ಬಳಗದ ವತಿಯಿಂದ ಸಿಹಿ ವಿತರಣೆ ಮಾಡುವ ಮೂಲಕ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ. ರವಿ, ನಿರ್ದೇಶಕರಾದ ಪಡುವಾರಹಳ್ಳಿಯ ಎಂ ರಾಮಕೃಷ್ಣ, ಜಿ.ನಿರಂಜನ್, ಆರ್.ಸೋಮಣ್ಣ ಉಪಸ್ಥಿತರಿದ್ದರು.

ಎಸ್. ಶ್ರೇಯಸ್ ರಾಜ್ಯ ಮಟ್ಟಕ್ಕೆ ಆಯ್ಕೆ

ಮೈಸೂರು, ಸೆ. 12– ಮೈಸೂರಿನ ಶ್ರೀ ಸತ್ಯಸಾಯಿ ಬಾಬಾ ಪದವಿ ಪೂರ್ವ ಕಾಲೇಜಿನ



ಪ್ರಥಮ ಪಿಯುಸಿ ವಿದ್ಯಾರ್ಥಿ ಎಸ್. ಶ್ರೇಯಸ್ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ 1500 ಮೀ ಫ್ರೀ ಸ್ಟೈಲ್ ನಲ್ಲಿ ಚಿನ್ನದ ಪದಕ, 100 ಮೀ ಬ್ರೆಸ್ಟ್ ಸ್ಟ್ರೋಕ್ ಮತ್ತು 50 ಮೀ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಗಳಲ್ಲಿ ಬೆಳ್ಳಿ ಪದಕಗಳನ್ನು ಗಳಿಸುವ ಮೂಲಕ ಮೂರು ವಿಭಾಗದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕಾಲೇಜಿನ ಪ್ರಾಂಶುಪಾಲ ತ್ರಿಮೂರ್ತಿ, ಚೇರ್ಮನ್ ಎಂ.ಎನ್.ಸುಂದರೇಶನ್, ಗೌರವ ಕಾರ್ಯದರ್ಶಿ ಶ್ರೀಮತಿ ಜಿ.ಎನ್.ಎಸ್. ರಾಜೇಶ್ವರಿ, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಏಷ್ಯಾಕಪ್–2025: ಕ್ರಿಕೆಟ್ ಶಿಶು ಓಮನ್ ವಿರುದ್ಧ ಪಾಕ್‌ಗೆ ಜಯ



ದುಬೈ, ಸೆ.12– ಮೊಹಮ್ಮದ್ ಹ್ಯಾರೀಸ್ ಅವರ ಅರ್ಧಶತಕದ ನೆರವಿನಿಂದ ಪಾಕಿಸ್ತಾನ ಕ್ರಿಕೆಟ್ ಶಿಶು ಒಮನ್ ವಿರುದ್ಧ 93 ರನ್‌ಗಳ ಭರ್ಜರಿ ಜಯ ಗಳಿಸಿದೆ.

ಇಲ್ಲಿನ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿತು. 161 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಒಮನ್ 16.4 ಓವರ್‌ಗಳಲ್ಲಿ 67 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು.

ಪಾಕಿಸ್ತಾನದ ಪರ ಮೊಹಮ್ಮದ್ ಹ್ಯಾರಿಸ್ 3 ಸಿಕ್ಸ್, 7 ಬೌಂಡರಿ ಒಳಗೊಂಡ 66 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಸಾಹಿಬ್‌ಜಾದ್ ಫರ್ಹಾನ್ 29, ಫಖಾರ್ ಜಮಾನ್ 23, ಮೊಹಮ್ಮದ್ ನವಾಜ್ 19, ಹಸನ್ ನವಾಜ್ 9 ರನ್ ಗಳಿಸಿದರು. ಒಮನ್ ಪರ ಶಾ ಫೈಸಾಲ್, ಆಮಿರ್ ಕಲೀಮ್ ತಲಾ 3, ಮೊಹಮ್ಮದ್ ನದೀಂ 1 ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ ಒಮನ್ ಯಾವ ಹಂತದಲ್ಲೂ ಪಾಕಿಸ್ತಾನದ ಬೌಲಿಂಗ್ ಅನ್ನು ದಿಟ್ಟವಾಗಿ ಎದುರಿಸುವ ಪ್ರಯತ್ನ ಮಾಡಲೇ ಇಲ್ಲ. ತಂಡದ ಪರ ಹಮ್ಮದ್ ಮಿರ್ಜಾ 23 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸ್ ಒಳಗೊಂಡ 27, ಶಕೀಲ್ ಅಹ್ಮದ್ 10, ಆಮೀರ್ ಕಲೀಂ 13 ರನ್ ಗಳಿಸಿದ ರಾದರೂ, ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ಪಾಕಿಸ್ತಾನದ ಪರ ಸಯೀಮ್ ಅಯೂಬ್, ಸೂಫಿಯಾನ್ ಮುಕೀಂ ಮತ್ತು ಫಹೀಂ ಅಶ್ರಫ್ ತಲಾ 2, ಶಾಹಿನ್ ಶಾ ಅಫ್ರಿದಿ, ಅಬ್ರಾರ್ ಅಹ್ಮದ್ ಮತ್ತು ಮೊಹಮ್ಮದ್ ನವಾಝ್ ತಲಾ ಒಂದೊಂದು ವಿಕೆಟ್ ಪಡೆದರು. ಮೊಹಮ್ಮದ್ ಹ್ಯಾರಿಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಿಧನ

ಚೊಟ್ಟಂಗಡ ರಿಕ್ಕಿ ಸೋಮಣ್ಣ



ಮೈಸೂರು, ಸೆ. 12– ಮೈಸೂರಿನ ಜೆ.ಪಿ. ನಗರ ನಿವಾಸಿ ದಿವಂಗತ ಚೊಟ್ಟಂಗಡ ನಂಜಪ್ಪ ಅವರ ಪುತ್ರ ಚೊಟ್ಟಂಗಡ ರಿಕ್ಕಿ ಸೋಮಣ್ಣ (59) ಶುಕ್ರವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೂಲತಃ ಕೊಡಗಿನ ಬಿರುನಾಣಿಯವರಾದ ಇವರು, ತಾಯಿ ಚೊಟ್ಟಂಗಡ ಪಾರ್ವತಿ (ಉಡಿಯಂಡ), ಸಹೋದರ ರಾಬಿನ್ ತಿಮ್ಮಯ್ಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಎಂ ಯೋಗೀಶ್ವರಿ



ಮೈಸೂರು, ಸೆ. 12– ಜೆಎಸ್‌ಎಸ್ ಕಾಲೇಜು ನಿವೃತ್ತ ಅಧೀಕ್ಷಕ ಮಂಜೇಗೌಡ ಅವರ ಪತ್ನಿ ಎಲ್‌ಐಸಿ ಹಿರಿಯ ವಿಮಾ ಪ್ರತಿನಿಧಿ ಶ್ರೀಮತಿ ಎಂ ಯೋಗೀಶ್ವರಿ (54) ಶುಕ್ರವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಚನ್ನರಾಯಪಟ್ಟಣ ತಾಲೂಕು ಸೋಸಲಗೆರೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ನಾರಾಯಣ್



ಮೈಸೂರು, ಸೆ.12– ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ನಿವೃತ್ತ ಶಾಖಾ ವ್ಯವಸ್ಥಾಪಕ ಪಿ.ನಾರಾಯಣ್ (75) ಅವರು ಶುಕ್ರವಾರ ನಗರದ ಹುಲ್ಲಿನಬೀದಿಯ ಎರಡನೇ ಕ್ರಾಸ್‌ನ ಸ್ವಗೃಹದಲ್ಲಿ ನಿಧನರಾದರು. ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದು, ಅಂತ್ಯಕ್ರಿಯೆಯು ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಟಂಬದ ಮೂಲಗಳು ತಿಳಿಸಿವೆ. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ, ನಿರ್ದೇಶಕ ಪಡುವಾರಹಳ್ಳಿಯ ಎಂ ರಾಮಕೃಷ್ಣ ಹಾಗೂ ನೌಕರರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ರೈತರ ಬೆಳೆಗೆ ಮಾರುಕಟ್ಟೆಯ ಕನಿಷ್ಠ ಬೆಲೆಗಿಂತ ಕಡಿಮೆ ದರ ನಿಗದಿಪಡಿಸುವ ವರ್ತಕರ ಕ್ರಮ ಅಪರಾಧ

● ಈ ಸಂಬಂಧ ಕಾನೂನು ರಚನೆ ಅನಿವಾರ್ಯ: ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಪ್ರತಿಪಾದನೆ ● ಕೃಷಿ ಉತ್ಪಾದನೆ ಮಾರುಕಟ್ಟೆಯಲ್ಲಿ ಕಾನೂನು ಕುರಿತ ವಿಚಾರ ಸಂಕಿರಣ

ಮೈಸೂರು, ಸೆ.12(ಎಂಟಿವೈ)– ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯ ಕನಿಷ್ಠ ಬೆಲೆಗಿಂತ ಕಡಿಮೆ ದರ ನಿಗದಿ ಮಾಡುವ ವರ್ತಕರ ಕ್ರಮವನ್ನು ಅಪರಾಧ ಎಂದು ಪರಿಗಣಿಸುವ ಕಾನೂನು ರಚನೆ ಮಾಡುವ ಅವಶ್ಯಕತೆ ಇದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆಯಲ್ಲಿ ಶುಕ್ರವಾರ ನಡೆದ 'ಕೃಷಿ ಉತ್ಪಾದನೆ ಮಾರುಕಟ್ಟೆಯಲ್ಲಿ ಕಾನೂನು' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಮಂತ ವರ್ಗ ಹಾಗೂ ಉಳ್ಳವರು ಮಾರುಕಟ್ಟೆಯಲ್ಲಿ ನಿಗದಿತ ಬೆಲೆಗಿಂತ ಹೆಚ್ಚು ಹಣ ನೀಡಿ ತಮಗೆ ಬೇಕಾದ ಪದಾರ್ಥಗಳನ್ನು ಖರೀದಿ ಮಾಡುವುದನ್ನು ಅಪರಾಧ ಎಂದು ಹೇಳಿ ಕ್ರಮ ಕೈಗೊಳ್ಳುವ ವ್ಯವಸ್ಥೆ ನಮ್ಮಲ್ಲಿದೆ. ಅದೇ ಮಾದರಿಯಲ್ಲಿ ನಿಗದಿತ ಬೆಲೆಗಿಂತ ಕಡಿಮೆ ಬೆಲೆ ನಿಗದಿ ಮಾಡುವ ವರ್ತಕರ ವಿರುದ್ಧವೂ ಕ್ರಮ ಕೈಗೊಳ್ಳಬೇಕಾಗಿದೆ. ರೈತರು ಬೆಳೆದ ಉತ್ಪನ್ನಗಳ ವಿಚಾರದಲ್ಲೂ ಇಂತಹ ಕಾನೂನು ರಚನೆಯಾಗಬೇಕು ಎಂದರು.

ರೈತರು ಬೆಳೆದ ಬೆಳೆಯನ್ನು ಖರೀದಿ ಮಾಡುವ ವರ್ತಕರು ಡಿಜಿಟಲ್ ವಿಧಾನದಲ್ಲಿ ರೈತನಿಗೆ ಹಣ ಪಾವತಿ ಮಾಡುವ ವ್ಯವಸ್ಥೆ ಜಾರಿಯಾಗಬೇಕು. ಇದರಿಂದ ವರ್ತಕರು ಕಪ್ಪು ಹಣ ಚಲಾವಣೆ ಮಾಡುವುದು ತಪ್ಪುತ್ತದೆ. ರೈತನಿಗೆ 1000 ರೂ ನೀಡಿ ವರ್ತಕರು ತಮ್ಮ ಬಿಲ್ ಬುಕ್‌ನಲ್ಲಿ ತಮಗೆ ಬೇಕಾದಷ್ಟು ಬೆಲೆಯನ್ನು ನಮೂದಿಸುವ ಅವಕಾಶಗಳೂ ಇರುತ್ತವೆ. ಹೀಗಾಗಿ ಡಿಜಿಟಲ್ ಪೇಮೆಂಟ್‌ಗೆ ಒತ್ತು ನೀಡಬೇಕು. ಆಗ ರೈತರಿಗೂ ತಮಗೆ ಎಷ್ಟು ಹಣ ದೊರೆಯಿತು ಎಂದು ತಿಳಿಯುತ್ತದೆ. ವರ್ತಕರಿಂದ ವಂಚನೆಗೆ ಒಳಗಾಗುವುದು ತಪ್ಪುತ್ತದೆ ಎಂದು ತಿಳಿಸಿದರು.



ಮೈಸೂರಿನ ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆಯಲ್ಲಿ ಶುಕ್ರವಾರ ನಡೆದ 'ಕೃಷಿ ಉತ್ಪಾದನೆ ಮಾರುಕಟ್ಟೆಯಲ್ಲಿ ಕಾನೂನು' ಕುರಿತ ವಿಚಾರ ಸಂಕಿರಣವನ್ನು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು.

ರೈತರು ತಮ್ಮ ಬೆಳೆಗೆ ತಾವೇ ದರವನ್ನು ನಿಗದಿ ಮಾಡುವ ದಿನ ಬಂದಾಗ ಮಾತ್ರ ರೈತರ ಕಲ್ಯಾಣವಾಗುತ್ತದೆ. ಬ್ರ್ಯಾಂಡೆಡ್ ಶೂ, ಬೊಂಬೆ ಮಾಡುವವರು ದರ ನಿಗದಿ ಮಾಡುತ್ತಾರೆ. ಆದರೆ, 500 ಕ್ವಿಂಟಾಲ್ ರಾಗಿ, ಜೋಳ ಬೆಳೆದ ರೈತ ತನ್ನ ಉತ್ಪನ್ನಕ್ಕೆ ಬೆಲೆ ನಿಗದಿ ಮಾಡುವ ಸಾಮರ್ಥ್ಯ, ಶಕ್ತಿ, ಅಧಿಕಾರ ಇಲ್ಲ. ಆದ್ದರಿಂದ ರೈತರೇ ಬೆಲೆ ನಿರ್ಧಾರ ಮಾಡುವ ವ್ಯವಸ್ಥೆ ಸೃಷ್ಟಿಯಾಗಬೇಕು. ಇದರ ವಿಚಾರವಾಗಿ ಕಾನೂನು ರಚನೆಯಾಗಬೇಕು ಎಂದರು.

ರೈತ ಉತ್ಪಾದನಾ ಮಾರುಕಟ್ಟೆ ಎನ್ನುವುದು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕ್ಷೇತ್ರವಾಗಿದೆ. ಆರ್‌ಬಿಐ ಅಧ್ಯಯನದ ವರದಿಯ ಪ್ರಕಾರ ರೈತರು ಬೆಳೆದ ಬೆಳೆಯು ಕೊನೆಯ ಗ್ರಾಹಕನಿಗೆ ಮುಟ್ಟಿದಾಗ ಇರುವ ಬೆಲೆಗೂ, ರೈತ ನೀಡಿದಾಗ ಇದ್ದ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇದೆ. ರೈತನಿಗೆ ಶೇ.33ರಷ್ಟು ಮಾತ್ರ ಬೆಲೆ ಸಿಗುತ್ತಿದೆ.ಇನ್ನು ಮಿಕ್ಕಿದ್ದು ವರ್ತಕರು, ಮಾರಾಟಗಾರರ ಪಾಲಾಗುತ್ತಿದೆ. ಇನ್ನು ಕೊಳೆತು ಹೋಗುವ ತರಕಾರಿ, ಪದಾರ್ಥಗಳಿಗೆ ಇದಕ್ಕಿಂತಲೂ ಕಡಿಮೆ ಸಿಗುವ ಸಂಭವವೇ ಜಾಸ್ತಿ ಇರುತ್ತದೆ ಎಂದು ಅವರು ವಿಷಾದಿಸಿದರು.

ಮಾನವ ಹಕ್ಕು ಆಗಬೇಕು: ರೈತರು ಬೆಳೆದ ಪದಾರ್ಥಗಳಿಗೆ ಸೂಕ್ತ ಬೆಲೆ ದೊರಕಬೇಕಾಗಿರುವುದು ಮಾನವ ಹಕ್ಕು ಆಗಬೇಕು. ವಿದೇಶದಲ್ಲಿ ಸಮರ್ಪಕ ರಸ್ತೆಗಳು, ಪ್ರವಾಸೋದ್ಯಮ, ವೀಸಾ ಕೂಡ ಮಾನವ ಹಕ್ಕಿನ ವ್ಯಾಪ್ತಿಗೆ ಬರುತ್ತದೆ.ಅಂತಹದರಲ್ಲಿ ನಮ್ಮ ದೇಶದಲ್ಲಿ ರೈತ ಬೆಳೆದ ಬೆಳೆಗೆ ಬೆಲೆ ಬರಲಿಲ್ಲ ಎಂದರೆ ಅದು ಹಕ್ಕಿಗೆ ಚ್ಯುತಿ ತಂದಂತೆ ಎಂದರು. ನಮ್ಮ ರೈತ ಮಾರುಕಟ್ಟೆ ಕಾನೂನುಗಳು ಸಮಸ್ಯೆಯ ಬೇರುಗಳನ್ನು ಸ್ಪರ್ಶಿಸುವಂತೆ ಇಲ್ಲ.ಶ್ರೀಮಂತರನ್ನು ರಕ್ಷಿಸುತ್ತವೆ.ದೇಶದ ಆಸ್ತಿಯನ್ನು ರಕ್ಷಿಸುವ ರೈತನಿಗೆ ಅನುಕೂಲವಾಗುವಂತೆ ರೂಪಿತವಾಗಿಲ್ಲ. ವಿರುದ್ಧ ದಿಕ್ಕಿನಲ್ಲಿ ಸಾಗುತ್ತಾ ವ್ಯಾಪಾರಸ್ಥರಿಗೆ ಬೇಕಾದಂತೆ ಇವೆ ಎಂದರು.

ಎಪಿಎಂಸಿಯಲ್ಲಿ ಸರ್ಕಾರವು ಸ್ವಲ್ಪ ನಿಯಂತ್ರಣ ಇಟ್ಟುಕೊಂಡು ರೈತರಿಗೆ ವರ್ತಕರಿಂದ ಸಕಾಲದಲ್ಲಿ ಹಣ ಪಾವತಿ ಮಾಡಿಸಲಾಗುತ್ತಿತ್ತು. ಆದರೆ ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಮೂರು ಕಾಯ್ದೆಗಳು ಮಾರುಕಟ್ಟೆ ವ್ಯವಸ್ಥೆಯನ್ನು ನೆಲಸಮ ಮಾಡಲು ಹೊರಟಿತ್ತು. ದೊಡ್ಡ ಹೋರಾಟಗಳು ನಡೆದ ಮೇಲೆ ಸರ್ಕಾರ ಬಗ್ಗಿತು ಎಂದರು.

ಮಸೂದೆ ರೂಪಿಸಿ: ಕಿಲ್ಪರ್ ಸಂಸ್ಥೆಯ ವತಿಯಿಂದ ಈಗಾಗಲೇ ನೂರು ಮಸೂದೆಯನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ನಡೆದಿರುವ ವಿಚಾರ ಸಂಕಿರಣದ ವಿಷಯವಾಗಿಯೂ ಕೂಡ ಮಸೂದೆಯನ್ನು ತಯಾರು ಮಾಡಿದರೆ, ಅಗತ್ಯ ಮುಂದಿನ ಕ್ರಮಗಳನ್ನು ತಗೆದುಕೊಳ್ಳಬಹುದು ಎಂದರು.

ವಿವಿಐಎಲ್‌ಎಸ್ ಕಾನೂನು ಶಿಕ್ಷಣ ಸಲಹೆಗಾರ ಪ್ರೊ.ಪಿ. ಈಶ್ವರ್ ಭಟ್ ದಿಕ್ಸೂಚಿ ಭಾಷಣ ಮಾಡಿದರು. ವಿವಿಇಟಿ ಕಾರ್ಯದರ್ಶಿ ವಿ.ಕವೀಶ್ ಗೌಡ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕಿಲ್ಪರ್ ನಿರ್ದೇಶಕ ಡಾ.ಸಿ.ಎಸ್.ಪಾಟೀಲ್, ಸಂಶೋಧನಾ ಮುಖ್ಯಸ್ಥ ಡಾ.ರೇವಯ್ಯ ಒಡೆಯರ್, ವಿವಿಐಎಲ್‌ಎಸ್ ನಿರ್ದೇಶಕ ಡಾ.ಎಸ್.ನಟರಾಜು ಉಪಸ್ಥಿತರಿದ್ದರು.

ಗಿರಿಜಾ ಕಲ್ಯಾಣ ನಾಟಕ ಪ್ರದರ್ಶನ

ಮೈಸೂರು, ಸೆ.12(ಜಿಎ)– ಮನಸು ರಂಗ ತಂಡದ ವತಿಯಿಂದ ಸೆ.13, 14ರಂದು ಕಿರುರಂಗ ಮಂದಿರದಲ್ಲಿ ಗಿರಿಜಾ ಕಲ್ಯಾಣ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾಟಕದ ನಿರ್ದೇಶಕ ಈ ವಿಷಯ ತಿಳಿಸಿ, ಕೃಷಿಗಾಗಿ ಸಾಲ ಮಾಡಿಕೊಂಡ ರೈತ ಆತ್ಮಹತ್ಯೆಗೆ ಶರಣಾದ ನಂತರ ಹೆಂಡತಿ ಸಾಲ ತೀರಿಸಲು ಪಡುವ ಕಷ್ಟದ ಜೀವನವನ್ನು ತೋರಿಸುವ ನಾಟಕ ಗಿರಿಜಾ ಕಲ್ಯಾಣ ವಾಗಿದ್ದು, ನಿರ್ದೇಶಕ ಬಿ.ಸುರೇಶ್ ಅವರ ಕೃತಿಯನ್ನು ಆಧರಿಸಿ ಈ ನಾಟಕ ಮಾಡಲಾಗುತ್ತಿದೆ. ನಾಟಕ ವೀಕ್ಷಿಸಲು ವಿಶೇಷ ಅತಿಥಿಗಳು ಭಾಗವಹಿಸುತ್ತಿದ್ದಾರೆ. ಸಂಗೀತವನ್ನು ಕೃಷ್ಣ ಚೈತನ್ಯ, ಬೆಳಕು ಕೃಷ್ಣಕುಮಾರ್, ರಂಗಸಜ್ಜಿಗೆಯನ್ನು ರಾಹುಲ್ ಮನೋಹರ್ ಹಾಗೂ ರಂಗ ಪರಿಕರವನ್ನು ಕೀರ್ತನ್, ನಿತಿನ್, ಪ್ರತಿಕ್ ಮಾಡಿದ್ದಾರೆ ಎಂದು ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ರವರು ಶುಕ್ರವಾರ ವಾರ್ಡ್ ನಂಬರ್ 65 ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಮಾಡಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಗೀತಾಶ್ರೀ ಯೋಗಾನಂದ, ವಾರ್ಡ್ ಅಧ್ಯಕ್ಷ ಸತೀಶ್ ಕುಮಾರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಜಯರಾಮ್, ವಾರ್ಡ್ ಉಸ್ತುವಾರಿ ಮನೋಜ್, ಮುಖಂಡರು ಗಳಾದ ಗಣೇಶ್ ರಾವ್, ಚೇತನ್, ರಾಜೇಶ್, ಗಿರೀಶ್ ಗೌಡ, ಸಿದ್ದರಾಜು, ಸುವರ್ಣ, ಚಂದ್ರು, ರವೀಂದ್ರ, ಸತೀಶ್ ಹಾಗೂ ಸ್ಥಳೀಯರು ಹಾಜರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.09.2025 ಶನಿವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಡಿಜಿಟಿಎಂ ಆಂಗ್ಲ ಮಾಧ್ಯಮ ಶಾಲೆ :** ಶಿಕ್ಷಕರ ದಿನಾಚರಣೆ, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಎನ್. ನರೇಂದ್ರ ಬಾಬು, ದಿಕ್ಸೂಚಿ ಭಾಷಣ : ಕಾರ್ಯದರ್ಶಿ ಎಂ.ವಿ. ತ್ಯಾಗರಾಜ್, ಪ್ರಾಸ್ತಾವಿಕ ನುಡಿ : ಶ್ರೀಮತಿ ಎಂ.ಸಿ. ರೂಪ, ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಬಿ. ಮಹದೇವ, ಸಂಗೀತ ನಿರ್ದೇಶಕ ವಿ. ಮನೋಹರ್, ಜನಪದ ಗಾಯಕ ಅಮ್ಮ ರಾಮಚಂದ್ರ, ರಂಗ ನಿರ್ದೇಶಕ ಕಿರಣ್ ಗಿರ್ಗಿ, ಸ್ಥಳ: ಶಾಲೆ ಆವರಣ, ವಿದ್ಯಾರಣ್ಯಪುರಂ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟ ನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ :** ಕ್ಲಾಸ್‌ರೂಮ್ ಟು ಕೆರಿಯರ್ ಕುರಿತು ಅಂತರರಾಷ್ಟ್ರೀಯ ಕಾರ್ಯಾಗಾರ, ಸ್ಥಳ: ಸಂಸ್ಥೆ ಆವರಣ, ಎಂ.ಜಿ. ರಸ್ತೆ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜವಳಿ ಮಂತ್ರಾಲಯ, ಭಾರತ ಸರ್ಕಾರ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಶ್ರೀ ಮಾಯಕಾರ ಗುರುಕುಲ :** ಗುರುಪಾದುಕಾ ಪೂಜೆ ಮತ್ತು ಜ್ಯೋತಿಷ್ಯ ವಾಸ್ತು ತರಗತಿ, ವಿದ್ಯಾರ್ಥಿಗಳಿಗೆ ಜ್ಯೋತಿಷ್ಯ ವಾಸ್ತುಶಾಸ್ತ್ರ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಸಭಾಂಗಣ, ಬೆಳಗ್ಗೆ 10 ರಿಂದ.

■ **ಶ್ರೀ ಶಾಲಿವಾಹನ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ಮಂಜುನಾಥ್, ಸ್ಥಳ: ಶ್ರೀ ರಾಮ ಕಲ್ಯಾಣ ಮಂದಿರ, ಕಾಳಿದಾಸ ರಸ್ತೆ, ವಿ.ವಿ. ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ವಾಣಿಜ್ಯ ತೆರಿಗೆ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ವಿ. ರಾಮು, ಸ್ಥಳ:ಹೋಟೆಲ್ ಮಾಲೀಕರ ಸಂಘದ ಶ್ರೀ ಕುತ್ತೆತ್ತೂರು ಸೀತಾರಾಮರಾವ್ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಮಾಣಿಕ್ಯ ಫಾರ್ಮ್ :** ಡಾ. ಪಿ. ಬೋರೇಗೌಡ ಅವರು ರಚಿಸಿರುವ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ, ಅಧ್ಯಕ್ಷತೆ : ಕರಾಮುವಿವಿ ಮಾಜಿ ಕುಲಪತಿ ಡಾ.ಎನ್.ಎಸ್. ರಾಮೇಗೌಡ, ಮುಖ್ಯ ಅತಿಥಿಗಳು : ವಿಧಾನಸಭೆ ಸಭಾಪತಿ ಯು.ಟಿ. ಖಾದರ್, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ :** ಸ್ವಾತಂತ್ರ್ಯ ಹೋರಾಟಗಾರ ಟಿ.ಎಸ್. ಸುಬ್ಬಣ್ಣನವರ 34ನೇ ವರ್ಷದ ಸಂಸ್ಮರಣೆ, ಅಧ್ಯಕ್ಷತೆ : ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ನುಡಿನಮನ : ವಿಶ್ರಾಂತ ಹಿರಿಯ ಪ್ರಾಧ್ಯಾಪಕ ಡಾ. ಎಸ್. ರಂಗನಾಥಯ್ಯ, ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್. ಚನ್ನಬಸವಣ್ಣ, ಪ್ರಾಸ್ತಾವಿಕ ನುಡಿ : ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ. ಜಿ.ಸಿ. ರಾಜಣ್ಣ, ಸ್ಥಳ: ವಿದ್ಯಾಸಂಸ್ಥೆ ಆವರಣ, ವಿದ್ಯಾರಣ್ಯಪುರಂ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ದಸರಾ ಚಲನಚಿತ್ರೋತ್ಸವ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಸಚಿವ ಕೆ. ವೆಂಕಟೇಶ್, ಶಾಸಕ ಸಿ. ಅನಿಲ್ ಕುಮಾರ್, ಚೆಸ್ಕಾಂ ಅಧ್ಯಕ್ಷ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಕೆ. ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಸ್ಥಳ: ನೆಲ ಮಹಡಿ, ಮಾಲ್ ಆಫ್ ಮೈಸೂರು, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.

■ **ಹಿಂದುಳಿದ ವರ್ಗಗಳ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಡಿ. ಶ್ರೀನಿವಾಸ್, ಸ್ಥಳ: ಶ್ರೀ ಚಂದ್ರಮೌಳೇಶ್ವರಸ್ವಾಮಿ ಪ್ರಾರ್ಥನಾ ಮಂದಿರ, ಶಿವರಾಂಪೇಟೆ, ಬೆಳಗ್ಗೆ 11ಕ್ಕೆ.

■ **ವಿಶ್ವ ಮಾನವ ಪತ್ತಿನ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ನರಸೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಸೀತಾ ರಾಘವ ಪ್ರಾರ್ಥನಾ ಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಶಿಕ್ಷಕರ ದಿನಾಚರಣೆ ಹಾಗೂ ಸಾಧಕ ಶಿಕ್ಷಕರಿಗೆ ಡಾ. ರಾಧಾಕೃಷ್ಣನ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ನಟರಾಜ ಜೋಯಿಸ್, ಪ್ರಧಾನ ಭಾಷಣ : ಶ್ರೀ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಈ. ರಘು, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ, ಡಾ. ಲೋಕೇಶ್, ಶ್ರೀಷಾ ಭಟ್, ಸಾಲುಂಡಿ ದೊರೆಸ್ವಾಮಿ, ನಾಲಾ ಬೀದಿ ರವಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ, ಕಾರ್ಯಕ್ರಮ – 897, ಕಥೆ ಹೇಳುವವರು: ಪುನೀತ್ ಜಿ, ಟೆಕ್ ಲೀಡ್, ಕಾಗ್ನಿಜೆಂಟ್ ಟೆಕ್ನಾಲಜಿ ಸೊಲ್ಯೂಷನ್ಸ್ ಹಾಗೂ ಅಂಕಣಕಾರರು, ಬೆಂಗಳೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಲೋಕ ಶಂಕರ ಏಕವ್ಯಕ್ತಿ ತಾಳ ಮದ್ದಲೆ, ಕವಿ : ಶ್ರೀ ಗಜಾನನ ಈಶ್ವರ ಹೆಗಡೆ, ಪ್ರಸ್ತುತಿ : ದಿವಾಕರ ಹೆಗಡೆ ಕೆರೆಹೊಂಡ, ಭಾಗವತರು : ಅನಂತ ಹೆಗಡೆ ದಂತಳಿಗೆ, ಮದ್ದಲೆ : ಮಂಜುನಾಥ ಗುಡ್ಡೆದಿಂಬ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಬುದ್ಧಿದಾನಂದ ಅವರಿಂದ ನಾರದ ಭಕ್ತಿ ಸೂತ್ರಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಎ.ವಿ. ದತ್ತಾತ್ರೇಯ ಅವರಿಂದ ವೇಣುವಾದನ, ವಿದ್ವಾನ್ ಎಂ.ಆರ್. ಶ್ರೀಕಾಂತ ಪಿಟೀಲು, ವಿದ್ವಾನ್ ಪ್ರದ್ಯುಮ್ನ ಕೆ. ಪ್ರಸಾದ್–ಮ್ಯಾಂಡೋಲಿನ್, ವಿದ್ವಾನ್ ಎನ್. ಕುಮಾರ್–ಮೃದಂಗ, ವಿದ್ವಾನ್ ಎಂ.ಎಸ್. ಲಕ್ಷ್ಮೀಕಾಂತ್–ಘಟಂ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಆರ್. ಸುಧಾ, ಕೆ.ಪಿ.ರೇವತಿ ಹಾಗೂ ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಡಾ. ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ –ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ–ಮಳೆ ಬಂದ ಆ ರಾತ್ರಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ:ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಇಲಾಖೆಯ ಅಭಿವೃದ್ಧಿ ಯೋಜನೆಗಳು ಈ ಕುರಿತು ಚಾಮರಾಜನಗರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಎಸ್.ಎಸ್. ಅಬಿದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಧನಿ ಗುಂಡೇಚಾ– ಹಾಡುಗಾರಿಕೆ ದ್ರುಪದ್ ಧಮಾರ್

ಬಾಲಕಿಯ ದುರಂತ ಸಾವಿನ ನಡುವೆ ಬದುಕಿದ್ದವರಿಗೂ ಬವಣೆ ತಂದೊಡ್ಡಿದ ಖಾಸಗಿ ಆಸ್ಪತ್ರೆ, ಆಂಬುಲೆನ್ಸ್; ಆಡಳಿತ ವ್ಯವಸ್ಥೆ

ಮೈಸೂರಲ್ಲಿ ಮತ್ತೊಂದು ಮಾನವೀಯತೆ ಮರೆಯಾದಂತಹ ಪ್ರಕರಣ ಬೆಳಕಿಗೆ

ಮೈಸೂರು, ಸೆ.12– ಅಪಘಾತದಿಂದ ಗಂಭೀರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಪುಟ್ಟ ಬಾಲಕಿ ದುರಾದೃಷ್ಟವಶಾತ್ ಬದುಕುಳಿಯಲಿಲ್ಲ. ಆದರೆ ಆಕೆಯ ದುರಂತ ಸಾವಿನೊಂದಿಗೆ ಮನುಕುಲದಲ್ಲಿ ಮಾನವೀಯತೆ ಮಣ್ಣಾಗಿರುವುದೂ ಅನಾವರಣಗೊಂಡಿದೆ.

ನಂಜನಗೂಡು ತಾಲೂಕು ಹೆಡತಲೆ ಗ್ರಾಮದ ಮಹೇಶ್ ಹಾಗೂ ರಾಣಿ ದಂಪತಿಯ ಐದು ವರ್ಷದ ಆದ್ಯಳ ದುರಂತ ಸಾವು ಹಾಗೂ ಆಕೆ ಜೀವನ್ಮರಣ ಸ್ಥಿತಿಯಲ್ಲಿದ್ದಾಗ ಆಸ್ಪತ್ರೆಗೆ ಹಣ ಕಟ್ಟಲು ದೊಡ್ಡಮ್ಮ ಬೀದಿಯಲ್ಲಿ ಬಿಕ್ಷೆ ಬೇಡುವ ದಯನೀಯ ಸ್ಥಿತಿಗೆ ಕಾರಣ ಯಾರು ಎಂಬ ಆತ್ಮಾವಲೋಕನ ಅವಶ್ಯವಾಗಿ ಆಗಬೇಕಿದೆ.

ಬದನವಾಳು ಗ್ರಾಮದ ಚಾಮರಾಜನಗರ–ನಂಜನಗೂಡು ಹೆದ್ದಾರಿಯಲ್ಲಿ ಕಳೆದ ಮಂಗಳವಾರ ಎರಡು ದ್ವಿಚಕ್ರ ವಾಹನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ತಂದೆ–ತಾಯಿಯೊಂದಿಗಿದ್ದ ಬಾಲಕಿ ಆದ್ಯ ಗಂಭೀರವಾಗಿ ಗಾಯಗೊಂಡಿದ್ದಳು. ಆಕೆಯನ್ನು ಮೈಸೂರಿನ ಬೃಂದಾವನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎರಡು ದಿನವಾದ ಬಳಿಕ ಮಗು ಉಳಿಯಲಿಲ್ಲ, 1.20 ಲಕ್ಷ ಬಿಲ್ ಪಾವತಿಸಿ ಮೃತದೇಹ ತೆಗೆದುಕೊಂಡು ಹೋಗುವಂತೆ ತಿಳಿಸಿದ್ದಾಗಿ ಮಗುವಿನ ದೊಡ್ಡಮ್ಮ ಗ್ರಾಮದಲ್ಲಿ ಬಿಕ್ಷೆ ಬೇಡಿ, 80 ಸಾವಿರ ಹಣ ಹೊಂದಿಸಿದ ದಯನೀಯ ವಿಡಿಯೋ ವೈರಲ್ ಆಗಿತ್ತು. ನಂತರ ಮಗು ಬದುಕಿದೆ ಎಂದು ಖಾಸಗಿ ಆಸ್ಪತ್ರೆಯಿಂದ ಚೆಲುವಾಂಬ ಮಕ್ಕಳ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ ತಡರಾತ್ರಿ ಮಗು ಕೊನೆಯುಸಿರೆಳೆಯಿತು ಎಂದು ಮಾಹಿತಿ



ಆದ್ಯ

ಬಂದಿತು. ಈ ಎಲ್ಲಾ ಘಟನಾವಳಿ ಸಮಾಜದಲ್ಲಿರುವ ಸಿನಿಮೀಯ ಮಾದರಿಯ ವಾಸ್ತವ ಪರಿಸ್ಥಿತಿಯಾಗಿದೆ.

ಆಂಬುಲೆನ್ಸ್ ಖಾಸಗಿ ಬುಕ್ಕಿಂಗ್: ಅಪಘಾತ ಸಂಭವಿಸಿದಾಗ ತಕ್ಷಣ 108 ಅಥವಾ 112 ಸಹಾಯವಾಣಿಗೆ ಕರೆ ಮಾಡಿ, ಆಂಬುಲೆನ್ಸ್ ನೆರವು ಪಡೆಯಲಾಗುತ್ತದೆ ಆದರೆ ಕೆಲ ಆಂಬುಲೆನ್ಸ್ ಸಿಬ್ಬಂದಿ, ನೊಂದವರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುತ್ತಾರೆ. ಗಾಯಗೊಂಡವರು ಅಥವಾ ಅವರ ಕಡೆಯವರನ್ನು ಏನೂ ಕೇಳದೆ, ಅವರ ಆರ್ಥಿಕ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳದೆ ನೇರವಾಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸುತ್ತಾರೆ. ಇದರ ಹಿಂದೆ ಉತ್ತಮ ಚಿಕಿತ್ಸೆ ಸಿಗಬೇಕೆಂಬ ಅಂತಃಕರಣಕ್ಕಿಂತ ಖಾಸಗಿ ಆಸ್ಪತ್ರೆಯವರೊಂದಿಗಿನ ಒಪ್ಪಂದವೇ ಪ್ರಮುಖ ಕಾರಣ. ಬಾಲಕಿ ಆದ್ಯಳ ಸಾವು ಹಾಗೂ ಆಕೆಯ ದೊಡ್ಡಮ್ಮಳ ದಯನೀಯ ಸ್ಥಿತಿಗೂ ಇದೇ ಕಾರಣವಿರಬಹುದು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೊದಲೇ ಚೆಲುವಾಂಬ ಮಕ್ಕಳ ಆಸ್ಪತ್ರೆಗೆ ಕರೆದೊಯ್ದಿದ್ದರೆ ಮಗು ಬದುಕುಳಿಯುತ್ತಿತ್ತು. ಚಿಕಿತ್ಸೆಗೆ ಬಿಕ್ಷೆ ಬೇಡುವ ದುಃಸ್ಥಿತಿಯೂ ಎದುರಾಗುತ್ತಿರಲಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಕೈಚೆಲ್ಲಿದಾಗ ಚಿಂತಾಜನಕ ಸ್ಥಿತಿಯಲ್ಲಿರುವ ಮಕ್ಕಳನ್ನು ಚೆಲುವಾಂಬ ಆಸ್ಪತ್ರೆಗೆ ಕರೆತಂದು ಉಳಿಸಿಕೊಂಡಿರುವ ಪ್ರಕರಣಗಳು ಸಾಕಷ್ಟಿವೆ. ಆಂಬುಲೆನ್ಸ್ ಸಿಬ್ಬಂದಿಗೆ ಇದೆಲ್ಲದರ ಅರಿವಿರುತ್ತದೆ. ಆದರೂ ಆದ್ಯಳನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದು ಏಕೆ?. ಕೊನೆಗೂ ಆಕೆಯನ್ನು ಚೆಲುವಾಂಬ ಆಸ್ಪತ್ರೆಗೆ ಸ್ಥಳಾಂತರಿಸಲಿಲ್ಲವೇ?. ಖಾಸಗಿ ಆಸ್ಪತ್ರೆಯವರು ನೀಡುವ ಹಣದ ಆಸೆಯಿಂದ ಬಡವರನ್ನು ಇಂತಹ ಸಂಕಷ್ಟಕ್ಕೆ ದೂಡುವುದು ಸರಿಯೇ? ಎಂದು ನೊಂದು ನುಡಿದಿದ್ದಾರೆ.

ಆಮಿಷಕ್ಕೆ ಅಮಾಯಕರು ಬಲಿ: ಕೆಲ ಖಾಸಗಿ ಆಸ್ಪತ್ರೆಗಳಲ್ಲಿ ಸೇವೆಗಿಂತ ಹಣಕ್ಕೆ ಆದ್ಯತೆ. ಇದಕ್ಕಾಗಿ ಉಚಿತ ಸೇವೆಯ ಆಂಬುಲೆನ್ಸ್ ಸಿಬ್ಬಂದಿಗೆ ಹಣದ ಆಮಿಷವೊಡ್ಡುತ್ತಾರೆ. ಕರೆತರುವಂತಹ ರೋಗಿಯ ಪರಿಸ್ಥಿತಿಗೆ ಅನುಗುಣವಾಗಿ ಕೆಲ ಆಸ್ಪತ್ರೆಗಳಲ್ಲಿ ಹಣ ನೀಡಲಾಗುತ್ತದೆ. ಮತ್ತಷ್ಟು ಆಸ್ಪತ್ರೆಗಳು ಒಂದು ಕೇಸ್‌ಗೆ ಇಂತಿಷ್ಟು ಎಂದು ನಿಗದಿಪಡಿಸಿರುತ್ತವೆ. ಆದ್ದರಿಂದ ಆಂಬುಲೆನ್ಸ್ ಸಿಬ್ಬಂದಿ, ರೋಗಿಗಳನ್ನು ನೇರವಾಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸುತ್ತಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಮಾನವೀಯತೆ ಮರೆಯಾಗಿದೆ: ಆಂಬುಲೆನ್ಸ್ ಸಿಬ್ಬಂದಿ ನಿಜವಾದ ಕಾಳಜಿಯಿಂದಲೇ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದರೆಂದು ತಿಳಿದರೂ ಅಲ್ಲಿನ ವೈದ್ಯರು ಹಾಗೂ ಆಡಳಿತ ಮಂಡಳಿಯವರು ಮಾನವೀಯತೆ ಮೆರೆಯಬೇಕು. ರೋಗಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಅವರು ತಮ್ಮ ಆಸ್ಪತ್ರೆ ವೆಚ್ಚ ಭರಿಸುವುದು ಕಷ್ಟ ಎಂದಾದರೆ ಆಂಬುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಡಬಹುದು. ಸರ್ಕಾರಿ ಆಸ್ಪತ್ರೆಯಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯ ಇಲ್ಲವೆಂದಾದರೆ ರೋಗಿಗಳ ಕಡೆಯವರನ್ನು ಕರೆದು ಅಲ್ಲಿನ ಚಿಕಿತ್ಸಾ ವೆಚ್ಚದ ಬಗ್ಗೆ ಮೊದಲೇ ತಿಳಿಸಬೇಕು. ಬಡವರಾದರೆ ಸಾಧ್ಯವಾದಷ್ಟು ರಿಯಾಯ್ತಿ ನೀಡುವ ಔದಾರ್ಯ ತೋರಬಹುದು. ಆದರೆ ಆದ್ಯಳ ಪ್ರಕರಣದಲ್ಲಿ ಹಣ ಕಟ್ಟದೆ ಶವ ನೀಡುವುದಿಲ್ಲ ಎಂದು ಹೇಳಿದ್ದರೆ ನಿಜಕ್ಕೂ ದುರ್ದೈವ.

ವಿಶ್ವಾಸ ಉಳಿಸಿಕೊಂಡಿಲ್ಲವೇ?: ಆಂಬುಲೆನ್ಸ್ ಸಿಬ್ಬಂದಿ ರೋಗಿಗಳನ್ನು ನೇರವಾಗಿ ಖಾಸಗಿ ಆಸ್ಪತ್ರೆಗಳಿಗೆ ಕರೆದೊಯ್ಯುತ್ತಾರೆ ಎಂದಾದರೆ ಅವರಿಗೆ ಸರ್ಕಾರಿ ಆಸ್ಪತ್ರೆಗಳ ಸೇವೆಯ ಬಗ್ಗೆ ವಿಶ್ವಾಸವಿಲ್ಲವೇ?. 108 ಆಂಬುಲೆನ್ಸ್ ಸೇವೆಯಲ್ಲಿ ನಿರ್ವಹಣೆ, ಮೇಲುಸ್ತುವಾರಿ ಸಮರ್ಪಕವಾಗಿಲ್ಲವೇ? ಸರ್ಕಾರಿ ಆಸ್ಪತ್ರೆಗಳಲ್ಲಿ ವಿಶ್ವಾಸ ಮೂಡಿಸುವಂತಹ ಸುಧಾರಣೆ ಸಾಧ್ಯವಾಗಿಲ್ಲವೇ? ರೋಗಿಗಳ ಕಡೆಯವರೇ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಿದರೆ ಆಂಬುಲೆನ್ಸ್ ಸಿಬ್ಬಂದಿ ಹಾಗೆಯೇ ಮಾಡಬೇಕಾಗುತ್ತದೆ. ಆದರೆ ತಾವೇ ಆ ನಿರ್ಧಾರ ಮಾಡಬಾರದೆಂಬ ನಿಯಮವಿಲ್ಲವೇ? ಆತಂಕ, ದುಃಖ, ದುಮ್ಮಾನದಲ್ಲಿರುವ ರೋಗಿಗಳ ಮನೆಯವರಿಂದ ಹಣ ಪಡೆಯುವ ಆಂಬುಲೆನ್ಸ್ ಸಿಬ್ಬಂದಿಗೆ ಏಕೆ ಎಚ್ಚರಿಸುತ್ತಿಲ್ಲ? ಇಂತಹ ಹತ್ತಾರು ಪ್ರಶ್ನೆಗಳು ಮೂಡುತ್ತವೆ. ಅಮಾಯಕ ಪುಟ್ಟ ಬಾಲಕಿಯ ದುರಂತ ಸಾವಿನಿಂದಾದೂ ಬದಲಾವಣೆ ಪ್ರಯತ್ನ ಆಗಬೇಕೆಂದು ಜನ ಮರುಕದಿಂದಲೇ ಬಯಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ನಿರಂತರವಾಗಿ ಚಿರತೆಗಳು ಪ್ರತ್ಯಕ್ಷ; ಅರಣ್ಯ ಇಲಾಖೆ ಕಟ್ಟೆಚ್ಚರ

● ಜನರ ಸುರಕ್ಷತೆಗೆ ಹಲವು ಕ್ರಮ ● ಸಂಜೆ 6ರಿಂದ ಬೆಳಗ್ಗೆ 6ರವರೆಗೆ ಬೆಟ್ಟಕ್ಕೆ ಪ್ರವೇಶ ನಿರ್ಬಂಧ



ಮೈಸೂರು, ಸೆ12(ಎಂಟಿವೈ)– ಚಾಮುಂಡಿ ಬೆಟ್ಟದ ರಸ್ತೆಯಲ್ಲಿ ಕಳೆದ ಒಂದು ತಿಂಗಳಿಂದ ಚಿರತೆ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಗಸ್ತು ಸಿಬ್ಬಂದಿ ನಿಯೋಜಿಸುವುದರೊಂದಿಗೆ, ಸುರಕ್ಷತೆ ದೃಷ್ಟಿಯಿಂದ ಸಾರ್ವಜನಿಕರಿಗೆ ಕೆಲ ನಿರ್ಬಂಧ ವಿಧಿಸಿದ್ದಾರೆ.

ಚಾಮುಂಡಿಬೆಟ್ಟದ ವಿವಿಧೆಡೆ ಆ.22ರಿಂದ ಚಿರತೆ ಪದೇ ಪದೇ ಕಾಣಿಸಿಕೊಳ್ಳುತ್ತಿದೆ. ದೇವಿಕೆರೆ ಭಾಗದಲ್ಲಿ ರಸ್ತೆ ಬದಿ ತಡೆಗೋಡೆ ಮೇಲೆ ಕುಳಿತು ದರ್ಶನ ನೀಡಿದ್ದರೆ, ಉತ್ತನಹಳ್ಳಿ ರಸ್ತೆಯಲ್ಲಿ ದೊಡ್ಡ ಚಿರತೆಯೊಂದು ವಾಹನ ಸವಾರರ ಕಣ್ಣಿಗೆ ಬಿದ್ದಿತ್ತು. ಅಲ್ಲದೆ, ಚಾಮುಂಡಿಬೆಟ್ಟದ ನಾಯಕರ ಬೀದಿಯಲ್ಲಿ ಚಿರತೆ ಬೀದಿ ನಾಯಿಯೊಂದರ ಮೇಲೆ ದಾಳಿ ನಡೆಸಿ, ಗಾಯಗೊಳಿಸಿತ್ತು. ಚಾಮುಂಡಿಬೆಟ್ಟದ ರಸ್ತೆಯಲ್ಲಿ ಪದೇ ಪದೆ ಕಾಣಿಸಿಕೊಳ್ಳುತ್ತಿರುವುದರಿಂದ ಬೆಟ್ಟದ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದರು.

ಚಿರತೆ ಹಾವಳಿಯಿಂದ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆತಂಕ ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಟ್ಟೆಚ್ಚರ ವಹಿಸಿದೆ. ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿದ್ದು, ಬೆಟ್ಟದ ರಸ್ತೆಗಳಲ್ಲಿ ಗಸ್ತು ತಿರುಗಲಾಗುತ್ತಿದೆ. ಆ ಮೂಲಕ ಚಿರತೆ ಚಲನವಲನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.

ಸಾರ್ವಜನಿಕರಿಗೆ ಸೂಚನೆ: ಚಿರತೆ ಜಾಡು ಪತ್ತೆಗೆ ಅರಣ್ಯ ಸಿಬ್ಬಂದಿ ನಿಯೋಜನೆ ಮಾಡಿರುವ ಬೆನ್ನಲ್ಲೇ ಸಾರ್ವಜನಿಕರು ಹಾಗೂ ಬೆಟ್ಟದ ನಿವಾಸಿಗಳಿಗೂ ಕೆಲ ಸಲಹೆ –ಸೂಚನೆ ನೀಡಲಾಗಿದೆ. ಮುಂಜಾನೆ ಹಾಗೂ ಸಂಜೆ ವೇಳೆ ಬೆಟ್ಟದ ರಸ್ತೆಯಲ್ಲಿ ಒಂಟಿಯಾಗಿ ಓಡಾಡದಂತೆ ಸೂಚನೆ ನೀಡಲಾಗಿದೆ. ಉತ್ತನಹಳ್ಳಿ ಕಡೆಯಿಂದ ಚಾಮುಂಡಿಬೆಟ್ಟಕ್ಕೆ ಬರುವ ಹಾಗೂ ಹೋಗುವ ರಸ್ತೆಯನ್ನು ಸಂಜೆ 6 ಗಂಟೆಯಿಂದ ಬೆಳಗ್ಗೆ 6 ಗಂಟೆವರೆಗೆ ಬಂದ್ ಮಾಡಲಾಗಿದ್ದು, ವಾಹನ ಹಾಗೂ ಜನ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಬೆಟ್ಟದ ನಿವಾಸಿಗಳು, ಮಕ್ಕಳು ಮತ್ತು ಜಾನುವಾರುಗಳ ಮೇಲೆ ನಿಗಾ ಇಡಬೇಕು. ಮನೆ ಸುತ್ತ ಮುತ್ತ ಇರುವ ಪೊದೆಗಳನ್ನು ತೆರವು ಮಾಡಬೇಕು. ಚಿರತೆ ಕಂಡು ಬಂದರೆ, ಯಾವುದೇ ಕಾರಣಕ್ಕೂ ಅದರ ಸಮೀಪ ಹೋಗಬಾರದು. ಚಿರತೆಯ ಚಲನ–ವಲನ ಕಂಡು ಬಂದರೆ ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸಲಹೆ ನೀಡಲಾಗಿದೆ.

ಧರ್ಮಸ್ಥಳದ ವಸತಿ ಗೃಹಗಳಲ್ಲಿ ನಾಲ್ವರ ಅಸಹಜ ಸಾವು

ತನಿಖೆ ನಡೆಸುವಂತೆ ಎಸ್‌ಐಟಿಗೆ ತಿಮರೋಡಿ ದೂರು

ಮಂಗಳೂರು: 2006ರಿಂದ 2010ರ ಅವಧಿಯಲ್ಲಿ ಧರ್ಮಸ್ಥಳದ ವಸತಿ ಗೃಹಗಳಲ್ಲಿ ಸಂಭವಿಸಿದ ನಾಲ್ವರ ಅಸಹಜ ಸಾವಿನ ಕುರಿತು ತನಿಖೆ ನಡೆಸುವಂತೆ ಸಾಮಾಜಿಕ ಕಾರ್ಯಕರ್ತ ಮಹೇಶ್ ಶೆಟ್ಟಿ ತಿಮರೋಡಿ ಅವರು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ಸಲ್ಲಿಸಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.



ಮಹೇಶ್ ಶೆಟ್ಟಿ

ಧರ್ಮಸ್ಥಳ ಗ್ರಾಮದ ಗಾಯತ್ರಿ, ಶರಾವತಿ ಮತ್ತು ವೈಶಾಲಿ ವಸತಿ ಗೃಹಗಳಲ್ಲಿ ನಡೆದ ಅಪರಿಚಿತರ ಸಾವಿನ ಕುರಿತು ಕಾನೂನು ಪ್ರಕ್ರಿಯೆಗೆ ಅನುಗುಣವಾಗಿ ತನಿಖೆ ನಡೆಸಿಲ್ಲ ಎಂದು ತಿಮರೋಡಿ ಆರೋಪಿಸಿದ್ದಾರೆ. ಮರಣೋತ್ತರ ಪರೀಕ್ಷೆ ಅಥವಾ ಪ್ರಥಮ ಮಾಹಿತಿ ವರದಿ ದಾಖಲಿಸದೆ ಮೃತರನ್ನು ಅಪರಿಚಿತ ವ್ಯಕ್ತಿಗಳು ಎಂದು ಘೋಷಿಸಲಾಗಿದೆ. ಅವರ ಶವಗಳನ್ನು ಸ್ಥಳೀಯ ಗ್ರಾಮ ಪಂಚಾಯಿತಿ ಮೂಲಕ ಹೂಳಲಾಗಿದೆ ಎಂದು ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ನಾಲ್ಕು ಪ್ರಕರಣಗಳಲ್ಲಿ ಅಸಹಜ ಮರಣ ವರದಿಗಳನ್ನು ಮಾತ್ರ ದಾಖಲಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯ ಮೂಲಕ ಪಡೆದ ದಾಖಲೆಗಳನ್ನು ದೂರಿನಲ್ಲಿ ಸಲ್ಲಿಸಲಾಗಿದ್ದು, ಎಫ್‌ಐಆರ್ ದಾಖಲಿಸಲು ಮತ್ತು ವಿವರವಾದ ತನಿಖೆಯನ್ನು ಪ್ರಾರಂಭಿಸುವಂತೆ ಮನವಿ ಮಾಡಲಾಗಿದೆ. ಅಸಹಜ ಅಥವಾ ಅನುಮಾನಾಸ್ಪದ ಸಾವುಗಳ ಕುರಿತು ಕಾನೂನು ಪ್ರಕಾರ ತನಿಖೆ ನಡೆದಿಲ್ಲ ಎಂದು ಅವರು ಆರೋಪಿಸಿದ್ದಾರೆ.

ದೂರನ್ನು ಎಸ್‌ಐಟಿ ಪರಿಶೀಲಿಸುತ್ತಿದೆ. ಒಂದು ವೇಳೆ ತನಿಖೆಗೆ ಎಸ್ ಐಟಿ ಒಪ್ಪಿಕೊಂಡರೆ ಸಾಕ್ಷಿಗಳನ್ನು ಕರೆಸಬಹುದು ಮತ್ತು ಹಿಂದಿನ ದಾಖಲೆಗಳನ್ನು ಪರಿಶೀಲಿಸಬಹುದು ಎಂದು ಪೊಲೀಸರು ಹೇಳಿದ್ದಾರೆ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನೋಡ್ರಿ ನಮ್ಮ ಮಗ ತುಂಬಾನೆ ಖರ್ಚು ಮಾಡ್ತಿದ್ದಾನೆ. ಎಲ್ಲಿ ಇಟ್ಟರು ಕದಿತಿದ್ದಾನೆ.
ಗಂಡ : ಹಣವನ್ನು ಅವನಿಗೆ ಸಿಗದಂತೆ ಇಡು.
ಹೆಂಡತಿ : ಇಲ್ಲಾರೀ ಎಲ್ಲಿ ಇಟ್ರೂ ಹಣ ಕದಿಯುತ್ತಿದ್ದಾನೆ.
ಗಂಡ : ಅವನ ಬುಕ್ಕಲ್ಲಿ ಮುಚ್ಚಿಡು. ಮುಂದಿನ ಎಕ್ಸಾಮ್‌ವರೆಗೂ ನೋಡಲ್ಲ ಕಳ್ಳ ನನ್ಮಗ!

ಮೈಸೂರು ಮಿತ್ರ

ಶನಿವಾರ, 13 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಕೊಟ್ಟಿದ್ದನ್ನು ಸ್ವಲ್ಪ ತಡವಾದರೂ ಸರಿ ಮರಳಿ ಕೊಡುವುದು ಸೃಷ್ಟಿಯ ನಿಯಮ; ಅದು ಪಾಪವಾದ್ರೂ ಸರಿ...! ಪುಣ್ಯವಾದ್ರೂ ಸರಿ...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎರಡು ಕೈ ಸೇರಿದರೆ ಚಪ್ಪಾಳೆ

ನಿಮ್ಮ ಪತ್ರಗಳು

■ ದಸರಾ ಉದ್ಘಾಟಕರ ಆಯ್ಕೆ ವಿಚಾರದ ಬಗ್ಗೆ ಡಾ.ಸಿಪಿಕೆ ಪ್ರಶ್ನಿಸಿರುವುದು ಸ್ವಾಗತಾರ್ಹ

ಮಾನ್ಯರೆ,

ಮೈಸೂರಿನ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು ದಸರಾ ಉದ್ಘಾಟಕರ ಆಯ್ಕೆ ವಿಚಾರವಾಗಿ ಸರ್ಕಾರದ ನಡೆಯನ್ನು ವಿಳಂಬವಾದರೂ ಪ್ರಶ್ನಿಸಿರುವುದು ಹಾಗೂ ಇಚ್ಛೆಯನ್ನು ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ದಸರಾ ಉದ್ಘಾಟನೆಗೆ ಡಾ.ಸಿಪಿಕೆಯವರನ್ನು ಆಯ್ಕೆ ಮಾಡುವಂತೆ ಹಾಗೂ ಅವರಲ್ಲಿರುವ ಅರ್ಹತೆ ಮತ್ತು ಮಹತ್ತರವಾದ ಸಾಧನೆಗಳನ್ನು ವಿವರಿಸಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಜುಲೈ 26 ರಂದು ಪತ್ರ ಬರೆದಿದ್ದೆ. ಕಾವ್ಯಲೋಕದ ಮಿಡಿಯುವ ಹೃದಯಕವಿ ಇವರಿಗಿಂತ ಸೂಕ್ತ ವ್ಯಕ್ತಿ ರಾಜ್ಯದಲ್ಲಿ ಸಿಗಲಾರರು. ಹಾಗೆಯೇ ಇದೇ ನಿಟ್ಟಿನಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಯವರ ಹೆಸರನ್ನು ಕೂಡ ಲೇಖನ ಒಂದರಲ್ಲಿ ಪ್ರಸ್ತಾಪಿಸಿದ್ದೆ. ನಮ್ಮವರಿಗೆ ಹಿತ್ತಲಗಿಡ ಮದ್ದಲ್ಲ ಅಲ್ಲವೇ?

ನಾನಾದರೂ ಭಾವಿಸುತ್ತೇನೆ ಡಾ.ಸಿಪಿಕೆಯವರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡದೇ ಇರುವುದಕ್ಕೆ ರಾಜಕೀಯವಾಗಿ ಓಲೈಕೆ ಮಾತುಗಳನ್ನು ಆಡದಿರುವುದು ಮತ್ತು ಒಕ್ಕಲಿಗ ಸಮುದಾಯಕ್ಕೆ ಸೇರಿದ ಸಾಹಿತಿ ಎಂಬ ಕಾರಣಗಳಿರಬಹುದು. ಸಹೃದಯರೆ, ಸಾಹಿತಿ ಮಿತ್ರರೇ, ಸಮುದಾಯದ ನಾಯಕರೇ ಈಗಲಾದರೂ ಇವರ ಪರವಾಗಿ ಧ್ವನಿ ಎತ್ತಿ ಮುಂದಿನ ದಸರಾಕ್ಕಾದರೂ ಉದ್ಘಾಟಕರಾಗಲಿ, ಪ್ರಾರಂಭದಲ್ಲೇ ಈ ಬಗ್ಗೆ ಚಿಂತಿಸಿದ್ದರೆ, ಇಂದಿನ ಗೊಂದಲಗಳಿಗೆ ಆಸ್ಪದ ಇರುತ್ತಿರಲಿಲ್ಲ.

ಡಾ.ವಿಷ್ಣುವರ್ಧನ್, ಬಿ.ಸರೋಜಾದೇವಿಯವರಿಗೆ ಮರಣೋತ್ತರ ಕರ್ನಾಟಕ ರತ್ನ ಕೊಟ್ಟಿರುವುದು ಸ್ವಾಗತಾರ್ಹ, ಸಂತೋಷದ ಸಂಗತಿ. ಇನ್ನು ಮುಂದೆ ಪ್ರಶಸ್ತಿ – ಗೌರವ ಪುರಸ್ಕಾರಗಳನ್ನು ಕೊಡುವುದಾದರೆ ಬದುಕಿದ್ದಾಗಲೇ ಕೊಡ್ರಪ್ಪ, ಅಂತ್ಯ ಕಾಲದಲ್ಲಿ ಖುಷಿಯಾಗಾದ್ರೂ ಇರುತ್ತಾರೆ.

ಸದ್ಯ ಬಾನು ಮುಷ್ತಾಕರು ದಸರಾ ಉದ್ಘಾಟನೆಗೆ ಆಯ್ಕೆಯಾಗಿದ್ದಾರೆ. ಸಿಪಿಕೆಯವರೇ ಹೇಳಿರುವಂತೆ ಮುಸ್ಲಿಂ ಇತ್ಯಾದಿಗಳನ್ನು ಬಿಡಿ, ಕುವೆಂಪು ಅವರ ಆಶಯದಂತೆ ಜಾತಿಧರ್ಮಗಳನ್ನು ಮನೆಯೊಳಗಿಟ್ಟು, ಅದರಾಚೆ ಬಂದು ದಸರಾ ಹಬ್ಬವನ್ನು ಸಂಭ್ರಮಿಸಿ. **–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.**

■ ಮರಣೋತ್ತರವಾಗಿ ಪ್ರಶಸ್ತಿ ನೀಡಿದರೆ ಪ್ರಯೋಜನವೇನು?

ಮಾನ್ಯರೇ

ದೇಶದ ಹಾಗೂ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ಅವರವರ ಕ್ಷೇತ್ರದಲ್ಲಿ ಮಹಾನ್ ಸಾಧನೆ ಮಾಡಿರುವ ಗಣ್ಯರಿಗೆ ನೀಡುವುದು ನಮ್ಮ ಸಂಪ್ರದಾಯ. ಈ ಗೌರವಗಳನ್ನು ಕೆಲವರಿಗೆ ಅವರ ಜೀವಿತಾವಧಿಯಲ್ಲಿ ನೀಡಿದರೆ, ಮತ್ತೆ ಕೆಲವರಿಗೆ ಮರಣೋತ್ತರವಾಗಿ ಪ್ರಕಟಿಸಲಾಗುತ್ತದೆ. ಇತ್ತೀಚೆಗೆ, ಅಭಿನಯ ಭಾರ್ಗವ ಡಾ. ವಿಷ್ಣುವರ್ಧನ್ ಮತ್ತು ಅಭಿನಯ ಸರಸ್ವತಿ ಬಿ. ಸರೋಜಾದೇವಿ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ಇದರ ಜೊತೆಗೆ, ರಸಋಷಿ ಕುವೆಂಪು ಅವರಿಗೆ ಮರಣೋತ್ತರ ಭಾರತ ರತ್ನ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ಹಿನ್ನೆಲೆಯಲ್ಲಿ, 'ಮರಣೋತ್ತರವಾಗಿ ಪ್ರಶಸ್ತಿ ನೀಡಿದರೆ ಅದರ ಪ್ರಯೋಜನವೇನು? ಅದು ಅವರಿಗೆ ಗೊತ್ತಾಗುತ್ತಾ?' ಎಂಬ ಪ್ರಶ್ನೆ ಹಲವರಲ್ಲಿ ಮೂಡಿದೆ. ಈ ಕುರಿತ ಗೊಂದಲಗಳಿಗೆ ಉತ್ತರ ಇಲ್ಲಿದೆ.

ಪ್ರಶಸ್ತಿ ಎಂದರೆ ಅದು ಕೇವಲ ಒಂದು ಗೌರವದ ಪದಕ ಅಥವಾ ಪ್ರಮಾಣ ಪತ್ರವಲ್ಲ. ಅದೊಂದು ವ್ಯಕ್ತಿಯ ಸಾಧನೆಯನ್ನು ರಾಷ್ಟ್ರ ಅಥವಾ ರಾಜ್ಯವು ಗುರುತಿಸಿದ ಅಧಿಕೃತ ಮುದ್ರೆಯಾಗಿದೆ. ಬದುಕಿರುವಾಗ ಪ್ರಶಸ್ತಿ ಸ್ವೀಕರಿಸುವುದು ಸಂತೋಷದ ವಿಷಯ. ಆದರೆ, ಮರಣೋತ್ತರವಾಗಿ ಪ್ರಶಸ್ತಿ ನೀಡುವ ಪ್ರಕ್ರಿಯೆಯ ಹಿಂದೆ ಒಂದು ದೊಡ್ಡ ಉದ್ದೇಶವಿದೆ. ಮರಣೋತ್ತರ ಪ್ರಶಸ್ತಿಯು ಆ ವ್ಯಕ್ತಿಯು ದೇಶಕ್ಕೆ ಅಥವಾ ರಾಜ್ಯಕ್ಕೆ ಸಲ್ಲಿಸಿದ ಅಸಾಧಾರಣ ಸೇವೆಗಳಿಗೆ ಒಂದು ಕೃತಜ್ಞತೆಯ ಸಂಕೇತವಾಗಿದೆ. ಅವರ ಜೀವಿತಾವಧಿಯಲ್ಲಿ ಯಾವುದೇ ಕಾರಣಗಳಿಂದ ಅವರಿಗೆ ಈ ಗೌರವ ಸಿಕ್ಕಿರದಿದ್ದರೂ, ಅವರ ಕೊಡುಗೆಗಳು ಅಮೂಲ್ಯ ಎಂದು ಇತಿಹಾಸವು ಗುರುತಿಸುತ್ತದೆ. ಆ ವ್ಯಕ್ತಿ ಇಲ್ಲದಿದ್ದರೂ, ಅವರ ಗೌರವ ಮತ್ತು ನೆನಪು ಶಾಶ್ವತವಾಗಿ ಉಳಿಯುತ್ತದೆ. ಮರಣೋತ್ತರವಾಗಿ ನೀಡಿದ ಪ್ರಶಸ್ತಿಗಳು ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗುತ್ತವೆ. ಉದಾಹರಣೆಗೆ, ಕುವೆಂಪು ಅವರ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ನಮಗೆ ದಾರಿದೀಪವಾಗಿವೆ. ಅವರಿಗೆ ಭಾರತ ರತ್ನ ನೀಡುವುದರಿಂದ, ಅವರ ಕೊಡುಗೆಗಳ ಮಹತ್ವ ಮತ್ತಷ್ಟು ಎತ್ತರಕ್ಕೆ ಏರುತ್ತದೆ ಮತ್ತು ಯುವಜನರಿಗೆ ಅವರಂತೆಯೇ ಸಾಧನೆ ಮಾಡಲು ಪ್ರೇರಣೆ ನೀಡುತ್ತದೆ. ಯಾವುದೇ ಪ್ರಶಸ್ತಿ ಸ್ವೀಕರಿಸಿದಾಗ, ಆ ಗೌರವವು ಆ ವ್ಯಕ್ತಿಯೊಬ್ಬರಿಗೆ ಮಾತ್ರ ಸೀಮಿತ ವಾಗುವುದಿಲ್ಲ, ಬದಲಾಗಿ ಅವರ ಕುಟುಂಬಕ್ಕೂ ಸಲ್ಲುತ್ತದೆ. ತಮ್ಮ ಪ್ರೀತಿ ಪಾತ್ರರ ಕೊಡುಗೆಗಳನ್ನು ದೇಶವು ಗುರುತಿಸಿದೆ ಎಂಬುದನ್ನು ತಿಳಿದಾಗ, ಕುಟುಂಬದ ಸದಸ್ಯರಿಗೆ ಅದು ಒಂದು ದೊಡ್ಡ ಸಮಾಧಾನ ಮತ್ತು ಹೆಮ್ಮೆಯನ್ನು ತರುತ್ತದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಅರ್ಹ ಬಡವರಿಗೆ ಬಿಪಿಎಲ್ ಪಡಿತರ ಚೀಟಿ ಸಿಗುವಂತಾಗಲಿ

ಮಾನ್ಯರೆ,

ರಾಜ್ಯದಲ್ಲಿ ಅನರ್ಹರಿಗೆ ನೀಡಲಾಗಿದ್ದ ಸುಮಾರು 3.65 ಲಕ್ಷಕ್ಕೂ ಹೆಚ್ಚು ಬಿಪಿಎಲ್ ಪಡಿತರ ಕಾರ್ಡ್‌ಗಳನ್ನು ಪತ್ತೆ ಮಾಡಿ ರದ್ದುಪಡಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿನ್ನೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ಇಷ್ಟು ಬೃಹತ್ ಸಂಖ್ಯೆಯ ಜನರು ಇಷ್ಟು ವರ್ಷಗಳಿಂದ ಬಡ ಜನರಿಗೆ ಸಿಗಬೇಕಾದ ಅನ್ನ ಭಾಗ್ಯ ಯೋಜನೆ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ಪಡೆದಿದ್ದಾರೆ. ಇವರು ಸುಳ್ಳು ಹೇಳಿ ಬಿಪಿಎಲ್ ಕಾರ್ಡ್ ಪಡೆದು ಎಷ್ಟು ವರ್ಷಗಳಿಂದ ಇದರ ಪ್ರಯೋಜನ ಪಡೆದಿದ್ದಾರೆ ಎಂಬುದನ್ನು ಪತ್ತೆ ಮಾಡಿ, ಅದನ್ನು ಸರ್ಕಾರಕ್ಕೆ ಹಣದ ರೂಪದಲ್ಲಿ ವಾಪಸ್ ನೀಡುವಂತೆ ಕಾನೂನು ಜಾರಿ ಮಾಡಬೇಕು. ಅನರ್ಹರಿಗೆ (ಶ್ರೀಮಂತರಿಗೆ), ಕಾನೂನು ಬಾಹಿರವಾಗಿ ಬಿಪಿಎಲ್ ಕಾರ್ಡ್ ಪಡೆಯಲು ನೆರವಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು.

ಗ್ರಾಮೀಣ ಪ್ರದೇಶದಲ್ಲಿ 10–15 ಎಕರೆ ಜಮೀನು ಹೊಂದಿರುವವರು ಸಹ ಬಿಪಿಎಲ್ ಕಾರ್ಡ್ ಹೊಂದಿರುವುದು ಈ ಹಿಂದೆಯೇ ವರದಿಯಾಗಿದೆ. ಕೆಲವು ಕಡೆ ಒಂದೇ ಕುಟುಂಬದವರು ಎರಡೆರಡು ಬಿಪಿಎಲ್ ಕಾರ್ಡ್ ಹೊಂದಿರುವುದಾಗಿ ಹೇಳುತ್ತಾರೆ. ಈ ಬಗ್ಗೆ ಸರ್ಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಹಾಗೂ ಅರ್ಹ ಬಡವರಿಗೆ ಮಾತ್ರ ಬಿಪಿಎಲ್ ಪಡಿತರ ಚೀಟಿ ಸಿಗುವಂತಾಗಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಶ್ವಾನಪ್ರಿಯೆ ಜಯಾ; ನಮಗಂತೂ ಅವ ಕಂಡರೆ ಭಯಾ!







ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

> ರೋಜರ್ ಆಂಡ್ರ್ಯೂ ಕ್ಯಾರಸ್ ಎಂಬ ಅಮೆರಿಕನ್ ಪ್ರಕೃತಿಶಾಸ್ತ್ರಜ್ಞ, ಪ್ರಾಣಿಗಳ ಕಲ್ಯಾಣ ಕಾರ್ಯಕರ್ತ ಹಾಗೂ ಬರಹಗಾರ ಹೇಳಿದ್ದು: 'ನಾಯಿಗಳು ನಮ್ಮ ಇಡೀ ಜೀವನವಲ್ಲ, ಆದರೆ ಅವು ನಮ್ಮ ಜೀವನವನ್ನು ಸಂಪೂರ್ಣಗೊಳಿಸುತ್ತವೆ'. ಈ ಮಾತಿಗೆ ಶೇ.ನೂರರಷ್ಟು ಒಪ್ಪಿತವಾಗಿರುವ ಮೈಸೂರಿನ ಕು.ಜಯಾರವರು ಎಲ್ಲಾ ಸಮಸ್ಯೆ ಹಾಗೂ ನೋವುಗಳ ನಡುವೆಯೂ ತನ್ನ ಇಡೀ ಬದುಕನ್ನೇ ಶ್ವಾನಗಳ ಸೇವೆಗಾಗಿ ಮುಡುಪಿಟ್ಟಿದ್ದಾರೆ.

ಹಿರಿಯ ನಾಗರಿಕರೇ ಹೆಚ್ಚಿರುವ ನಗರಗಳಲ್ಲಿ ಮುಂಜಾನೆ ಎಂದಿನಂತೆ ವಾಯುವಿಹಾರಕ್ಕೆಂದು ರಸ್ತೆಗೆ ಇಳಿದರೆ ನಮಗೆ ಮೊದಲು ದರ್ಶನವಾಗುವುದು ಶ್ರೀಮನ್ನಾರಾಯಣ ಸ್ವರೂಪಿ ಹಾಗೂ ನಂಬಿಕೆಗೆ ಅರ್ಹವಾದ, ನಿಯತ್ತಿನ ಪ್ರಾಣಿ ಶ್ವಾನಗಳ ಹಿಂಡು. ವಾಯುವಿಹಾರಿಗಳಿಗೆ ಬೀದಿ ನಾಯಿಗಳ ಗುಂಪು ಅಥವಾ ನಿತ್ಯಕರ್ಮಕ್ಕಾಗಿ ಕರೆದುಕೊಂಡು ಬರುವ ಸಾಕು ನಾಯಿಗಳು ಸಿಗದಿರುವ ದಿನಗಳು ಇಲ್ಲವೇ ಇಲ್ಲ. ರಸ್ತೆಯಿಂದ ಪಾರ್ಕಿನೊಳಕ್ಕೆ ಕಾಲಿಟ್ಟರೆ ಅಲ್ಲಿಯೂ ಅವುಗಳದ್ದೇ ಸಾಮ್ರಾಜ್ಯ, ಮರಿಗಳೊಂದಿಗೆ ಆಟವಾಡುವುದನ್ನು ನೋಡುವುದೇ ಚೆಂದ. ನಡೆಯುವಾಗ ಎಚ್ಚರ ಇರಬೇಕು. ಟ್ರ್ಯಾಕ್ ಮೇಲೆ ಮಲಗಿರುವುದನ್ನು ನೋಡದೆ ತುಳಿದರೆ ಹದಿನಾಲ್ಕು ಇಂಜೆಕ್ಷನ್ ಗ್ಯಾರಂಟಿ. ತುಳಿಯುವುದು ನಾಯಿ ಮಾತ್ರವಲ್ಲ ವಾಕಿಂಗ್‌ಗಾಗಿಯೆ ಖರೀದಿಸಿ ಹಾಕಿದ ಅಂದವಾದ ಹೊಸ ಶೂಗಳು ಸಹ ಅಸಹ್ಯವಾಗುವುದು ಸಾಮಾನ್ಯ. ಕಾನೂನು ಕಟ್ಟಳೆಗಳು ಏನೇ ಬರಲಿ ನಗರ ಪಾಲಿಕೆಗಳಿಗೆ ನಾಯಿಗಳ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಏಕ ಕಾಲಕ್ಕೆ ಐದು ಮರಿಗಳಿಗೆ ಜನ್ಮ ನೀಡುವ ಬೀದಿನಾಯಿಗಳ ಸಂತತಿ ದಿನದಿಂದ ದಿನಕ್ಕೆ ಜನಸಂಖ್ಯೆಗೆ ಸರಿಸಮಾನವಾಗಿ ಏರುತ್ತಿದೆ. ಸಂತಾನ ನಿಯಂತ್ರಣ ಚಿಕಿತ್ಸೆ ನಡೆಯುತ್ತಿದ್ದರೂ ಏರಿಕೆ ನಿಲ್ಲದಾಗಿದೆ.

ಸಾಕು ನಾಯಿಗಳನ್ನು ಮುದ್ದಿಸುವುದು ಅವುಗಳಿಗೆ ಮುತ್ತಿಕ್ಕುವುದು, ಮಲಗುವ ಕೋಣೆಗೆ ಕರೆದು ಬೆಡ್ ಮೇಲೆ ಮಲಗಿಸಿ ಆಟವಾಡುವುದು, ಕಾರಿನಲ್ಲಿ ಅಥವಾ ಬೈಕಿನ ಮೇಲೆ ಕೂರಿಸಿಕೊಂಡು ಪ್ರವಾಸ ಮಾಡುವುದು ಶ್ವಾನಪ್ರಿಯರು ತೋರುವ ಪ್ರೀತಿಯ ನಾನಾವಿಧಗಳು, ಬೀದಿ ನಾಯಿಗಳನ್ನೂ ಮುದ್ದಿಸುವ ಜನರೂ ಕಡಿಮೆ ಏನಿಲ್ಲ. ಕೆಲವರ ಹವ್ಯಾಸ ಬೀದಿ ನಾಯಿಗಳಿಗೆ ಬಿಸ್ಕತ್ ಹಾಕುವುದು, ಅವರು ಮುಂಜಾನೆ ಬೀದಿಗೆ ಇಳಿದರೆಂದರೆ ನಾಯಿಗಳ ಹಿಂಡೇ ಅವರನ್ನು ಹಿಂಬಾಲಿಸುತ್ತವೆ. ಬೀದಿ ನಾಯಿಗಳಿಗೆ ಬಿಸ್ಕತ್ ಹಾಕಿ ಬೆಳೆಸುವುದು ಸರಿಯೋ, ತಪ್ಪೋ ತಿಳಿಯುತ್ತಿಲ್ಲ. ಮೈಸೂರಿನ ನಮ್ಮ ಬಡಾವಣೆಯಲ್ಲಿ ಹುಡುಗಿಯೊಬ್ಬಳು ನಿತ್ಯವೂ ಎಂಟತ್ತು ಕೆಜಿ ಅನ್ನವನ್ನು ಮಾಡಿಕೊಂಡು ಸ್ಕೂಟರ್ ಏರಿದರೆ ಆಕೆಗಾಗಿ ಕಾದು ಕುಳಿತಿರುವ ನಾಯಿಗಳು ಇನ್ನೂರೈವತ್ತಕ್ಕೂ ಹೆಚ್ಚು ಇವೆ. ನಿಮಗೀಗ ಆಶ್ಚರ್ಯ ಆಗಿರಬಹುದು ಹದಿನೈದಕ್ಕಿಂತಲೂ ಹೆಚ್ಚು ನಿರ್ದಿಷ್ಟ ಪಾಯಿಂಟ್‌ಗಳಲ್ಲಿ ತಿನ್ನಲು ಅನ್ನ ಇಟ್ಟು ಬಳಿಗೆ ಬರುವ ನಾಯಿಗಳನ್ನು ಪ್ರೀತಿಯಿಂದ ಅವುಗಳ ಮುದ್ದಿಸಿ, ಮೈಸವರಿ ಮುಂದಿನ ಪಾಯಿಂಟ್‌ಗೆ ಹೋಗುತ್ತಾಳೆ. ಅಲ್ಲಿ ಇವಳ ಬರುವಿಕೆಗಾಗಿ ಕಾದಿರುವ ನಾಯಿಗಳು ಸ್ಕೂಟರ್ ಶಬ್ದ ಕೇಳಿದ ತಕ್ಷಣ ಆಕೆಯನ್ನು ಸುತ್ತುವರಿಯುತ್ತವೆ. ಈ ನಾರಾಯಣಸ್ವಾಮಿಯ ದಾಸೋಹ ಕಾರ್ಯವು ಚಾಮುಂಡಿಬೆಟ್ಟದ ತಪ್ಪಲಿನವರೆಗೂ ಸಾಗುವುದು. ಇವಳ ಪ್ರಾಣಿ ಸೇವೆಯು ಮುಂಜಾನೆಯಿಂದ ಹತ್ತು ಗಂಟೆವರೆಗೆ ನಡೆಯುವುದು, ಮತ್ತೆ ಸಂಜೆಗೆ ಬಡಾವಣೆಗಳಲ್ಲಿನ ಶ್ವಾನಗಳ ಹಾರೈಕೆಯಲ್ಲಿ ಖುಷಿ ಕಾಣುತ್ತಾರೆ.

ಮಳೆ–ಗಾಳಿ–ಚಳಿ ಏನೇ ಇರಲಿ ಈ ಕಾರ್ಯವನ್ನು ಇವರು ಒಂದು ದಿನವೂ ತಪ್ಪಿಸಿಲ್ಲ, ಆರೋಗ್ಯ ಇಲ್ಲದಿರುವಾಗ ಮಾತ್ರ ಬೆರಳೆಣಿಕೆಯಷ್ಟು ದಿನಗಳು ಸೇವೆಯಲ್ಲಿ ಏರುಪೇರಾಗಿದೆ. ತಮ್ಮ ನಿತ್ಯದ ಸೇವೆಗೆ ಚ್ಯುತಿ ಬರಬಹುದೆಂಬ ಕಾರಣ ಇರಬಹುದು. ಇವರನ್ನು ನಾನು ಇಪ್ಪತ್ತು ವರ್ಷಗಳಿಂದ ಬಲ್ಲವನಾಗಿದ್ದೇನೆ. ಅದಕ್ಕೂ ಮುಂಚಿನಿಂದ ಇಲ್ಲಿಯವರೆಗೂ ಶ್ವಾನಗಳಿಗೆ ಆಹಾರ ಹಾಕುವುದನ್ನು ಒಂದು ದಿನವೂ ತಪ್ಪಿಸಿಲ್ಲ. ಆಹಾರವನ್ನು ಹಾಕಿ ಅಲ್ಲಿಗೇ ನಿಲ್ಲುವುದಿಲ್ಲ, ಆರೋಗ್ಯ ಕೆಟ್ಟರೆ, ಅಪಘಾತಗಳಾಗಿ ಕಾಲು ಮುರಿದರೆ ಅಥವಾ ಇನ್ನಾವುದೇ ಆರೋಗ್ಯ ಸಮಸ್ಯೆಗಳು ಕಂಡುಬಂದಲ್ಲಿ ಸ್ವತಃ ಇವರೇ ಅವುಗಳಿಗೆ ವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಾರೆ,

ಇವರ ಹೆಸರು ಕುಮಾರಿ ಜಯಾ. ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿ ಅವರ ಚಿಕ್ಕಪ್ಪನ ಆಶ್ರಯದಲ್ಲಿ ವಾಸ ಇದ್ದಾರೆ, ಆರ್ಥಿಕವಾಗಿ ಸದೃಡ ಇಲ್ಲದಿರುವ ಕಾರಣ ಪ್ರಾಣಿಪ್ರೀತಿಯಿಂದಾಗಿ ಅನ್ಯರ ಸಹಾಯವನ್ನು ಪಡೆಯುತ್ತಾರೆ. ಬೆಳಗ್ಗೆ 4.00ಕ್ಕೆ ಎದ್ದು, ಆಹಾರ ತಯಾರಿಸಿಕೊಂಡು ಹೊರಟರೆಂದರೆ ಮೊದಲು ಅವರ ಮನೆ ಬಳಿಯ ಪಾರ್ಕಿನಲ್ಲಿನ ಶ್ವಾನಗಳಿಗೆ ಆಹಾರವಿಟ್ಟು ಲಲಿತಮಹಲ್ ಗೇಟಿನ ಬಳಿ ಇರುವ ಶ್ವಾನಗಳಿಗೆ ಅನ್ನ ಇಟ್ಟು ಅಲ್ಲಿಯೇ ಸ್ಕೂಟರ್ ನಿಲ್ಲಿಸಿ ಹತ್ತು ಕೆಜಿಯಷ್ಟು ತೂಕ ಇರುವ ಬ್ಯಾಗನ್ನು ಹಿಡಿದು ನಡೆದುಕೊಂಡೇ ಹೋಗುತ್ತಾರೆ. ಚಾಮುಂಡಿಬೆಟ್ಟದ ಪಾದದವರೆಗೂ ಹೋಗಿ ಮುಂದೆ ಕೆ.ಸಿ. ಬಡಾವಣೆ ಮಾರ್ಗವಾಗಿ ಸಿದ್ದಾರ್ಥ ಬಡಾವಣೆಯ ಮುಖಾಂತರ ಮತ್ತೇ ಸ್ಕೂಟರ್ ನಿಲ್ಲಿಸಿದ್ದ ಜಾಗಕ್ಕೆ ಬಂದು ಸೇರುತ್ತಾರೆ. ಸುಮಾರು ಹದಿನೈದು ಪಾಯಿಂಟ್‌ಗಳಲ್ಲಿ ಇವರಿಗಾಗಿ ಕಾಯುವ ನಾಯಿಗಳಿಗೆ ಅನ್ನ ಹಾಕಿ ಬರುತ್ತಾರೆ. ನಾಲ್ಕರಿಂದ ಐದು ಕಿಮೀ ದೂರ ನಡೆದು ಈ ಕಾರ್ಯವನ್ನು ಪ್ರೀತಿ ಹಾಗೂ ಖುಷಿಯಿಂದ ನಿತ್ಯವೂ ಮಾಡುತ್ತಾರೆ. ಒಂದು ದಿನ ಮುಂಜಾನೆ ಇವರೊಟ್ಟಿಗೆ ನಾನೂ ಸಹ ಕೊನೆವರೆಗೂ ನಡೆದು ಹೋಗಿ ಶ್ವಾನಗಳಿಗೆ ಆಹಾರ ಬಡಿಸಿ ಪಡುವ ಆನಂದವನ್ನು ಸ್ವತಃ ಕಂಡು ಬೆರಗಾಗಿದ್ದೇನೆ. ಕೆಲವು ಶ್ವಾನಗಳು ಮೈಮೇಲೆ ಎಗರುತ್ತವೆಯಾದರೂ, ಹೆದರದೆ ಮಕ್ಕಳೊಂದಿಗೆ ಮುದ್ದಾಡುವ ಹಾಗೆ ಮಾತನಾಡಿ ಆಹಾರ ಕೊಡುತ್ತಾರೆ ಹಾಗೂ ರೇಗುವುದು ಉಂಟು, ಒಟ್ಟಿನಲ್ಲಿ ಇವುಗಳ ನಾಡಿಮಿಡಿತವನ್ನು ಚೆನ್ನಾಗಿ ಅರಿತಿದ್ದಾರೆ. ಅಮ್ಮನೊಟ್ಟಿಗೆ ಮಕ್ಕಳು ನಡೆದುಕೊಳ್ಳುವ ಹಾಗೆಯೇ ಇವುಗಳು ಕು.ಜಯಾರೊಟ್ಟಿಗೆ ನಡೆದುಕೊಳ್ಳುತ್ತವೆ.

ಅಬ್ಬಾ.. ನಾಯಿಗಳನ್ನು ಕಂಡರೆ ನನಗಂತೂ ಭಯವೇ, ಕೆಲವು ದಿನಗಳ ಹಿಂದೆ ನನ್ನ ಗೆಳೆಯನು ಪಾರ್ಕಿಗೆ ಪ್ರವೇಶಿಸುತ್ತಿರುವಾಗ ಮಹಿಳೆಯೊಬ್ಬರು ಹಿಡಿದುಕೊಂಡು ಬಂದಿದ್ದ ಸಾಕು ನಾಯಿಯೊಂದು ಎಗರಿ ಬಲ ತೊಡೆಯನ್ನು ಕಚ್ಚಿದೆ, ನೋವಿಂದ ಕಿರುಚಿಕೊಳ್ಳುವಷ್ಟರಲ್ಲಿ ಅಲ್ಲೆ ಸಮೀಪದಲ್ಲಿ ಬಿಸ್ಕತ್‌ಗಾಗಿ ಕಾಯುತ್ತಾ ನಿಂತಿದ್ದ ಬೀದಿ ನಾಯಿಯೂ ಇದನ್ನು ನೋಡಿ ಸುಮ್ಮನಿರದೆ ತಾನೂ ಎಗರಿ ಎಡತೊಡೆಯನ್ನು ಕಚ್ಚುವುದೇ!, ಅಕಸ್ಮಾತ್ ಸ್ವಲ್ಪ ಮೇಲೆ ಎಗರಿ ಕಚ್ಚಿದ್ದರೆ ಅವರ ಗತಿ!. ಜನರನ್ನು ಹಾಗೂ ಮಕ್ಕಳನ್ನು ಕಚ್ಚಿ ಎಳೆದಾಡುವುದು ಹಾಗೂ ವಾಹನಗಳಲ್ಲಿ ಹೋಗುತ್ತಿರುವಾಗ ಅಟ್ಟಿಸಿಕೊಂಡು ಬರುವ ಪ್ರಸಂಗಗಳನ್ನು ದೃಶ್ಯ ಮಾಧ್ಯಮಗಳಲ್ಲಿ ನೋಡಿದ್ದೇವೆ. ಯೋಚನಾಶಕ್ತಿ ಇಲ್ಲದ ಪ್ರಾಣಿಗಳು ಯಾವಾಗ ಯಾವ ಮೂಡ್‌ನಲ್ಲಿ ಇರುತ್ತವೆಯೋ ತಿಳಿಯದು, ಪ್ರಾಣಿಗಳನ್ನು ಸಾಕುವುದು ಒಳ್ಳೆಯದೇ, ಆದರೆ ಇದರಿಂದ ಬೇರೆಯವರಿಗೆ ತೊಂದರೆ ಆಗಬಾರದಲ್ಲವೆ?. ನಾಯಿಗಳಿಂದ ಒಮ್ಮೆಯಾದರೂ ತೊಂದರೆಗೆ ಒಳಗಾಗದವರು ಬಹುಶಃ ಯಾರೂ ಇರಲಿಕ್ಕೆ ಸಾಧ್ಯವಿಲ್ಲ. ಒಂದಲ್ಲ ಒಂದು ರೀತಿ ಅವುಗಳಿಂದ ಭಯಗೊಂಡಿದ್ದು ಅಥವಾ ಕಚ್ಚಿಸಿಕೊಂಡಿರುವುದು ಅನುಭವಕ್ಕೆ ಬಂದಿರುತ್ತದೆ.

ಬೀದಿ ನಾಯಿಗಳಿಗೆ ಬಿಸ್ಕತ್, ಮಾಂಸ ಇತ್ಯಾದಿಗಳನ್ನು ಹಾಕಿ ಪೋಷಿಸುವುದು ಅವರವರ ವೈಯಕ್ತಿಕ ನಿರ್ಧಾರಕ್ಕೆ ಬಿಡುತ್ತೇನೆ. ಇಲ್ಲಿ ಪ್ರಶ್ನೆ ಇರುವುದು ಪರಿಸರ ಮಾಲಿನ್ಯ ಹಾಗೂ ಮೂಕ ಪ್ರಾಣಿಗಳಿಂದ ಕಚ್ಚಿಸಿಕೊಂಡು ತೊಂದರೆಗೆ ಒಳಗಾಗುತ್ತಿರುವ ಅಮಾಯಕ ಜನರ ಕ್ಷೇಮ. ಹಳ್ಳಿಗಳ ಬೀದಿಗಳಲ್ಲಿ ನಡೆಯುವಾಗ ನಾವುಗಳು ಕಾಣದೆ ತುಳಿಯುವುದು ಗೋವಿನ ಸಗಣಿಯಾದರೆ ನಗರಗಳ ರಸ್ತೆ ಮತ್ತು ಪಾರ್ಕುಗಳಲ್ಲಿ ತುಳಿಯುವುದು ನಾಯಿಗಳ ಮಲ, ಹೌದಲ್ಲವೆ?.

ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಗ್ರೇಟರ್ ಎಂಬ ಯಡವಟ್ಟಿನ ಪದವು ಇನ್ನೂ ಕನ್ನಡ ಸಂರಕ್ಷರ ಕಣ್ಣಿಗೆ ಬಿದ್ದಂತಿಲ್ಲ) ಬೀದಿ ನಾಯಿಗಳಿಗೆ ಬಿರಿಯಾನಿ ಭಾಗ್ಯವನ್ನು ಕಲ್ಪಿಸಿರುವುದು ಶ್ಲಾಘನೀಯ. ಮೂಳೆ ಮಾತ್ರ ಅವುಗಳಿಗಿಟ್ಟು ಮಾಂಸ ತಿನ್ನುವವರು ನಾವುಗಳು ಆಗುವುದು ಬೇಡ.

Dogs are not our whole life, but they make our lives whole-Roger Andrew Caras ರೋಜರ್ ಆಂಡ್ರ್ಯೂ ಕ್ಯಾರಸ್ ಎಂಬ ಅಮೆರಿಕನ್ ಪ್ರಕೃತಿಶಾಸ್ತ್ರಜ್ಞ, ಪ್ರಾಣಿಗಳ ಕಲ್ಯಾಣ ಕಾರ್ಯಕರ್ತ ಹಾಗೂ ಬರಹಗಾರ ಹೇಳಿದ್ದು: 'ನಾಯಿಗಳು ನಮ್ಮ ಇಡೀ ಜೀವನವಲ್ಲ, ಆದರೆ ಅವು ನಮ್ಮ ಜೀವನವನ್ನು ಸಂಪೂರ್ಣಗೊಳಿಸುತ್ತವೆ'.

ಮೇಲಿನ ಹೇಳಿಕೆಗೆ ಶೇ.ನೂರರಷ್ಟು ಒಪ್ಪಿತವಾಗಿರುವ ಮೈಸೂರಿನ ಕು.ಜಯಾರವರು ಎಲ್ಲಾ ಸಮಸ್ಯೆ ಹಾಗೂ ನೋವುಗಳ ನಡುವೆಯೂ ತನ್ನ ಸುಖವನ್ನೂ ಮರೆತು ಇಡೀ ಬದುಕನ್ನೇ ಶ್ವಾನಗಳ ಸೇವೆಗಾಗಿ ಮುಡುಪಾಗಿಟ್ಟಿರುವ ಪ್ರಾಣಿ ಪಾಲಕಿ. ಅವರ ಸಂಪರ್ಕಕ್ಕೆ ಮೊಬೈಲ್ ಸಂಖ್ಯೆ: 9986007625.

ಸೆ.24ರಂದು ಮೈಸೂರಲ್ಲಿ ಮಹಿಷಾ ಧಮ್ಮೋತ್ಸವ

- ಟೌನ್‌ಹಾಲ್‌ನಿಂದ ಚಾಮುಂಡಿಬೆಟ್ಟಕ್ಕೆ ಬೈಕ್ ರ್‍ಯಾಲಿ
- ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆ, ವೇದಿಕೆ ಕಾರ್ಯಕ್ರಮ

ಮೈಸೂರು, ಸೆ.12(ಜಿಎ)–ಈ ಬಾರಿ ಮಹಿಷಾ ದಸರಾವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಪೂನಾ ಒಪ್ಪಂದದ ದಿನವಾದ ಸೆ.24ರಂದು ಬೆಳಗ್ಗೆ 10.30ಕ್ಕೆ ಟೌನ್ ಹಾಲ್‌ನ ಆವರಣದಲ್ಲಿ ಮಹಿಷಾ ಧಮ್ಮೋತ್ಸವವನ್ನು ಆಚರಿಸುತ್ತೇವೆ ಎಂದು ಮಹಿಷಾ ದಸರಾ ಸಮಿತಿ ಅಧ್ಯಕ್ಷ, ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ ಟೌನ್ ಹಾಲ್ ಆವರಣದಿಂದ ಚಾಮುಂಡಿಬೆಟ್ಟಕ್ಕೆ ಬೈಕ್ ರ್‍ಯಾಲಿ ಹೊರಟು ಬೆಟ್ಟದ ಮೇಲಿರುವ ಮಹಿಷಾಸುರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ನಂತರ ಮರಳಿ ಟೌನ್ ಹಾಲ್ ಆವರಣಕ್ಕೆ ಬಂದು ಡಾ.ಬಿ.ಆರ್. ಅಂಬೇಡ್ಕರ್ ಅವರ ಪೂನಾ ಒಪ್ಪಂದ ಮತ್ತು ಮಹಿಷಾಸುರನ ವಿಚಾರಗಳ ಬಗ್ಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಸುಮಾರು 5 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ದಸರಾ ಮಹೋತ್ಸವ ಮತ್ತು ಮಹಿಷಾ ದಸರಾ ನಡುವೇ ಯಾವುದೇ ಗೊಂದಲಗಳು ಸೃಷ್ಟಿಯಾಗಬಾರದು ಎಂಬ ಉದ್ದೇಶದಿಂದ ದಸರಾ ಉದ್ಘಾಟನೆಯಾದ ನಂತರ ಮಹಿಷಾ ದಸರಾ ಮಾಡಲಾಗುತ್ತಿದೆ. ಎರಡು ಕಾರ್ಯಕ್ರಮಗಳಿಂದ ಸಾಮರಸ್ಯ ಮೂಡಬೇಕೆ ಹೊರತು ಕದಡುವ ಕೆಲಸ ಮಾಡಬಾರದು. ದಸರಾ ಕಾರ್ಯಕ್ರಮಗಳಿಗೆ ಯಾವುದೇ ರೀತಿ ಅಡ್ಡಿಯಾಗಬಾರದು ಎಂಬುದು ನಮ್ಮ ಆಶಯವಾಗಿದೆ ಎಂದು ತಿಳಿಸಿದರು.

ಮಹಿಷಾ ದಸರಾ ಆಚರಿಸಲು ಚಾಮುಂಡಿಬೆಟ್ಟದ ಮೇಲೆ ಪೊಲೀಸ್ ಇಲಾಖೆ ನಿಷೇಧಾಜ್ಞೆ ಜಾರಿ ಮಾಡಬಾರದು. ಇದ್ದರಿಂದ ದೇಶ, ವಿದೇಶದಿಂದ ಬರುವ ಪ್ರವಾಸಿಗರಿಗೆ ತೊಂದರೆಯಾಗುತ್ತದೆ. ಮೈಸೂರಿನ ಸೊಬಗನ್ನು ಸವಿಯಲು ಬರುವ ಲಕ್ಷಾಂತರ ಪ್ರವಾಸಿಗರಿಗೆ ನಿರಾಸೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ನಿಷೇಧಾಜ್ಞೆ ಜಾರಿ ಮಾಡಬೇಡಿ. ಮಹಿಷಾ ದಸರಾಗೆ ನಿಷೇಧಾಜ್ಞೆ ಜಾರಿ ಮಾಡಿದರೆ, ದಸರಾ ಮಹೋತ್ಸವಕ್ಕೂ ಜಾರಿ ಮಾಡಬೇಕು ಎಂದು ಎಚ್ಚರಿಸಿದರು.

ಅಂದು ಟೌನ್‌ಹಾಲ್ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಸಾಹಿತಿಗಳಾದ ವಿಠಲ್ ವಿಗ್ಗಾನ್, ಪ್ರೊ.ಕೆ. ಎಸ್.ಭಗವಾನ್, ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ಸಿದ್ದಸ್ವಾಮಿ ಮತ್ತಿತರರು ಭಾಗವಹಿಸಿ ವಿಚಾರ ಮಂಡಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರೊ.ಕೆ.ಎಸ್.ಭಗವಾನ್, ಸೋಮಯ್ಯ ಮಲೆಯೂರು, ಶಿವಣ್ಣ, ಪುಟ್ಟರಾಜು, ವಿಷಕಂಠ ವಿಶ್ವನಾಥ್ ಉಪಸ್ಥಿತರಿದ್ದರು.

ಶೌಚಾಲಯ ವಾಸಿಗಳಿಗೆ ಅಂತೂ ಮುಕ್ತಿ; ನರ್ಮ್ ಯೋಜನೆಯಡಿ ಅಜ್ಜಿ, ಮರಿಮೊಮ್ಮಗನಿಗೆ ಶಾಶ್ವತ ಸೂರು

ಮೈಸೂರು, ಸೆ.12(ಎಂಕೆ)– ಶೌಚಾಲಯದಲ್ಲಿ 7 ವರ್ಷ ವನವಾಸ... ಅನ್ನ–ನೀರಿಲ್ಲದ ಮನೆಯಲ್ಲಿ 6 ವರ್ಷ ಅಜ್ಞಾತವಾಸ ನಡೆಸಿದ ಈ ಅಜ್ಜಿ–ಮರಿಮೊಮ್ಮಗನಿಗೆ ಕಡೆಗೂ ಶಾಶ್ವತ ಆಶ್ರಯ ದೊರೆಯಿತು...!

ಮೈಸೂರಿನ ರಾಜೇಂದ್ರನಗರದ ಕುರಿಮಂಡಿ ಎ ಬ್ಲಾಕ್‌ನಲ್ಲಿರುವ ಶೌಚಾಲಯದಲ್ಲಿ 7 ವರ್ಷಗಳ ಕಾಲ ಭಿಕ್ಷೆ ಬೇಡಿ, ಜೀವನ ಸಾಗಿಸುತ್ತಿದ್ದ ವೃದ್ಧೆ ಕೃಷ್ಣಮ್ಮ ಕುಟುಂಬಕ್ಕೆ 2019ರಲ್ಲಿ ಬನ್ನಿಮಂಟಪ ಸಮೀಪದ ಯಲ್ಲಮ್ಮ ಕಾಲೋನಿಯ ನರ್ಮ್ ಯೋಜನೆಯ ಆಶ್ರಯ ಮನೆ (ಬ್ಲಾಕ್–6, ಟಿ–2 ಕಟ್ಟಡ) ನೀಡಲಾಗಿತ್ತು.

ಬಳಿಕ ಆಶ್ರಯ ಮನೆಯಲ್ಲಿದ ವೃದ್ಧೆ ಕೃಷ್ಣಮ್ಮ ಅವರ ಇಬ್ಬರು ಮೊಮ್ಮಕ್ಕಳು ಸ್ವಲ್ಪ ದಿನಗಳ ನಂತರ ದೂರವಾಗಿದ್ದು, ಮೊಮ್ಮಗಳೊಬ್ಬರು ತನ್ನ 8 ತಿಂಗಳ ಮಗುವನ್ನು ಮಾತ್ರ ಅಜ್ಜಿ(ಕೃಷ್ಣಮ್ಮ)ಯ ಜೊತೆ ಬಿಟ್ಟು ಹೋಗಿದ್ದರು.

ಅಂದಿನಿಂದ ಭಿಕ್ಷೆ ಬೇಡಿ ಮಗುವನ್ನು ಸಾಕುತ್ತಿರುವ ಅಜ್ಜಿಗೀಗ 90 ವರ್ಷ ವಯಸ್ಸಾಗಿದ್ದು, ಸರಿಯಾಗಿ ಕಣ್ಣುಗಳು ಕಾಣುತ್ತಿಲ್ಲ. ಸದ್ಯ ಅಜ್ಜಿಗೆ ಆಸರೆಯಾಗಿರುವ 4 ವರ್ಷದ ಪುಟಾಣಿ ಬಾಲಕನೂ ಭಿಕ್ಷೆ ಬೇಡುತ್ತಿರುವುದು ಮೈಸೂರಿನ ಡಾನ್ ಬೋಸ್ಕೊ ಮಕ್ಕಳಾಲಯದ ಸಿಬ್ಬಂದಿಗೆ ತಿಳಿದು ಬಂದಿದೆ.

ಈ ಸಂಬಂಧ ಶುಕ್ರವಾರ ಯಲ್ಲಮ್ಮ ಕಾಲೋನಿಗೆ ಭೇಟಿ ನೀಡಿದ ಡಾನ್ ಬೋಸ್ಕೊ ಮಕ್ಕಳಾಲಯ, ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ವಿಶೇಷ ಪೊಲೀಸ್ ಸಿಬ್ಬಂದಿ ಅಜ್ಜಿ ಮತ್ತು ಮಗುವನ್ನು ರಕ್ಷಣೆ ಮಾಡಿ ಆಶ್ರಯ ಕಲ್ಪಿಸಿದ್ದಾರೆ.

ರಾಷ್ಟ್ರಕವಿ ಕುವೆಂಪುರಿಗೆ ಭಾರತ ರತ್ನ ಶಿಫಾರಸ್ಸು ಮಾಡಿದ ಸಿಎಂಗೆ ಅಭಿನಂದನೆ

ಶೀಘ್ರದಲ್ಲೇ ಪ್ರಧಾನಿ ಭೇಟಿ ಮಾಡಲು ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ನಿರ್ಧಾರ



ಮೈಸೂರು, ಸೆ.12(ಜಿಎ)–ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತ ರತ್ನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಭಿನಂದಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಮಾತನಾಡಿ, ಆ.29ರಂದು ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕುವೆಂಪು ಅವರಿಗೆ ಭಾರತ ರತ್ನ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಮನವಿ ಸಲ್ಲಿಸಲಾಗಿತ್ತು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಈ ವಿಷಯ ವಿಳಂಬವಾಗಿದೆ ಎಂದು ತಿಳಿಸಿ, ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಅವರಿಗೆ ಹಾಗೂ ಸರ್ಕಾರಕ್ಕೆ ಮೈಸೂರಿನ ಜನತೆ ನಾಡಿನ ಎಲ್ಲಾ ಸಾಹಿತಿಗಳ ಪರ ಧನ್ಯವಾದ ಎಂದರು.

ಟ್ರಸ್ಟ್ ವತಿಯಿಂದ ಪ್ರಧಾನ ಮಂತ್ರಿ ಮೋದಿ ಅವರಿಗೆ ಮನವಿ ಸಲ್ಲಿಸಲು ಸದ್ಯದಲ್ಲಿಯೇ ತೆರಳುತ್ತೇವೆ. ಅದಕ್ಕೂ ಮುನ್ನ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ ಪ್ರಹ್ಲಾದ್ ಜೋಷಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವೀರಪ್ಪ ಮೋಯ್ಲಿ, ಡಾ.ಮಂಜುನಾಥ್ ಅವರನ್ನು ಭೇಟಿ ಮಾಡಿ ಒತ್ತಡ ಹಾಕುವಂತೆ ಮನವಿ ಮಾಡುತ್ತೇವೆ ಎಂದರು.

ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ನಮ್ಮ ಮನವಿ ಇಂದು ಸಫಲವಾಗಿದ್ದು, ಮುಖ್ಯಮಂತ್ರಿಗಳು ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಅವರಿಗೆ, ಸರ್ಕಾರಕ್ಕೆ ಧನ್ಯವಾದ. ಈಗ ಚೆಂಡು ಕೇಂದ್ರ ಸರ್ಕಾರದ ಅಂಗಳದಲ್ಲಿದ್ದು, ರಾಜ್ಯದಿಂದ ಆಯ್ಕೆಗೊಂಡಿರುವ ಸಂಸದರು ಒತ್ತಡ ಹಾಕಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರೊ.ಸಿ.ನಾಗಣ್ಣ, ಡಾ.ಲತಾ ರಾಜಶೇಖರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಮೇಯರ್ ಮೋದಾಮಣಿ, ಎಂ.ಚಂದ್ರಶೇಖರ್ ಮತ್ತಿತರರಿದ್ದರು.

ಐಎಎಸ್, ಕೆಎಎಸ್ ಪರೀಕ್ಷಾರ್ಥಿಗಳಿಗೆ ಸೆ.16, ಉಚಿತ ತರಬೇತಿ ಶಿಬಿರ

ಮೈಸೂರು, ಸೆ.12(ಬಿಎಲ್‌ಯು) ಮೈಸೂರಿನ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 16 ರಂದು ಐಎಎಸ್ ಹಾಗೂ ಕೆಎಎಸ್ ಪರೀಕ್ಷಾರ್ಥಿಗಳಿಗೆ ಉಚಿತ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ.

ನಗರದ ಲಕ್ಷ್ಮಿಪುರಂನ ಸರ್ಕಾರಿ ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆಯುವ ಶಿಬಿರದಲ್ಲಿ ಮೈಸೂರು ಮೂಲದ 2023ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಕೆ.ಎಲ್. ಸೂರಜ್ ಅವರು ಪರೀಕ್ಷಾ ಸಿದ್ಧತೆ ಬಗ್ಗೆ ವಿಶೇಷ ಉಪನ್ಯಾಸ ನೀಡುವರು.

ಇದೇ ವೇಳೆ ಮೈಸೂರು ಮೃಗಾಲಯ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಿಕ ಪಿ.ಅನುಷಾ ಅವರು ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸುವರು. ಈ ಸಂದರ್ಭದಲ್ಲಿ ಅಖಿಲ ಭಾರತ ಸಹಕಾರ ಮಹಾಮಂಡಳದ ನಿರ್ದೇಶಕ ವೈ.ಎನ್. ಶಂಕರೇಗೌಡ ಉಪಸ್ಥಿತರಿರುವರು.





ಕೆ.ಎಲ್.ಸೂರಜ್ ಪಿ.ಅನುಷಾ

ವಿಶೇಷ ಅತಿಥಿಗಳಾಗಿ ಟಿ.ಸಿ.ಸುದೀಪ, ರೋಹನ್ ರವಿಕುಮಾರ್, ಪ್ರೊ.ಹೊನ್ನಯ್ಯ, ಪ್ರೊ.ವಿ.ಜಯಪ್ರಕಾಶ್, ಎಸ್.ಗಣೇಶ್ ಡಾ. ಈ.ಶಿವಪ್ರಸಾದ್, ಯು.ಎಂ. ಶರದ್ ರಾವ್, ಡಾ.ಕೃಷ್ಣ, ಡಾ.ಮೋಹನ್, ಡಾ. ಹೇಮಚಂದ್ರ, ರಾಜೀವ್ ಶರ್ಮಾ, ಮಂಜುನಾಥ್, ಮಹದೇವಪ್ಪ, ಡಾ.ಕೃಪ ಗಣೇಶ್, ಡಾ.ಎಸ್.ಬಿ.ಎಂ ಪ್ರಸನ್ನ, ಪ್ರೊ. ಸಿ.ಕೆ.ಕಿರಣ್ ಕೌಶಿಕ್, ಕೆ.ವೈ.ನಾಗೇಂದ್ರ ಭಾಗವಹಿಸಲಿದ್ದಾರೆ ಎಂದು ಜ್ಞಾನಬುತ್ತಿ ಸಂಸ್ಥೆಯ ಕಾರ್ಯದರ್ಶಿ ಹೆಚ್. ಬಾಲಕೃಷ್ಣ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ಧೋರಣೆ ವಿರುದ್ಧ

ಸನಾತನರು ಬೀದಿಗಿಳಿದರೆ ನೇಪಾಳ ಮಾದರಿ ಸರ್ಕಾರ ಪತನ

- ಮದ್ದೂರಿನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ
- ಅಲ್ಲಿಂದ ಕಲ್ಲು ತೂರಿದವರು ಯಾರು?
- ಮಸೀದಿ ಮೌಲ್ವಿಯನ್ನು ಜವಾಬ್ದಾರಿ ಮಾಡಬೇಕು
- ಪೂಜ್ಯ ತಂದೆ–ಮಗ ಬಿಟ್ಟು ಎಲ್ಲರೂ ನಮ್ಮ ಜೊತೆ ಇದ್ದಾರೆ

ಮೈಸೂರಿನಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ

ಮೈಸೂರು, ಸೆ.12(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ಧೋರಣೆ ತಳೆದರೆ ಸನಾತನ ಧರ್ಮೀಯರು ಬೀದಿಗಿಳಿದು ಹೋರಾಟ ಮಾಡಲಿದ್ದು, ನೇಪಾಳ ಮಾದರಿಯಲ್ಲಿ ಇಲ್ಲಿನ ಸರ್ಕಾರ ಪತನವಾಗುತ್ತದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ ನೀಡಿದರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಹಿಂದೂಗಳು ಮತ ಹಾಕಿದ್ದಾರೆ. ಆದರೂ ಈ ಸರ್ಕಾರ ಹಿಂದೂ ವಿರೋಧಿ ಧೋರಣೆ ತಳೆಯಲು ಏನು ಕಾರಣ? ಎಂದು ಪ್ರಶ್ನಿಸಿದರು.

ಮಸೀದಿಯೇ ಅಕ್ರಮ: ಮದ್ದೂರಿನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣವಾಗಿದೆ. ಮಸೀದಿ ನಿರ್ಮಾಣಕ್ಕೆ ಯಾವುದೇ ದಾಖಲಾತಿ ಇಲ್ಲ. ಆದರೂ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರ ಕತ್ತೆ ಕಾಯುತ್ತಿದೆಯೇ? ಎಂದು ಪ್ರಶ್ನಿಸಿದರು.

ಗಲಾಟೆ ನಡೆದಿರುವ ಸ್ಥಳದ ಮಸೀದಿಯನ್ನು ಸಂಪೂರ್ಣವಾಗಿ ತಪಾಸಣೆ ಮಾಡಬೇಕು. ಅಲ್ಲಿ ಕಲ್ಲು, ಶಸ್ತ್ರಾಸ್ತ್ರ ಇದ್ದರೆ ಆ ಮಸೀದಿಯ ಮೌಲ್ವಿಯನ್ನು ಜವಾಬ್ದಾರಿ ಮಾಡಬೇಕು. ಅಕ್ರಮವಾಗಿ ಮಸೀದಿ ನಿರ್ಮಾಣವಾಗಿರುವುದು ದೃಢಪಟ್ಟು ಅಲ್ಲಿ ಕಾನೂನು ವಿರೋಧಿ ಕೃತ್ಯ ನಡೆದರೆ ಮಸೀದಿ ನೆಲಸಮ ಮಾಡಬೇಕು ಎಂದು ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹಿಸಿದರು.

ಮಸೀದಿಯಲ್ಲಿ ಕಲ್ಲುಗಳಿಲ್ಲ ಎಂದಾದರೆ ಅಲ್ಲಿಂದ ಕಲ್ಲುಗಳನ್ನು ಯಾರು ತೂರಿದರು? ಎಂದು ಪ್ರಶ್ನೆ ಮಾಡಿದ ಬಸನಗೌಡ ಪಾಟೀಲ್ ಯತ್ನಾಳ್ ಅವರು, ಅಕ್ರಮವಾಗಿ ನಿರ್ಮಾಣವಾಗಿರುವ ಈ ಮಸೀದಿ ನೆಲಸಮ ಮಾಡಬೇಕು. ನನ್ನ ಹೇಳಿಕೆ ಪ್ರಚೋದನಾಕಾರಿಯಾಗಿದೆ ಎಂದು ಕೇಸ್ ಹಾಕಿದರೆ ನಾನು ಅದಕ್ಕೆಲ್ಲಾ ಹೆದರುವುದಿಲ್ಲ ಎಂದು ಹೇಳಿದರು.

ಮದ್ದೂರಿನ ಗಲಾಟೆಯಲ್ಲಿ ಮುಸ್ಲಿಂ ಅವರದ್ದು ತಪ್ಪಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ತಿಳಿಸಿದ್ದಾರೆ. ಹಾಗಾದರೆ ತಪ್ಪು ಮಾಡಿ ಅವಿತಿರುವ ಇನ್ನು ಹಲವರ ವಿರುದ್ಧ ಕ್ರಮ ಕೈಗೊಂಡಿಲ್ಲವೇಕೆ ಎಂದು ಪ್ರಶ್ನಿಸಿದರು.



ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಶುಕ್ರವಾರ ಮೈಸೂರಿಗೆ ಭೇಟಿ ನೀಡಿದ ಸಂದರ್ಭ

2028ಕ್ಕೆ ಬಿಜೆಪಿಲಿ ಕ್ರಾಂತಿ!: ಮದ್ದೂರಿನಲ್ಲಿ ನನಗೆ ಸಿಕ್ಕ ಪ್ರೀತಿ ನೋಡಿ ಎಲ್ಲರಿಗೂ ಜ್ಞಾನೋದಯವಾಗಿದೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ಒತ್ತಡಕ್ಕೆ ಮಣಿದು ನನ್ನ ವಿರುದ್ಧ ಕ್ರಮ ಕೈಗೊಂಡ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಪ್ರಾಯಶಃ ಪಶ್ಚಾತಾಪವಾಗಿರುತ್ತದೆ. ಬಿಜೆಪಿ ಹೈಕಮಾಂಡ್ ಕರ್ನಾಟಕ ರಾಜಕಾರಣದ ಬಗ್ಗೆ ಗಮನ ಹರಿಸಬೇಕು. ಇಲ್ಲದಿದ್ದರೆ 2028ಕ್ಕೆ ರಾಜ್ಯದಲ್ಲಿ ಕ್ರಾಂತಿಯಾಗುತ್ತದೆ. ನಾನು, ಪ್ರತಾಪ್ ಸಿಂಹ, ಜಾರಕಿಹೊಳಿ, ಕುಮಾರ್ ಬಂಗಾರಪ್ಪ ಸೇರಿದಂತೆ ಹಲವರು ಕೂಡಿ ಬದಲಾವಣೆ ತರುತ್ತೇವೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಿಂದ ಕೂಡಿದೆ. ಇದರಲ್ಲಿ ಬಿಜೆಪಿ ನಾಯಕರು ಕೂಡ ಅಡ್ಜೆಸ್ಟ್‌ಮೆಂಟ್ ರಾಜಕಾರಣ ಮಾಡುತ್ತಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಆಗುವ ಕೆಲಸ ಹಿಂದೂಗಳಿಗೆ ಆಗುತ್ತಿಲ್ಲ ಎಂದು ಆರೋಪ ಮಾಡಿದರು.

ನಾನೇ ರಾಜ್ಯದ ಮುಖ್ಯಮಂತ್ರಿಯಾಗ್ತೇನೆ: "ನಾನು ತಿನ್ನಲ್ಲ, ತಿನ್ನೋರಿಗೂ ಬಿಡಲ್ಲ" ಎಂದು ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳುತ್ತಾರೆ. ಆದರೆ ಇಲ್ಲಿ ಯಡಿಯೂರಪ್ಪ ಕುಟುಂಬ ಹಣ ಲೂಟಿ ಮಾಡುತ್ತಿದೆ. ಮೊದಲು ಪಕ್ಷದಲ್ಲಿ ಕುಟುಂಬ ರಾಜಕಾರಣ ಮುಕ್ತವಾಗಬೇಕು. ಒಂದು ವೇಳೆ ಅದು ಸಾಧ್ಯವಾಗದಿದ್ದರೆ ನಮ್ಮ ನಿಲುವು ಸ್ಪಷ್ಟಪಡಿಸುತ್ತೇವೆ. ನಮ್ಮದೇ ಸರ್ಕಾರ ರಚನೆ ಮಾಡಲು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಬಿಜೆಪಿಯನ್ನು ರಿಪೇರಿ ಮಾಡಿದರೆ ಆ ಪಕ್ಷದಲ್ಲೆ ಇರುತ್ತೇವೆ. ಇಲ್ಲ ದಿದ್ದರೆ ಬೇರೆ ಪಕ್ಷ ಕಟ್ಟಿ ನಾನೇ ರಾಜ್ಯದ ಮುಖ್ಯಮಂತ್ರಿ ಆಗುತ್ತೇನೆ. ಈ ಮೂಲಕ ರಾಜ್ಯದಲ್ಲಿ ಪ್ರಾಮಾಣಿಕ ಹಾಗೂ ಉತ್ತಮ ಆಡಳಿತ ನೀಡುತ್ತೇವೆ ಎಂದು ಹೇಳಿದರು.

ಈ ಬೆಳವಣಿಗೆ ಹಿನ್ನೆಲೆಯಲ್ಲಿ ಬಿಜೆಪಿ ಹೈಕಮಾಂಡ್ ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ, ನಾನು ಬಿಜೆಪಿ ಹೈಕಮಾಂಡ್ ಭೇಟಿ ಮಾಡಲ್ಲ. ನಮ್ಮ ಜೊತೆ ಬಿಜೆಪಿಯ ಎಲ್ಲರೂ ಇರುತ್ತಾರೆ. ಆದರೆ ಪೂಜ್ಯ ತಂದೆ, ಮಗ (ಯಡಿಯೂರಪ್ಪ ಮತ್ತು ವಿಜಯೇಂದ್ರ) ಬಿಟ್ಟು ಎಂದು ಸ್ಪಷ್ಟಪಡಿಸಿದರು.

ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವವರು ಸನಾತನಿಗಳಾಗಿರಬೇಕು

ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವವರು ಸನಾತನಿಗಳಾಗಿರಬೇಕು. ಮೂರ್ತಿ ಪೂಜೆ ಮಾಡುವುದಿಲ್ಲ ಎನ್ನುವವರು ದಸರಾ ಉದ್ಘಾಟಿಸಬಾರದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸುವುದನ್ನು ತೀವ್ರವಾಗಿ ವಿರೋಧಿಸಿದ್ದಾರೆ.

ದಸರಾ ಮಹೋತ್ಸವದಲ್ಲಿ ಬಾನು ಮುಷ್ತಾಕ್ ಅವರಿಂದ ಬೇರೆ ಕಾರ್ಯಕ್ರಮ ಉದ್ಘಾಟನೆ ಮಾಡಿಸಲಿ. ಆದರೆ ದಸರಾ ಉದ್ಘಾಟನೆಯಿಂದ ಮಾತ್ರ ದೂರ ಇರಬೇಕು ಎಂದು ಸಲಹೆ ನೀಡಿದರು.

ಮೂರ್ತಿ ಪೂಜೆ ವಿರೋಧಿಸುವವರು ದಸರಾ ಉದ್ಘಾಟನೆ ಮಾಡುತ್ತಿರುವ ಬಗ್ಗೆ ಮುಸ್ಲಿಂ ಧರ್ಮ ಗುರುಗಳು ಏನು ಹೇಳುತ್ತಾರೆ. ಹಾಗಾದರೆ ಮೂರ್ತಿ ಪೂಜೆಯನ್ನು ಅವರು ಒಪ್ಪುತ್ತಾರೆಯೇ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಪ್ರಶ್ನಿಸಿದರು.

ಹಿಂದೂ ಧಾರ್ಮಿಕ ವಿಧಿ ವಿಧಾನ ಒಪ್ಪದವರಿಂದ ದಸರಾ ಉದ್ಘಾಟಿಸುತ್ತಿರುವ ಸಿದ್ದರಾಮಯ್ಯ ಅವರ ರಾಜಕೀಯ ಅಂತ್ಯ ಚಾಮುಂಡಿಬೆಟ್ಟದಿಂದಲೇ ಆಗುತ್ತದೆ ಎಂದು ಭವಿಷ್ಯ ನುಡಿದರು. ಅಡ್ಜೆಸ್ಟ್‌ಮೆಂಟ್ ರಾಜಕಾರಣ ಮಾಡುವವರು ನಾಶ ಆಗಲಿ ಎಂದು ನಾನು ತಾಯಿ ಚಾಮುಂಡೇಶ್ವರಿಯನ್ನು ಬೇಡಿದ್ದೇನೆ ಎಂದು ತಿಳಿಸಿದರು.

ಧರ್ಮಸ್ಥಳದ ಬುರುಡೆ ಪ್ರಕರಣದಲ್ಲಿ ಷಡ್ಯಂತ್ರ ನಡೆಯುತ್ತಿದೆ. ಎಸ್‌ಐಟಿ ಈ ಬಗ್ಗೆ ತನಿಖೆ ಮಾಡುತ್ತಿದೆ. ತನಿಖಾ ವರದಿ ಬಂದ ನಂತರ ಈ ಬಗ್ಗೆ ಮಾತನಾಡುತ್ತೇನೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಸ್ಪಷ್ಟಪಡಿಸಿದರು.

ನಿಮ್ಮನ್ನು ಶಾಸಕ ಪ್ರದೀಪ್ ಈಶ್ವರ್ ಕೋತಿ ಎಂದು ಕರೆದಿದ್ದಾರಲ್ಲ ಎಂಬ ಪ್ರಶ್ನೆಗೆ, ನಾನು ಮನುಷ್ಯರ ಹೇಳಿಕೆಗೆ ಮಾತ್ರ ಉತ್ತರ ಕೊಡುತ್ತೇನೆ. ಲೋಕಸಭಾ ಚುನಾವಣೆಯಲ್ಲಿ ಡಾ.ಸುಧಾಕರ್ ಗೆದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದ್ದರು. ಇದನ್ನು ನೆನಪು ಮಾಡಿಕೊಂಡು ಪ್ರದೀಪ್ ಈಶ್ವರ್ ಮೊದಲು ರಾಜೀನಾಮೆ ನೀಡಲಿ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಸಲಹೆ ನೀಡಿದರು.

ಮೊಬೈಲ್‌ನಲ್ಲಿನ ಪ್ರಚೋದನಾಕಾರಿ ವಿಡಿಯೋ ನೋಡಿ ಕಾಲಹರಣ ಮಾಡಬೇಡಿ

ವಿದ್ಯಾರ್ಥಿಗಳಿಗೆ ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಸಲಹೆ



ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 2025–26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು.

ಮೈಸೂರು, ಸೆ.12(ಬಿಎಲ್‌ಯು)– ಮೊಬೈಲ್‌ನಲ್ಲಿ ಪ್ರಚೋದನಾಕಾರಿ ವಿಡಿಯೋಗಳನ್ನು ನೋಡುತ್ತಾ ಕಾಲಹರಣ ಮಾಡುವುದರ ಬದಲು ಜ್ಞಾನವೃದ್ಧಿಗೆ ಆ ಸಮಯ ಬಳಸಿಕೊಂಡರೆ ಬದುಕು ಬಂಗಾರವಾಗುತ್ತದೆ ಎಂದು ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಸಲಹೆ ನೀಡಿದರು.

ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಇಂದು ಹಮ್ಮಿಕೊಂಡಿದ್ದ 2025–26 ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ರೇಂಜರ್ಸ್ ಅಂಡ್ ರೋವರ್ಸ್ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ನಿರಂತರ ಕಲಿಕೆ ಹಾಗೂ ಜ್ಞಾನ ವೃದ್ಧಿ ಮೂಲಕ ಬೌದ್ಧಿಕ ಸಾಮರ್ಥ ಹೆಚ್ಚಿಸಿಕೊಂಡರೆ ಮಾತ್ರ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಮೊಬೈಲ್‌ಗೆ ದಾಸರಾಗದೆ ಮನಸ್ಸಿನ ಭಾವನೆಗಳನ್ನು ಹಿಡಿದಿಟ್ಟುಕೊಂಡು ಸೋತ ಭೂತ ಕಾಲ ಮರೆತು, ವರ್ತಮಾನದಿಂದಲೇ ಭವಿಷ್ಯ ಕಟ್ಟಿಕೊಂಡರೆ ಯಶಸ್ಸು ಕಾಣಲು ಸಾಧ್ಯವಾಗುತ್ತದೆ. ಈ ಮೂಲಕ ಅವಕಾಶಗಳು ನೀವಿರುವಲ್ಲಿಯೇ ಬರುತ್ತದೆ ಎಂದು ಪ್ರೊ.ಕೃಷ್ಣೇಗೌಡರು ಅಭಿಪ್ರಾಯಪಟ್ಟರು.

ಅಂಕಪಟ್ಟಿ ಜೊತೆಗೆ ಗ್ರಹಿಕೆಯ ಶಕ್ತಿ ಉದ್ಯೋಗಾವಕಾಶಕ್ಕೆ ಮಾನದಂಡವಾಗುತ್ತದೆ. ಸ್ನೇಹಿತರಲ್ಲಿ ಉತ್ತಮ ಒಡನಾಡ ಇರಬೇಕು. ಆದರೆ ನಿಮ್ಮೆಲ್ಲಾ ತಪ್ಪುಗಳಿಗೆ ಸಹಕರಿಸುವ ಸ್ನೇಹಿತರ ಜೊತೆ ಹೋಗಬೇಡಿ ಎಂದು ಸಲಹೆ ನೀಡಿದರು.

ವಿದ್ಯೆ ಜೊತೆಗೆ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಈ ಎಲ್ಲಾ ಗುಣಗಳು ಇದ್ದರೆ ನಿಮ್ಮ ಬದುಕು ಹಸನಾಗುತ್ತದೆ ಎಂದು ಪ್ರೊ.ಕೃಷ್ಣೇಗೌಡರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ.ಬೆಟ್ಟೇಗೌಡ ಅವರು, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವದ ವಿಕಾಸಕ್ಕೆ ಶೈಕ್ಷಣಿಕ ಚಟುವಟಿಕೆಗಳು ಬಹಳ ಮಹತ್ವದ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಯನ್ನು ದೈಹಿಕವಾಗಿ ದೃಢಪಡಿಸಿದರೆ, ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಯನ್ನು ಪ್ರಬುದ್ಧಗೊಳಿಸುತ್ತದೆ. ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್ ಕ್ರಾಸ್ ಸೇರಿದಂತೆ ಇತರೆ ಚಟುವಟಿಕೆಗಳು ದೇಶ ಪ್ರೇಮ ಮೂಡಿಸುತ್ತದೆ ಎಂದು ಪ್ರೊ.ಬೆಟ್ಟೇಗೌಡರು ಹೇಳಿದರು.

ಸಿಡಿಸಿ ಸದಸ್ಯ ಲಖನ್ ನಾಯಕ್, ಜಗದೀಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ. ಆರ್.ಗುರುಸ್ವಾಮಿ ಸ್ವಾಗತಿಸಿದರು, ಪ್ರೊ.ಶಿಲ್ಪಾ ಕಾರ್ಯಕ್ರಮ ನಿರೂಪಣೆ ಮಾಡಿದರು.

ವಿವಿಧ ಹಂತದಿಂದ ಕನ್ನಡ ಜಾಗೃತಿ ಸಮಿತಿಗೆ 249 ಸದಸ್ಯರ ನಾಮ ನಿರ್ದೇಶನ

ಮೈಸೂರು, ಸೆ.12(ಎಸ್‌ಪಿಎನ್)– ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯದ 11 ಮಹಾನಗರ ಪಾಲಿಕೆಗಳು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 28 ವಿಧಾನ ಸಭಾ ಕ್ಷೇತ್ರಗಳು ಹಾಗೂ ರಾಜ್ಯ 30 ಜಿಲ್ಲೆಗಳ ಜಿಲ್ಲಾ ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗೆ 249 ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನ ಮಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ(ಆಡಳಿತ ಕನ್ನಡ)ಯ ಅಧೀನ ಕಾರ್ಯದರ್ಶಿ ಕೆ.ಆರ್.ರಮೇಶ್ ಆದೇಶಿಸಿದ್ದಾರೆ.

2020ರ ನ.18ರಂದು ರಾಜ್ಯದ 11 ಮಹಾನಗರ ಪಾಲಿಕೆಯ ವ್ಯಾಪ್ತಿ, ಜಿಲ್ಲಾ ಹಾಗೂ ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನೇಮಕವಾಗಿದ್ದ ಈ ಹಿಂದಿನ ಸದಸ್ಯತ್ವವನ್ನು ರದ್ದುಪಡಿಸಿ, ನೂತನವಾಗಿ ರಾಜ್ಯದ ಪ್ರತಿ ಜಿಲ್ಲೆಗೆ ತಲಾ ಐವರು ಸದಸ್ಯರಂತೆ 155 ಸದಸ್ಯರು, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಿಗೆ 28 ಸದಸ್ಯರು ಹಾಗೂ ರಾಜ್ಯದಲ್ಲಿನ 11 ಮಹಾನಗರ ಪಾಲಿಕೆಗಳಿಗೆ ತಲಾ 6 ಸದಸ್ಯರು ಸೇರಿದಂತೆ ಕನ್ನಡ ಜಾಗೃತಿ ಸಮಿತಿಗಳಿಗೆ ಒಟ್ಟು 249 ನೂತನ ಅಧಿಕಾರೇತರ ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ: 18 ಕೆಬಿಎಲ್ 97, 21.10.1997 ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಾಮ ನಿರ್ದೇಶನ: ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಕೆ.ಆರ್. ಗೋಪಾಲಕೃಷ್ಣ (ನೆಲೆ ಹಿನ್ನಲೆ), ಡಾ. ದಿನಮಣಿ(ಬಾತಿ), ನಾ.ದಿವಾಕರ, ಪರಮೇಶ್, ಮೋಹನ್‌ಕುಮಾರ್ ಗೌಡ, ಡಾ. ಎಂ.ಜಿ.ಮಂಜಪ್ಪ ಶೆಟ್ಟಿ ಮಸಗಲಿ ಸದಸ್ಯರಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ನಾಮ ನಿರ್ದೇಶನಗೊಂಡಿದ್ದಾರೆ.

ಮೈಸೂರು, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ರಾಜ್ಯ ಮಟ್ಟದಲ್ಲಿ ಟಿ.ಗುರುರಾಜ್ ಸದಸ್ಯರಾಗಿ ಈಗಾಗಲೇ ಆಯ್ಕೆಯಾಗಿದ್ದು, ಮೈಸೂರು ಜಿಲ್ಲೆಯಿಂದ ಡಾ.ವಿನೋದಮ್ಮ, ಎಚ್. ಆರ್.ರವಿಪ್ರಸಾದ್, ಕುಮಾರ್, ಜಿ.ಮೋಹನ್, ಕಡಕೋಳ ಕುಮಾರ ಸ್ವಾಮಿ ನೇಮಕವಾಗಿದ್ದಾರೆ. ಚಾಮರಾಜ ನಗರ ಜಿಲ್ಲಾ ಮಟ್ಟದಲ್ಲಿ ಪದ್ಮಾ ಪುರುಷೋತ್ತಮ್, ಎಂ.ಬಿ.ಗುರುಸ್ವಾಮಿ, ರೂಬಿನ್ ಸಂಜಯ್, ಪಿ.ಮಹೇಶ್, ಎಂ.ಅರುಣ್‌ಕುಮಾರ್ ನೇಮಕವಾಗಿದ್ದಾರೆ. ಹಾಸನ ಜಿಲ್ಲೆಯಿಂದ ಎ.ಆರ್. ಸುದರ್ಶನ ಬಾಬು, ರತಿ, ಕೆ.ಜಿ. ಸುರೇಶ್, ಕೆ.ರಾಘವೇಂದ್ರ ಕುಮಾರ್, ಆರ್.ಬಿ.ಪುಟ್ಟೇಗೌಡ ನೇಮಕವಾಗಿದ್ದಾರೆ.

ಕೊಡಗು ಜಿಲ್ಲೆಯಿಂದ ಬಿ.ಆರ್. ಲೋಕೇಶ್ ಸಾಗರ್, ಡಾ.ಎಚ್.ಎಂ. ಕಾವೇರಿ, ಅಮಿನ್ ಮೊಹಿಸಿನ್, ಡಾ.ರಾಧಿಕಾ ಕುಟ್ಟಪ್ಪ, ಕೆ.ವಿ.ಸುನಿಲ್ ಕುಮಾರ್ ನೇಮಕವಾಗಿದ್ದಾರೆ. ಮಂಡ್ಯ ಜಿಲ್ಲೆಯಿಂದ ರಾಜ್ಯಮಟ್ಟದ ಸದಸ್ಯರಾಗಿ ಟಿ.ತಿಮ್ಮೇಶ್ ಆಯ್ಕೆಯಾಗಿದ್ದು, ಜಿಲ್ಲಾ ಮಟ್ಟದಿಂದ ಕೆ.ಎಂ.ಕೃಷ್ಣೇಗೌಡ ಕೀಲಾರ, ಸಿ.ಎನ್.ಮಂಜೇಶ್ ಚನ್ನಾಪುರ, ಪ್ರೊ.ಜಿ. ಉಷಾರಾಣಿ, ಮಂಜು, ಪ್ರತಿಭಾಂಜಲಿ ಡೇವಿಡ್ ಆಯ್ಕೆಯಾಗಿದ್ದಾರೆ.

ಕನ್ನಡ ನಾಮಫಲಕ, ಕನ್ನಡಿಗರಿಗೆ ಉದ್ಯೋಗ, ಮೂಲ ಸೌಕರ್ಯಕ್ಕೆ ಆಗ್ರಹಿಸಿ

ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಸೆ.15ರಿಂದ ಜಾಗೃತಿ ಜಾಥಾ

ಮೈಸೂರು, ಸೆ.12(ಜಿಎ)–ಕನ್ನಡ ನಾಮಫಲಕ, ಕನ್ನಡಿಗರಿಗೆ ಉದ್ಯೋಗ, ಕಾರ್ಮಿಕರಿಗೆ ಮೂಲಭೂತ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಸೆ.15ರಿಂದ 18ರವರೆಗೆ ಜಾಗೃತಿ ಜಾಥಾ ನಡೆಸಲಾಗುತ್ತದೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.15ರಿಂದ ಪ್ರಾರಂಭವಾಗುವ ಈ ಜಾಗೃತಿ ಜಾಥಾ ಹೂಟಗಳ್ಳಿ, ಕೂರ್ಗಳ್ಳಿ, ಹೆಬ್ಬಾಳ್ ಮತ್ತು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ನಾಲ್ಕು ದಿನಗಳ ಕಾಲ ನಿರಂತರವಾಗಿ ನಡೆಯಲಿದೆ. ಮೊದಲ ದಿನದ ಉದ್ಘಾಟನೆಯನ್ನು ಶಾಸಕರಾದ ಜಿ.ಟಿ.ದೇವೇಗೌಡ ಅವರು ನೆರವೇರಿಸಲಿದ್ದಾರೆ ಎಂದರು.

ಕಾರ್ಖಾನೆಗಳಲ್ಲಿ ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ನೀಡುತ್ತಿಲ್ಲ. ಕಡ್ಡಾಯವಾಗಿ ಕನ್ನಡಿಗರಿಗೆ ಉದ್ಯೋಗ ನೀಡಬೇಕು. ಉತ್ತರ ಪ್ರದೇಶ ಮತ್ತು ಬಿಹಾರ ಸೇರಿದಂತೆ ಉತ್ತರ ಭಾರತೀಯರಿಗೆ ಕೆಲಸ ನೀಡಲಾಗುತ್ತಿದೆ. ನಮ್ಮ ನೆಲ, ಜಲ ಮತ್ತು ಪರಿಸರವನ್ನು ಹಾಳು ಮಾಡುತ್ತಿರುವುದಲ್ಲದೇ ಸ್ಥಳೀಯರನ್ನು ಉದ್ಯೋಗ ವಂಚಿತರನ್ನಾಗಿ ಮಾಡಲಾಗುತ್ತಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಾಗೃತಿ ಜಾಥಾದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ದಿನಗೂಲಿ ನೌಕರರಿಗೆ ಕನಿಷ್ಠ ವೇತನ ನೀಡುತ್ತಿಲ್ಲ, 12 ಗಂಟೆಗಳ ಕಾಲ ದುಡಿಸಿಕೊಳ್ಳಲಾಗುತ್ತಿದೆ. ಕಾರ್ಖಾನೆಗಳ ಕ್ಯಾಂಟೀನ್‌ಗಳಲ್ಲೂ ಪರ್ಮನೆಂಟ್ ನೌಕರರಿಗೆ ಉತ್ತಮ ಗುಣಮಟ್ಟದ ಊಟ ನೀಡಿದರೆ, ದಿನಗೂಲಿ ನೌಕರರಾಗಿರುವ ಸ್ಥಳೀಯರಿಗೆ ಗುಣಮಟ್ಟದ ಊಟ ನೀಡುತ್ತಿಲ್ಲ. ಬಹಳಷ್ಟು ಕಾರ್ಖಾನೆಗಳಲ್ಲಿ ಕಾರ್ಮಿಕರಿಂದ ಇಎಸ್‌ಐ, ಪಿಎಫ್ ವಂತಿಗೆ ಕಡಿತ ಮಾಡಿಕೊಂಡರೂ ಕಾರ್ಖಾನೆ ಪಾಲು ಸೇರಿಸಿ ಸಂಬಂಧ ಪಟ್ಟ ಇಲಾಖೆಗೆ ಹಣ ಜಮೆ ಮಾಡುತ್ತಿಲ್ಲ, ಆರೋಗ್ಯ ಸೌಲಭ್ಯವನ್ನೂ ಸಹ ನೀಡುತ್ತಿಲ್ಲ. ಕಾರ್ಮಿಕರಿಗೆ ಉದ್ಯೋಗ ಭದ್ರತೆ ನೀಡುತ್ತಿಲ್ಲ, ಸುರಕ್ಷತೆಯಂತೂ ಮರೀಚಿಕೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸೆ.15 ರಿಂದ 18 ರವರೆಗೆ ನಾಲ್ಕು ದಿನಗಳ ಕಾಲ ಕೈಗಾರಿಕಾ ಪ್ರದೇಶಗಳಲ್ಲಿ ಜಾಗೃತಿ ಜಾಥಾ ನಡೆಸಲಾಗುವುದು. ಮೊದಲ ದಿನ ಸೋಮವಾರ ಹೂಟಗಳ್ಳಿ, ಮಂಗಳವಾರ ಕೂರ್ಗಳ್ಳಿ, ಬುಧವಾರ ಹೆಬ್ಬಾಳು ಮತ್ತು ಗುರುವಾರ ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಜಾಗೃತಿ ಜಾಥಾ ನಡೆಸಿ ಕಾರ್ಖಾನೆಗಳ ಮುಖ್ಯಸ್ಥರಿಗೆ ಸರ್ಕಾರದ ಕಾನೂನು ಮತ್ತು ಕಟ್ಟಳೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ, ಕಾರ್ಮಿಕರಿಗೆ ವೇತನ ತಾರತಮ್ಯ ಮತ್ತು ಊಟೋಪಚಾರದಲ್ಲಿ ನಡೆಯುತ್ತಿರುವ ತಾರತಮ್ಯವನ್ನು ತಪ್ಪಿಸಬೇಕು. ಇಲ್ಲದಿದ್ದಲ್ಲಿ ಅಂತಹ ಕಾರ್ಖಾನೆ ವಿರುದ್ಧ ದೂರು ನೀಡುವುದಲ್ಲದೇ ಸಂಘಟನೆಯಿಂದ ಪ್ರತಿಭಟನೆಯನ್ನೂ ಸಹ ನಡೆಸುವ ಎಚ್ಚರಿಕೆ ನೀಡಲಾಗುತ್ತದೆ ಎಂದರು.

ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿರುವ ಬಹುತೇಕ ಕಾರ್ಖಾನೆಗಳ ನಾಮಫಲಕಗಳಲ್ಲಿ ಕನ್ನಡ ಭಾಷೆ ಬಳಸಿಲ್ಲ, ಇದು ಖಂಡನೀಯ, ಸರ್ಕಾರ ಶೇ. 60 ರಷ್ಟು ಕನ್ನಡ ಬಳಕೆ ಕಡ್ಡಾಯ ಎಂದು ಕಾನೂನು ಮಾಡಿದ್ದರೂ ಕಾರ್ಖಾನೆಯವರು ನಿರ್ಲಕ್ಷ್ಯ ಮಾಡಿದ್ದಾರೆ. ಅಲ್ಲದೇ ಕನ್ನಡ ಭಾಷೆಯಲ್ಲಿ ವ್ಯವಹಾರ ನಡೆಸುತ್ತಿಲ್ಲ, ವ್ಯವಹಾರದಲ್ಲೂ ಕನ್ನಡ ಭಾಷೆ ಬಳಕೆ ಮಾಡುವಂತೆ ಕೈಗಾರಿಕಾ ಪ್ರದೇಶಗಳಲ್ಲಿ ಜಾಗೃತಿ ಮೂಡಿಸಿ ನಂತರ ಪಾಲನೆ ಮಾಡದಿದ್ದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಡಿಪಿಕೆ ಪರಮೇಶ್, ರಾಜ್ಯ ಖಜಾಂಚಿ ನಂಜುಂಡ, ಮೈಸೂರು ಜಿಲ್ಲಾ ಅಧ್ಯಕ್ಷ ಸಂತೋಷ್, ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷರಾದ ಮಂಜುಳ, ಪದಾಧಿಕಾರಿಗಳಾದ ಸಿಂಧುವಳ್ಳಿ ಶಿವಕುಮಾರ್, ಮನುಗೌಡ, ಸೋಮಶೇಖರ, ಗೌತಮ್, ಅನುರಾಜ್ ಗೌಡ, ಮಂಜುನಾಥ್, ಸಿದ್ದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ನಾಳೆಯಿಂದ ಎರಡು ದಿನ ನೀರು ಪೂರೈಕೆ ವ್ಯತ್ಯಯ

ಮೈಸೂರು, ಸೆ.12–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತ ಮತ್ತು ಬೆಳಗೊಳ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಮೇಟಗಳ್ಳಿ ಸಬ್ ಸ್ಟೇಷನ್‌ನಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಇರುವುದರಿಂದ ಸೆ.14 ಮತ್ತು ಸೆ.15ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ನೀರು ಸರಬರಾಜಿನಲ್ಲಿ ವ್ಯತ್ಯಯವುಂಟಾಗುವ ಪ್ರದೇಶಗಳು: ಹೆಚ್‌ಎಲ್‌ಆರ್ ಆಶ್ರಿತ ಪ್ರದೇಶಗಳು–ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ, ಎ, ಬಿ, ಸಿ ಲೇಔಟ್, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ವೀರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಭಾಗಶಃ ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್ ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ 8, 17, 18, 19, 23 ರಿಂದ 27, 40, 41, 55, 60, 61, 62 ಹಾಗೂ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶಗಳು ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ದೇಶ – ವಿದೇಶ

ಟೇಕ್ ಆಫ್ ಆದ ನಂತರ ಕಳಚಿ ಬಿತ್ತು ಚಕ್ರ; ಸ್ಪೈಸ್ ಜೆಟ್ ವಿಮಾನ ಮುಂಬೈನಲ್ಲಿ ತುರ್ತು ಲ್ಯಾಂಡಿಂಗ್

ಮುಂಬೈ: ಕಾಂಡ್ಲಾ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ನಂತರ ಸ್ಪೈಸ್ ಜೆಟ್ ವಿಮಾನದ ಚಕ್ರ ಕಳಚಿ ಬಿದ್ದಿದ್ದು, ವಿಮಾನ ಮುಂಬೈ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಮೂಲಗಳು ತಿಳಿಸಿವೆ.



ಸೆ.12 ರಂದು ಕಾಂಡ್ಲಾದಿಂದ ಮುಂಬೈಗೆ ಪ್ರಯಾಣಿಸುತ್ತಿದ್ದ ಸ್ಪೈಸ್‌ಜೆಟ್ ಕ್ಯು400 ವಿಮಾನದ ಹೊರ ಚಕ್ರವು ಟೇಕ್ ಆಫ್ ಆದ ನಂತರ ರನ್‌ವೇಯಲ್ಲಿ ಕಳಚಿ ಬಿದ್ದಿರುವುದು ಕಂಡುಬಂದಿದೆ. ಆದರೂ ವಿಮಾನ ಮುಂಬೈಗೆ ತನ್ನ ಪ್ರಯಾಣವನ್ನು ಮುಂದುವರೆಸಿತು ಮತ್ತು ಸುರಕ್ಷಿತವಾಗಿ ಲ್ಯಾಂಡ್ ಆಗಿದೆ ಎಂದು ವಿಮಾನಯಾನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಸುರಕ್ಷಿತ ಲ್ಯಾಂಡಿಂಗ್ ನಂತರ, ವಿಮಾನವು ತನ್ನದೇ ಆದ ಶಕ್ತಿಯಿಂದ ಟರ್ಮಿನಲ್‌ಗೆ ಆಗಮಿಸಿತು ಮತ್ತು ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿ ಇಳಿದರು ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ವಾಷಿಂಗ್ ಮೆಷಿನ್ ವಿಚಾರಕ್ಕೆ ವಾಗ್ವಾದ: ಕರ್ನಾಟಕ ಮೂಲದ ವ್ಯಕ್ತಿ ಹತ್ಯೆ

ಡಲ್ಲಾಸ್: ಅಮೆರಿಕದ ಡಲ್ಲಾಸ್‌ನಲ್ಲಿ ಭಾರತ ಮೂಲದ ವ್ಯಕ್ತಿಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಅವರು ಕರ್ನಾಟಕದವರು ಎನ್ನಲಾಗಿದೆ ಈ ಘಟನೆ ಸೆ10 ರಂದು ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿರುವ ಡೌನ್‌ಟೌನ್ ಸೂಟ್ಸ್ ಮೋಟೆಲ್‌ನಲ್ಲಿ ನಡೆದಿದೆ. ಭಾರತ ಮೂಲದ 50 ವರ್ಷದ ಚಂದ್ರ ನಾಗಮಲ್ಲಯ್ಯ ಅವರನ್ನು ಅವರ ಪತ್ನಿ ಮತ್ತು ಮಗನ ಎದುರೇ ರುಂಡ ಕತ್ತರಿಸಿ ಕೊಲೆ ಮಾಡಲಾಗಿದೆ.



ಹಂತಕ ನಾಗಮಲ್ಲಯ್ಯ

ಡಲ್ಲಾಸ್ ಪೊಲೀಸರು ಯೋರ್ಡಾನಿಸ್ ಕೊಬೋಸ್–ಮಾರ್ಟಿನೆಜ್ ಅವರನ್ನು ಕೊಲೆ ಪ್ರಕರಣದಲ್ಲಿ ಶಂಕಿತ ಎಂದು ಗುರುತಿಸಿದ್ದು ಆತನನ್ನು ಬಂಧಿಸಿದ್ದಾರೆ.

ನಾಗಮಲ್ಲಯ್ಯ, ತನ್ನ ಸಹೋದ್ಯೋಗಿ ಯೋರ್ಡಾನಿಸ್ ಕೋಬೋಸ್–ಮಾರ್ಟಿನೆಜ್ ಜೊತೆ ಒಡೆದ ವಾಷಿಂಗ್ ಮೆಷಿನ್ ಬಗ್ಗೆ ನಡೆದ ವಾಗ್ವಾದದ ನಂತರ ಹತ್ಯೆ ಮಾಡಲಾಗಿದೆ. ಈ ವೇಳೆ ಕೋಬೋಸ್–ಮಾರ್ಟಿನೆಜ್ ಮಚ್ಚು ಹೊರತೆಗೆದು ನಾಗಮಲ್ಲಯ್ಯನವರ ಮೇಲೆ ಸತತವಾಗಿ ಹಲ್ಲೆ ನಡೆಸುತ್ತಿರುವುದು ಸೆರೆಯಾಗಿದೆ. ಗಾಯಗೊಂಡ ನಾಗಮಲ್ಲಯ್ಯ ಅವರು ಪತ್ನಿ ಮತ್ತು 18 ವರ್ಷದ ಪುತ್ರನಿದ್ದ ಮೋಟೆಲ್ ಕಚೇರಿಯತ್ತ ಓಡಿಹೋಗಿದ್ದಾರೆ. ಆದರೆ ಆರೋಪಿ ಅವರನ್ನು ಹಿಂಬಾಲಿಸಿ, ನಿರಂತರವಾಗಿ ಮಚ್ಚಿನಿಂದ ಹಲ್ಲೆ ಮಾಡಿದ್ದಾನೆ ಎಂದು ತಿಳಿದು ಬಂದಿದೆ.

ನೇಪಾಳ ಕಿಚ್ಚಿಗೆ ಭಾರತೀಯ ಮಹಿಳೆ ಸಾವು

ಕಠ್ಮಂಡು: ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಪ್ರತಿಭಟನಾಕಾರರು ಹೋಟೆಲ್‌ಗೆ ಬೆಂಕಿ ಹಚ್ಚಿದ್ದರಿಂದ ಉತ್ತರ ಪ್ರದೇಶದ ಗಾಜಿಯಾಬಾದ್ ಮೂಲದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ.



ಮೃತ ಮಹಿಳೆಯನ್ನು ರಾಜೇಶ್ ಗೋಲಾ (57) ಎಂದು ಗುರುತಿಸಲಾಗಿದೆ. ಅವರು ತಮ್ಮ ಪತಿ ರಾಮ್‌ವೀರ್ ಸಿಂಗ್ ಗೋಲಾ ಜೊತೆ ಸೆ.7 ರಂದು ನೇಪಾಳಕ್ಕೆ ತೆರಳಿದ್ದರು.

ಈ ಸಮಯದಲ್ಲಿ ನೇಪಾಳದಲ್ಲಿ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಪ್ರತಿಭಟನಾಕಾರರು ಮನಸ್ಸಿಗೆ ಬಂದಂತೆ ಸಿಕ್ಕ ಸಿಕ್ಕ ಕಟ್ಟಡಗಳಿಗೆ ಹಾನಿ ಮಾಡಿದ್ದರು. ಅದೇ ರೀತಿ ರಾಮ್‌ವೀರ್ ಸಿಂಗ್ ಕುಟುಂಬ ತಂಗಿದ್ದ ಹೋಟೆಲ್‌ಗೆ ಸೆ.9 ರಂದು ಬೆಂಕಿ ಹಚ್ಚಿದ್ದರು.

ಹೊತ್ತಿ ಉರಿಯುತ್ತಿದ್ದ ಹೋಟೆಲ್‌ನಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಗೋಲಾ ದಂಪತಿ ಪರದಾಡಿದ್ದರು. ಈ ವೇಳೆ ರಾಜೇಶ್ ಗೋಲಾ ಪತಿಯಿಂದ ಬೇರ್ಪಟ್ಟು, ಜೀವ ಉಳಿಸಿಕೊಳ್ಳಲು ಕಟ್ಟಡದಿಂದ ಜಿಗಿದಿದ್ದರು. ದುರಾದೃಷ್ಟವಶಾತ್ ಅವರು ಸಾವನ್ನಪ್ಪಿದ್ದಾರೆ.

ನೇಪಾಳದಲ್ಲಿ ನಡೆಯುತ್ತಿರುವ ಯುವಜನರ ದಂಗೆಯಲ್ಲಿ ಸಾವನ್ನಪ್ಪಿದವರ ಸಂಖ್ಯೆ 31ಕ್ಕೆ ಏರಿದೆ.

ಚಲಿಸುತ್ತಿದ್ದ ರೈಲಿನಿಂದ ಜಿಗಿದು ಬಾಲಿವುಡ್ ನಟಿ ಕರಿಷ್ಮಾ ಶರ್ಮಾಗೆ ಗಂಭೀರ ಗಾಯ

ಮುಂಬೈ: 'ರಾಗಿಣಿ ಎಂಎಂಎಸ್ ರಿಟರ್ನ್ಸ್' ಮತ್ತು 'ಪ್ಯಾರ್ ಕಾ ಪಂಚ್ನಾಮಾ' ಸಿನಿಮಾಗಳಿಂದ ಪ್ರಸಿದ್ಧಿಯಾಗಿರುವ ಬಾಲಿವುಡ್ ನಟಿ ಕರಿಷ್ಮಾ ಶರ್ಮಾ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಗಂಭೀರವಾಗಿ ಗಾಯಗೊಂಡಿದ್ದಾರೆ. ಸದ್ಯ ಅವರು ಆಸ್ಪತ್ರೆಗೆ ದಾಖಲಾಗಿದ್ದು, ವೈದ್ಯಕೀಯ ನಿಗಾವಣೆಯಲ್ಲಿದ್ದಾರೆ. ಶೂಟಿಂಗ್‌ಗಾಗಿ ಚರ್ಚ್‌ಗೇಟ್‌ಗೆ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಶರ್ಮಾ ಅವರು ತಮ್ಮ ಇನ್ಸ್ಟಾಗ್ರಾಮ್ ಸ್ಟೋರಿಯಲ್ಲಿ ಘಟನೆಯ ವಿವರಗಳನ್ನು ಹಂಚಿಕೊಂಡಿದ್ದು, ಅವರು ಶೀಘ್ರ ಗುಣಮುಖರಾಗಲಿ ಎಂದು ಅಭಿಮಾನಿಗಳು ಹಾರೈಸುತ್ತಿದ್ದಾರೆ.



ಸೀರೆ ಧರಿಸಿ ರೈಲಿನಲ್ಲಿ ಪ್ರಯಾಣಿಸಲು ನಿರ್ಧರಿಸಿದ ಶರ್ಮಾ, ಹೆಚ್ಚಿನ ವೇಗದ ರೈಲು ಹತ್ತಲು ಪ್ರಯತ್ನಿಸಿದ್ದಾರೆ. ಆದರೆ, ಆ ರೈಲಿನಲ್ಲಿ ಅವರ ಸ್ನೇಹಿತರು ಇರದಿದ್ದಾಗ ಭಯಗೊಂಡು ಚಲಿಸುತ್ತಿದ್ದ ರೈಲಿನಿಂದ ಜಿಗಿದಿದ್ದಾರೆ.

ಪರಿಣಾಮವಾಗಿ ಬೆನ್ನಿನ ಹಿಂಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿಸಿದ್ದಾರೆ. ಅತ್ಯಂತ ನೋವಿನ ಘಟನೆ ಎಂದು ಅವರು ಬರೆದುಕೊಂಡಿದ್ದಾರೆ.

ಟ್ರಂಪ್ ಆಪ್ತ ಚಾರ್ಲಿ ಕಿರ್ಕ್ ಹತ್ಯೆಯ ಶಂಕಿತ ಆರೋಪಿ ಬಂಧನ

ವಾಷಿಂಗ್ಟನ್: ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಹತ್ಯೆಯ ಶಂಕಿತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.



ಈ ಕುರಿತು ಫಾಕ್ಸ್ ನ್ಯೂಸ್‌ಗೆ ಲೈವ್ ಸ್ಟುಡಿಯೋ ಸಂದರ್ಶನದಲ್ಲಿ ಟ್ರಂಪ್, ಶಂಕಿತ ಆರೋಪಿ ಸಿಕ್ಕಿಬಿದ್ದಿದ್ದಾನೆಂದು ನಾನು ಖಚಿತವಾಗಿ ಹೇಳಬಲ್ಲೆ. ಆರೋಪಿಗೆ ಹತ್ತಿರವಿದ್ದವರೇ ಆತನನ್ನು ಹಿಡಿದು ಒಪ್ಪಿಸಿದ್ದಾರೆ ಎಂದು ತಿಳಿಸಿದ್ದಾರೆ.

ಬುಧವಾರ ಉತಾಹ್‌ನಲ್ಲಿ ಭಾಷಣ ಮಾಡುತ್ತಿದ್ದಾಗ ಅನಾಮಿಕನೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಕಿರ್ಕ್ ಸಾವನ್ನಪ್ಪಿದ್ದರು. ಅಲ್ಲಿನ ಗವರ್ನರ್ ಇದನ್ನು ರಾಜಕೀಯ ಪ್ರೇರಿತ ಹತ್ಯೆ ಎಂದು ಕರೆದಿದ್ದಾರೆ. ಟ್ರಂಪ್ ಅವರ ಆಪ್ತ ಮತ್ತು ಕಟ್ಟಾ ಬಲಪಂಥೀಯ ಕಾರ್ಯಕರ್ತ ಕಿರ್ಕ್, 'ಟರ್ನಿಂಗ್ ಪಾಯಿಂಟ್ ಯುಎಸ್‌ಎ' ರಾಜಕೀಯ ಸಂಸ್ಥೆಯ ಸಹಸಂಸ್ಥಾಪಕರಾಗಿದ್ದರು. ಬುಧವಾರ ಚಾರ್ಲಿ ಕಿರ್ಕ್ ಮೇಲೆ ಗುಂಡಿನ ದಾಳಿ ನಡೆಸಿದ ಆರೋಪಿ ಸ್ಥಳದಿಂದ ಪರಾರಿಯಾಗುತ್ತಿರುವ ದೃಶ್ಯಗಳು ಮತ್ತು ಫೋಟೋಗಳ ಸರಣಿಯನ್ನು ಎಫ್‌ಬಿಐ ಬಿಡುಗಡೆ ಮಾಡಿತ್ತು.

ಮೈಸೂರು ಮಿತ್ರ ಶನಿವಾರ 13 ಸೆಪ್ಟೆಂಬರ್ 2025

ಇಂದಿನಿಂದ ಗಗನಚುಕ್ಕಿ ಜಲಪಾತೋತ್ಸವ



ಶಾಸಕ ಪಿ.ಎಂ.ನರೇಂದ್ರಸ್ವಾಮಿ ಜಲಪಾತೋತ್ಸವದ ಸಿದ್ಧತೆಯನ್ನು ಪರಿಶೀಲಿಸಿದರು.

ಮಳವಳ್ಳಿ, ಸೆ.12–ಶಿವನ ಸಮುದ್ರದ ಬಳಿ ಇರುವ ಗಗನಚುಕ್ಕಿ ಜಲಪಾತೋತ್ಸವವನ್ನು ನಾಳೆ(ಸೆ.13)ಯಿಂದ 2 ದಿನಗಳ ಕಾಲ ವಿಜೃಂಭಣೆಯಿಂದ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ಮುಕ್ತಗೊಳಿಸಿ ಆಚರಿಸಲಾಗುವುದು ಎಂದು ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ಹೇಳಿದ್ದಾರೆ.


ಗಗನಚುಕ್ಕಿ ಜಲಪಾತೋತ್ಸವ ವೇದಿಕೆ ಬಳಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಒಟ್ಟು 2.5 ಕೋಟಿ ರೂ ಅನುದಾನದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಬೆಳಿಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಸಾಹಿತ್ಯ ಸಮ್ಮೇಳನದ ಮಾದರಿಯಲ್ಲೇ ಊಟದ ವ್ಯವಸ್ಥೆ ಮಾಡಲಾಗುವುದು. ಮಳಿಗೆ ಹಾಗೂ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡದಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ

ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕ ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸಿದರೆ, ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್‌ಕೆ ಪಾಟೀಲ್, ಶಿವರಾಜ್ ತಂಗಡಗಿ, ಜಮೀರ್ ಭೈರತಿ ಸುರೇಶ್, ಸತೀಶ್ ಜಾರಕಿ ಹೊಳಿ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜಲಕ್ರೀಡೆ: ಗಗನಚುಕ್ಕಿಯಲ್ಲಿ ಜಲಕ್ರೀಡೆಯನ್ನು ಖಾಸಗಿ ಸಂಸ್ಥೆಗಳಿಗೆ ಜಲ ಕ್ರೀಡೆ ನಡೆಸಲು ಅವಕಾಶ ನೀಡಬೇಕಾಗಿದೆ. ಕಾರ್‌ಕ್ಯಾಬ್ ಮಾಡಲು ಚಿಂತನೆ ನಡೆಸಲಾಗಿದೆ. ಜಲಕ್ರೀಡೆ ಸ್ಥಾಪನೆಯಿಂದ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗುತ್ತದೆ ಹಾಗೂ ಪ್ರವಾಸೋದ್ಯಮ ಬೆಳೆಯುತ್ತದೆ ಎಂದರು.

ಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಆರ್. ನಂದಿನಿ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎ.ಸಿ. ಶಿವಮೂರ್ತಿ, ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಸ್ವರಾಜ್ ಉತ್ಸವಕ್ಕೆ ಚಾಲನೆ



ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಸ್ವರಾಜ್ ಉತ್ಸವಕ್ಕೆ ಸಿದ್ಧಗೊಂಡಿರುವ ವೇದಿಕೆ.

ಪಾಂಡವಪುರ, ಸೆ.12–ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಶನಿವಾರ ಹಮ್ಮಿಕೊಂಡಿರುವ 'ಸ್ವರಾಜ್ ಉತ್ಸವ'ಕ್ಕೆ ಪಾಂಡವ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆ ಸಜ್ಜಾಗಿದೆ.

ಗಾಂಧೀಜಿ ಕಂಡ ಗ್ರಾಮಸ್ವರಾಜ್ಯ ಕಲ್ಪನೆಯಲ್ಲಿ ಗ್ರಾಮೀಣ ಜನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಉದ್ದೇಶದಿಂದ ಸೂಕ್ತ ಮಾಹಿತಿ ನೀಡಲು ಶಾಸಕ ದರ್ಶನ್ ಪುಟ್ಟಣ್ಣಯ್ಯ 'ಸ್ವರಾಜ್ ಉತ್ಸವ' ಎಂಬ ವಿನೂತನ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ಹಮ್ಮಿ ಕೊಂಡಿದ್ದಾರೆ.

ಕೆ.ಎಸ್.ಪುಟ್ಟಣ್ಣಯ್ಯ ಫೌಂಡೇಷನ್ ಹಾಗೂ ರೈತಸಂಘದ ಸಹಯೋಗದಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ತಾಲೂಕು ಸೇರಿದಂತೆ ವಿವಿದೆಡೆಯಿಂದ ಸುಮಾರು 10 ಸಾವಿರಕ್ಕೂ ಅಧಿಕ ಮಹಿಳೆಯರು, ಯುವಕ–ಯುವತಿಯರು ಭಾಗವಹಿಸುವ ನಿರೀಕ್ಷೆ ಹೊಂದಿದ್ದಾರೆ. ಕಾರ್ಯಕ್ರಮ ಬೆಳಿಗ್ಗೆ 9.30ರಿಂದ ಸಂಜೆ 5 ಗಂಟೆಯವರೆಗೂ ನಡೆಯಲಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸುಮಾರು 40ಕ್ಕೂ ಹೆಚ್ಚು 'ಖಾಸಗಿ ಸಂಸ್ಥೆಗಳ 70ಕ್ಕೂ ಅಧಿಕ ಸ್ಟಾಲ್‌ಗಳನ್ನು ಸಿದ್ದಪಡಿಸಲಾಗಿದೆ. ಸ್ವರಾಜ್ ಉತ್ಸ ವದಲ್ಲಿ ವೇದಿಕೆ ಕಾರ್‍ಯಕ್ರಮಕ್ಕಿಂತ ಜನರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಹೇಗೆ ಎಂದು ಮಾಹಿತಿ ನೀಡುವುದಕ್ಕೆ ಆದ್ಯತೆ ನೀಡಲಾಗಿದ್ದು ಈ ವಿಚಾರಗಳ ಬಗ್ಗೆ ಸಂವಾದ ಚರ್ಚೆಗಳು ನಡೆಯಲಿವೆ. ಇದೊಂದು ಪಕ್ಷಾತೀತವಾಗಿ ನಡೆಯುತ್ತಿರುವ ಕಾರ್ಯಕ್ರಮವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕ್ಷುಲ್ಲಕ ವಿಚಾರಕ್ಕೆ ಯುವಕನ ಭೀಕರ ಹತ್ಯೆ

ಮಳವಳ್ಳಿ, ಸೆ.12–ಚಾಕುವಿನಿಂದ ಇರಿದು ಯುವಕನೊಬ್ಬನನ್ನು ಕೊಲೆ ಮಾಡಿರುವ ಘಟನೆ ತಾಲೂಕಿನ ಅವ್ವೇರ ಹಳ್ಳಿ– ದೊಡ್ಡಬೂಹಳ್ಳಿ ನಡುವಿನ ಕಾಲುವೆ ರಸ್ತೆಯಲ್ಲಿ ಜರುಗಿದೆ.



ಮೋಹನ್‌ಕುಮಾರ್

ರಾಗಿ ಬೊಮ್ಮನಹಳ್ಳಿ ನಿವಾಸಿ ಮಹಾದೇವಸ್ವಾಮಿಯವರ ಮಗ ಮೋಹನ್ ಕುಮಾರ್(24) ಕೊಲೆಯಾಗಿರುವ ಯುವಕನಾಗಿದ್ದಾನೆ

ಗುರುವಾರ ರಾತ್ರಿ 10.30ರ ಸಮಯದಲ್ಲಿ ಈತ ಅವ್ವೇರಹಳ್ಳಿ–ದೊಡ್ಡಬೂಹಳ್ಳಿ ನಡುವಿನ ಕಾಲುವೆ ರಸ್ತೆಯ ಬಳಿ ಹತ್ಯೆಯಾಗಿದ್ದು, ಯಾರೋ ದುಷ್ಕರ್ಮಿಗಳು ತೀವ್ರ ಹಲ್ಲೆ ನಡೆಸಿ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾರೆ ಎನ್ನಲಾಗಿದೆ. ಈತನ ಹತ್ಯೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ, ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿರುವ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಶ್ರೀಧರ್ ಅವರುಗಳು ಪರಿಶೀಲನೆ ನಡೆಸಿದ್ದಾರೆ.

ಮೃತನ ತಂದೆ ಮಹಾದೇವಸ್ವಾಮಿ ಶುಕ್ರವಾರ ಮಧ್ಯಾಹ್ನ 12.30ರ ಸಮಯದಲ್ಲಿ ನೀಡಿದ ದೂರಿನ ಮೇರೆಗೆ ಬೆಳಕವಾಡಿ ಠಾಣೆ ಪಿಎಸ್‌ಐ ಪ್ರಕಾಶ್ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಶವವನ್ನು ಮಂಡ್ಯ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ.

ಕುಶಾಲನಗರ ಹೆದ್ದಾರಿಯಲ್ಲಿ ಸರ್ವೀಸ್ ರಸ್ತೆಗೂ ಕೇಂದ್ರ ಒಪ್ಪಿಗೆ



ನವದೆಹಲಿಯಲ್ಲಿನ ಕೇಂದ್ರ ಹೆದ್ದಾರಿ ಹಾಗೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ನೇತೃತ್ವದ ರೈತರ ನಿಯೋಗ ಭೇಟಿ ಮಾಡಿತು.

ಶ್ರೀರಂಗಪಟ್ಟಣ, ಸೆ.12–ಶ್ರೀರಂಗಪಟ್ಟಣ – ಕುಶಾಲನಗರ ಹೆದ್ದಾರಿ ಕಾಮ ಗಾರಿ ವೇಳೆ ಸರ್ವೀಸ್ ರಸ್ತೆ ನಿರ್ಮಿಸಿ ಕೊಡಲು ಕೇಂದ್ರ ಸಚಿವ ನಿತಿನ್ ಗಡ್ಕರಿ ನಿಯೋಗಕ್ಕೆ ಆಶ್ವಾಸನೆ ನೀಡಿದ್ದಾರೆ.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ನೇತೃತ್ವದ ರೈತರ ನಿಯೋಗ ದೆಹಲಿಗೆ ಹೋಗಿದ್ದ ನಿಯೋಗ ನಿನ್ನೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ನಿತಿನ್ ಗಡ್ಕರಿ ಅವರನ್ನು ಭೇಟಿ ನೀಡಿ, ಶ್ರೀರಂಗ ಪಟ್ಟಣ–ಕುಶಾಲ ನಗರ ನಡುವಿನ 275ರ ರಾಷ್ಟ್ರೀಯಹೆದ್ದಾರಿ ನಿರ್ಮಾಣಕ್ಕೆ ಅಗತ್ಯ ಭೂ ಸ್ವಾಧೀನಕ್ಕೆ ಮುಂದಾದ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಸ್ಥಳೀಯ ರೈತರಿಗೆ ವಾಣಿಜ್ಯ ಉದ್ದೇಶದ ಆಮಿಷವೊಡ್ಡಿ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಸ್ಥಳೀಯರು ಹಾಗೂ ರೈತರಿಗೆ ಸರ್ವಿಸ್ ರಸ್ತೆ ನಿರ್ಮಾಣ ಮಾಡಿ ಕೊಡುವುದಾಗಿ ಭರವಸೆ ನೀಡಿ ಇದೀಗ ಸರ್ವೀಸ್ ರಸ್ತೆ ನೀಡುತ್ತಿಲ್ಲ. ಬೊಮ್ಮೂರು ಅಗ್ರಹಾರ, ಪಾಲಹಳ್ಳಿ, ಕೆಂಪಲಿಂಗಾಪುರ, ಕಾರೇಕುರ ಬೆಳಗೊಳ, ಮಜ್ಜಿಗೆ ಪುರ, ಹುಲಿಕೆರೆ ಸೇರಿದಂತೆ ಇತರೆ ಗ್ರಾಮಗಳ ರೈತರಿಗೆ ತೊಂದರೆಯಾಗಲಿದೆ ಎಂದರು.

ಹೆದ್ದಾರಿ ಪಕ್ಕದಲ್ಲಿ ಸರ್ವೀಸ್ ರಸ್ತೆ ಮಾಡಿಸದೇ ಹೋದಲ್ಲಿ ರೈತರು ತಮ್ಮ ಜಮೀನುಗಳಿಗೆ ತೆರಳಲು ಸಾಧ್ಯವಾಗುವುದಿಲ್ಲ. ಜೊತೆಗೆ ರೈತರು ಬೆಳೆದ ಬೆಳೆಗಳನ್ನು ಸಾಗಾಣಿಕೆ ಸಹ ಮಾಡಲು ಸಾಧ್ಯವಿಲ್ಲ. ಅಲ್ಲದೆ ಶ್ರೀರಂಗಪಟ್ಟಣ ಐತಿಹಾಸಿಕ ಪ್ರವಾಸಿ ತಾಣ ವಾಗಿರುವುದರಿಂದ ಸರ್ವಿಸ್ ರಸ್ತೆ ನಿರ್ಮಿಸಿಕೊಡುವಂತೆ ಹೆಚ್.ಡಿ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ವಿವರವಾಗಿ ಮಾಹಿತಿ ನೀಡಿದರು.

ಸಚಿವ ನಿತಿನ್ ಗಡ್ಕರಿ ನಿಯೋಗದ ಮನವಿಗೆ ಸ್ಪಂದಿಸಿ, ನಿರ್ಮಾಣ ಮಾಡಲಾಗುತ್ತಿರುವ ಹೆದ್ದಾರಿಯ ಎರಡೂ ಬದಿಗಳಲ್ಲೂ ಎತ್ತರದ ತಡೆ ಗೋಡೆಗಳು ನಿರ್ಮಾಣವಾಗುತ್ತಿರುವುದರಿಂದ ಯಾವುದೇ ಸರ್ವೀಸ್ ರಸ್ತೆ ನಿರ್ಮಿಸಿ ಕೊಡಲು ಸಾಧ್ಯವಿಲ್ಲ, ಆದರೂ ಹೆಚ್.ಡಿ ಕುಮಾರಸ್ವಾಮಿ ಅವರೇ ಖುದ್ದು ಆಗಮಿಸಿ, ರೈತರ ಪರವಾಗಿ ಸರ್ವೀಸ್ ರಸ್ತೆ ಕೇಳುತ್ತಿರುವುದನ್ನ ಪರಿಗಣನೆಗೆ ತೆಗೆದುಕೊಂಡು ಹೆಚ್ಚುವರಿಯಾಗಿ ಅಗತ್ಯ ಹಣ ಬಿಡುಗಡೆ ಮಾಡಿ, ರಸ್ತೆ ಮಾಡಿಕೊಡುವುದಾಗಿ ಭರವಸೆ ನೀಡಿದರು. ಇದರಿಂದ ರೈತರು ಹರ್ಷವ್ಯಕ್ತಪಡಿಸಿ. ಸಚಿವರಾದ ನಿತಿನ್ ಗಡ್ಕರಿ, ಹೆಚ್.ಡಿ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದರು.

ಪಾಲಹಳ್ಳಿ ಗ್ರಾಮದ ಡಾ. ಪ್ರಶಾಂತ್ ಡಿ.ಎ, ವೆಂಕಟೇಶ್, ರವಿ, ಎಂಪಿಸಿಎಸ್ ಅಧ್ಯಕ್ಷ ಲೋಕೇಶ್, ತಾಂಡು ಶ್ರೀರಂಗಪಟ್ಟಣ ಸುನಿಲ್, ಚಂದನ್, ಪಶ್ಚಿಮಾಹಿನಿ ಸತ್ಯಪ್ಪ, ಪುರಸಭಾ ಮಾಜಿ ಸದಸ್ಯರಾದ ಸಾಯಿ ಕುಮಾರ್, ವೆಂಕಟೇಶ್, ಅಶ್ವಥ್ ನಾರಾಯಣ, ಲೋಕೇಶ್, ರಾಂಪುರ ಪ್ರೀತಂ, ಪ್ರವೀಣ್, ರಾಕೇಶ್ ಇದ್ದರು

ಪ್ರಚೋದನಕಾರಿ ಭಾಷಣ: ಯತ್ನಾಳ್ ವಿರುದ್ಧ ಎಫ್‌ಐಆರ್ ದಾಖಲು



ಮದ್ದೂರು,ಸೆ.12– ಶಾಸಕ ಬಸನಗೌಡ ಯತ್ನಾಳ್ ನಿನ್ನೆಯ ಸಭೆಯಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿರುವ ಆರೋಪದಡಿ ಅವರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ.

ಭಾನುವಾರ ಪಟ್ಟಣದ ಲೀಲಾವತಿ ಬಡಾವಣೆಯ ಶ್ರೀ ರಾಮಮಂದಿರ ಪಾರ್ಕ್ ಬಳಿ ನಡೆದ ಬಹಿರಂಗ ಸಭೆಯಲ್ಲಿ ಯತ್ನಾಳ್ ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಪಿಎಸ್‌ಐ ಮಂಜುನಾಥ್ ನೀಡಿರುವ ದೂರು ಆಧರಿಸಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಮೀನರ ಕಣ್ಣಿಗೆ ಖಾರದ ಪುಡಿ ಎರಚಿದ್ದ ಪ್ರಕರಣ

ಮಹಿಳೆ ನ್ಯಾಯಾಂಗ ಬಂಧನಕ್ಕೆ

ಕೆ.ಆರ್.ಪೇಟೆ, ಸೆ.12– ನ್ಯಾಯಾಲಯದ ಸಮನ್ಸ್ ನೀಡಲು ಬಂದಿದ್ದ ಅಮೀನರ ಕಣ್ಣಿಗೆ ಖಾರದ ಪುಡಿ ಎರಚಿದ್ದ ಕಾಳೇನಹಳ್ಳಿ ಸಾಕಮ್ಮ ಎಂಬ ಆರೋಪಿಗೆ ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಅಪಘಾತ ಪ್ರಕರಣವೊಂದರಲ್ಲಿ ತೀರ್ಪು ಋಣಿದಾರ(ಜೆಡಿಆರ್) ಚಿಕ್ಕಈರೇಗೌಡರಿಗೆ ಸೆ.6ರಂದು ಸಂಜೆ 4.45ಗಂಟೆ ಸಮಯದಲ್ಲಿ ಅರೆಸ್ಟ್ ವಾರೆಂಟ್ ಮೇರೆಗೆ ದಸ್ತಗಿರಿ ಮಾಡಲು ಅಮೀನ ಕೆ.ಆರ್.ಶಂಕರೇಗೌಡ ಬಾಪುಗೌಡ ಹೋಗಿದ್ದಾಗ ಜೆಡಿಆರ್ ಆರೋಪಿ ಚಿಕ್ಕ ಈರೇಗೌಡರ ಪತ್ನಿ ಆರೋಪಿ ಸಾಕಮ್ಮ ಏಕಾಏಕಿ ನನ್ನ ಗಂಡನನ್ನು ಬಂಧಿಸಬೇಡಿ ಎಂದು ಕಿರುಚಾಡಿ ಕರ್ತವ್ಯ ಅಡ್ಡಿ ಪಡಿಸಿದರು. ಆಗ ಅಪಘಾತಕ್ಕೆ ಸಂಬಂಧಪಟ್ಟಂತೆ ಪರಿಹಾರ ನೀಡಲು ತೀರ್ಪು ಋಣಿದಾರರನ್ನಾಗಿ ಮಾಡಿ ನ್ಯಾಯಾಲಯ ಆದೇಶ ಹೊರಡಿಸಿದೆ. ಈ ಸಂಬಂಧ ಚಿಕ್ಕಈರೇಗೌಡ ಅವರ ದಸ್ತಗಿರಿ ಮಾಡುವಂತೆ ಬಂದಿರುವುದಾಗಿ ತಿಳುವಳಿಕೆ ನೀಡಿದ್ದಾರೆ. ಆದರೆ ಅವರ ಮಾತು ಕೇಳದೇ ಏಕಾಏಕಿ ಅಮೀನರ ಕಣ್ಣಿಗೆ ಖಾರದ ಪುಡಿ ಎರಚಿದ್ದಾರೆ. ಕಣ್ಣಿನ ನೋವಿನ ಬಾದೆ ಕಾಣಿಸಿಕೊಂಡಾಗ ತೀರ್ಪು ಋಣಿ ಚಿಕ್ಕ ಈರೇಗೌಡ ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಗಾಯಗೊಂಡಿದ್ದ ಅಮೀನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸೆ.7 ರಂದು ಕಿಕ್ಕೇರಿ ಠಾಣೆಗೆ ಹೋಗಿ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ನಾಪತ್ತೆಯಾಗಿದ್ದ ಆರೋಪಿ ಸಾಕಮ್ಮ ಎಂಬಾಕೆಯನ್ನು ಪತ್ತೆ ಮಾಡಿ ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಸುಧೀರ್ ಅವರ ಮುಂದೆ ಹಾಜಪಡಿಸಿದಾಗ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಆದೇಶಿಸಿದ್ದಾರೆ.

ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣ

ಕರ್ತವ್ಯ ಲೋಪ: ಇನ್‌ಸ್ಪೆಕ್ಟರ್ ತಲೆದಂಡ



ಮದ್ದೂರು, ಸೆ.12– ಕರ್ತವ್ಯ ಲೋಪ ಎಸಗಿದ ಆರೋಪ ಮೇರೆಗೆ ಪಟ್ಟಣದ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್ ಅವರನ್ನು ಅಮಾನತುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ನಡೆದು ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದ್ದಾಗ ಇನ್ಸ್‌ಪೆಕ್ಟರ್ ಶಿವಕುಮಾರ್ ಸ್ಥಳದಲ್ಲಿ ಇಲ್ಲದ ಕಾರಣ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ತಾವು ಶಾಂತಿ ಸಭೆ ನಡೆಸಿದಾಗಲೂ ಇಂತಹ ಘಟನೆಗಳನ್ನು ಎದುರಿಸುವಾಗಲೂ ಕ್ರಮ ಕೈಗೊಳ್ಳಬೇಕೆಂದು ಎಲ್ಲಾ ಅಧಿಕಾರಿಗಳಿಗೂ ಸೂಚಿಸಿದ್ದೇನೆ ಎಂದರು.

ಒಂದನೇ ಪುಟದಿಂದ

ತಲೆದೂಗಿದ ಪ್ರೇಕ್ಷಕ ಸಮೂಹ



ದೇಶ ಕಾಯುವ ಯೋಧರ ಬಗ್ಗೆ ವಿಶೇಷ ನೃತ್ಯ ಮಾಡಿದ ಗುರುಮಲ್ಲೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು ತಂಡ

ಅನುಕೂಲಕಾರಿಯಾಗಿದೆ ಎಂಬುದನ್ನು ನೃತ್ಯ ಪ್ರದರ್ಶನದ ಮೂಲಕ ಸಾದರ ಪಡಿಸಿದರು. ಮೈಸೂರಿನ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ತಂಡದಿಂದ ಜಾನಪದ ನೃತ್ಯ ಪ್ರಸ್ತುತಪಡಿಸಲಾಯಿತು. ಡೊಳ್ಳು, ಕಂಸಾಳೆ, ನಗಾರಿ ನಡುವಣ ಜುಗಲ್ ಬಂದಿ ನೆರೆದಿದ್ದವರ ಮನ ತಣಿಯುವಂತೆ ಮಾಡಿತು. ನಗಾರಿ ಸಪ್ಪಳಕ್ಕೆ ನೆರೆದಿದ್ದ ಯುವ ಸಮೂಹ ತಮಗರಿವಿಲ್ಲದಂತೆ ಶಿಳ್ಳೆ ಚಪ್ಪಾಳೆ ಹಾಕುತ್ತಾ, ಜನಪದ ಸೊಗಡಲ್ಲಿ ಬೆರೆತುಹೋದರು.

ಕೆಂಗೇರಿಯ ಶ್ರೀ ಗುರು ಸಾಯಿ ಪಿಯು ಕಾಲೇಜಿನ ವಿದ್ಯಾರ್ಥಿಗಳು ಜೈ ಶ್ರೀರಾಮ್ ಗೀತೆಗೆ ನೃತ್ಯ ಮಾಡುವ ಮೂಲಕ ಅಯೋಧ್ಯೆಯ ಶ್ರೀ ರಾಮ ಮೂರ್ತಿ ಕೆತ್ತಿದ ಅರುಣ್ ಯೋಗಿ ರಾಜ್‌ಗೆ ಗೌರವ ಸಲ್ಲಿಸಿದರು. ಅಧ್ಯಯನ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಉಳುವ ಯೋಗಿಯ ನೋಡಲ್ಲಿ... ರೈತ ರೈತ ಅನ್ನ ಕೊಡುವ ಧಾತ.. ಹೀಗೆ ನಾನಾ ರೈತ ಗೀತೆಗಳಿಗೆ ಹೆಜ್ಜೆ ಹಾಕುವ ಮೂಲಕ ಆಧುನಿಕ ಕಾಲಮಾನದಲ್ಲಿ ರೈತ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ನೃತ್ಯ ಪ್ರದರ್ಶಿಸಿ, ನೆರೆದಿದ್ದವರನ್ನು ಮೂಕವಿಸ್ಮಿತರನ್ನಾಗಿಸಿದರು. ಪುಟ್ಟೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿ ಶಾಲೆಯ ಮಕ್ಕಳು ಶಿವನು ಸುಳ್ಳು ಹೇಳಿದ ಎಂಬ ಕಾರಣಕ್ಕೆ ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಿದ ವಿಷಯಾಧಾರಿತ ಪೌರಾಣಿಕ ನೃತ್ಯ ಪ್ರದರ್ಶನ ಮಾಡಿದ್ದು ವಿಶೇಷವಾಗಿತ್ತು.

ಹಿನಕಲ್‌ನಲ್ಲಿರುವ ಮೈಸೂರು ರೂರಲ್ ಐಟಿಐ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ರಾಜರ ಕೊಡುಗೆಯನ್ನು ನೃತ್ಯದ ಮೂಲಕ ಸಾದರಪಡಿದರು. ಹುಣಸೂರು ಟಾಲೆಂಟ್ ಎಜುಕೇಷನ್ ಟ್ರಸ್ಟ್ ವಿದ್ಯಾರ್ಥಿಗಳು ಪೌರಾಣಿಕ ನೃತ್ಯ, ನಂಜನಗೂಡಿನ ಹಗಿನವಾಳು ಶ್ರೀ ಗುರುಮಲ್ಲೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು ತಂಡದಿಂದ ದೇಶ ಕಾಯುವ ಯೋಧರ ಬಗ್ಗೆ ನೃತ್ಯ ಮಾಡಿ ಗಮನ ಸೆಳೆದರು.

ಹೀಗೆ ನಾನಾ ಕಾಲೇಜು ತಂಡಗಳು ಕನ್ನಡ ನಾಡು ನುಡಿಯೊಂದಿಗೆ ಕರ್ನಾಟಕದ ಜಾನಪದ ವೈವಿಧ್ಯತೆ ಮತ್ತು ಪರಂಪರೆಯನ್ನು ಬಿಂಬಿಸುವ ನೃತ್ಯಗಳನ್ನು ಮಾಡುವ ಮೂಲಕ ಗಮನ ಸೆಳೆದವು. ಇದರೊಂದಿಗೆ ಸಂವಿಧಾನದ ಮಹತ್ವ, ದೇಶದ ಯೋಧರ ಕೆಚ್ಚೆದೆಯ ಹೋರಾಟ, ರಾಷ್ಟ್ರೀಯ ಭಾವೈಕ್ಯತೆ, ಕನ್ನಡದ ವೈಭವಕ್ಕೆ ಸಾಕ್ಷಿಯಾಯಿತು. ಜತೆಗೆ ಯೋಧರ ಸ್ಮರಣೆಯೊಂದಿಗೆ ಜೈ ಜವಾನ್, ಜೈ ಕಿಸಾನ್ ಘೋಷಣೆಗಳು ಮೊಳಗಿದವು.



ಮೈಸೂರಿನ ಅಧ್ಯಯನ್ ಪಿಯು ಕಾಲೇಜು ತಂಡದ ಆಕರ್ಷಕ ನೃತ್ಯ

ಒಂಭತ್ತು ಮಂದಿ ದುರ್ಮರಣ

6 ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಬಂದ ಕ್ಯಾಂಟರ್ ರಸ್ತೆ ವಿಭಜಕವನ್ನು ಹಾರಿ ಗಣೇಶ ಮೆರವಣಿಗೆಯಲ್ಲಿ ನೃತ್ಯ ಮಾಡುತ್ತಿದ್ದ ಯುವಕರ ಮೇಲೆ ನುಗ್ಗಿದೆ. ಸ್ಥಳದಲ್ಲಿ ಐವರು, ಆಸ್ಪತ್ರೆಯಲ್ಲಿ ಮೂವರು ಮೃತಪಟ್ಟಿದ್ದು, ಒಟ್ಟು 8 ಮಂದಿ ಸಾವನ್ನಪ್ಪಿದ್ದಾರೆ. ಅಡ್ಡ ಬಂದ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಬಲಕ್ಕೆ ತಿರುಗಿಸಿದಾಗ ಕ್ಯಾಂಟರ್ ರಸ್ತೆ ವಿಭಜಕ ಹಾರಿ ಯುವಕರ ಗುಂಪಿನ ಮೇಲೆ ಹರಿದಿದೆ ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ, ಅದು ಇನ್ನೂ ಖಚಿತವಾಗಿಲ್ಲ. ಕ್ಯಾಂಟರ್‌ನಲ್ಲಿ ಏನಾದರೂ ಲೋಪದೋಷವಾಗಿದ್ದು, ಚಾಲಕನ ನಿಯಂತ್ರಣಕ್ಕೆ ಸಿಗದೆ ಮೆರವಣಿಗೆ ಮೇಲೆ ನುಗ್ಗಿದೆಯೇ ಅಥವಾ ಈ ಅಪಘಾತಕ್ಕೆ ಬೇರೆ ಏನಾದರೂ ಕಾರಣವಿದೆಯೇ ಎಂಬುದು ತನಿಖೆಯ ನಂತರ ಗೊತ್ತಾಗಬೇಕಾಗಿದೆ. 17 ಮಂದಿ ಗಾಯಗೊಂಡಿದ್ದು, ಅವರಲ್ಲಿ ಚಿಂತಾಜನಕ ಸ್ಥಿತಿಯಲ್ಲಿರುವ 7 ಮಂದಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದ 10 ಮಂದಿ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

- ಮಹಮ್ಮದ್ ಸುಜೀತಾ, ಹಾಸನ ಜಿಲ್ಲಾ ಎಸ್ಪಿ

ಗಾಯಾಳುಗಳ ಯೋಗಕ್ಷೇಮ ವಿಚಾರಿಸುವ ಜೊತೆಗೆ ಅವರಿಗೆ ಸೂಕ್ತ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ವೈದ್ಯರೊಂದಿಗೆ ಚರ್ಚೆ ನಡೆಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿಗಳನ್ನು ಸ್ಥಳೀಯರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಈ ಸ್ಥಳದಲ್ಲಿ ರಸ್ತೆ ಹಂಪ್ಸ್‌ಗಳನ್ನು ಹಾಕಿಸಿದ್ದರೆ, ದುರಂತ ಸಂಭವಿಸುತ್ತಿರಲಿಲ್ಲ ಎಂದು ವಾದಿಸಿದರು. ರಾಷ್ಟ್ರೀಯ ಹೆದ್ದಾರಿಯಲ್ಲಿ ಹಂಪ್ಸ್ ಹಾಕಲು ಸಾಧ್ಯವಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಿದ್ದರೂ, ಸ್ಥಳೀಯರು ಅದನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಪೊಲೀಸರು ರಕ್ಷಣೆಯಲ್ಲಿ ಜಿಲ್ಲಾಧಿಕಾರಿಗಳನ್ನು ಆಸ್ಪತ್ರೆಗೆ ಗಾಯಾಳುಗಳ ಭೇಟಿಗಾಗಿ ಕರೆದೊಯ್ದರು. ಘಟನಾ ಸ್ಥಳಕ್ಕೆ ಹೊಳೆ ನರಸೀಪುರ ಶಾಸಕ ಹೆಚ್.ಡಿ.ರೇವಣ್ಣ, ಅವರ ಪುತ್ರಹಾಗೂ ಆದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಭೇಟಿ ನೀಡಿ ದ್ದರು. ಜಿಲ್ಲಾಸ್ಪತ್ರೆಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ್ದಾರೆ. ದುರಂತದಲ್ಲಿ ಮೃತಪಟ್ಟವರ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ಅಪಘಾತ ಸಂಭವಿಸುತ್ತಿದ್ದಂತೆಯೇ ಕ್ಯಾಂಟರ್ ಓಡಿಸುತ್ತಿದ್ದವನು ಸ್ಥಳದಿಂದ ಪರಾರಿಯಾಗಿದ್ದು, ಆದರೆ, ಕ್ಯಾಂಟರ್‌ನಲ್ಲಿ ಮಲಗಿದ್ದ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈತ ಹೊಳೆನರಸೀಪುರ ತಾಲೂಕು ಕಬ್ಬೆಬೆಳಗುಲಿ ಗ್ರಾಮದ ಭುವನೇಶ್ ಎಂದು ಗೊತ್ತಾಗಿದ್ದು, ಈತನೇ ನಿಜವಾದ ಕ್ಯಾಂಟರ್ ಚಾಲಕ. ಭುವನೇಶ್‌ನನ್ನು ಹಿಗ್ಗಾಮುಗ್ಗಾ ಥಳಿಸಲಾಗಿದೆ. ಸದ್ಯ ಭುವನೇಶ್ ಕೂಡ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಆದರೆ ಪೊಲೀಸರ ತನಿಖೆಯಿಂದಷ್ಟೇ ಅಪಘಾತಕ್ಕೆ ವಾಸ್ತವ ಕಾರಣ ತಿಳಿಯಬಹುದಾಗಿದೆ.

ಪೊಲೀಸರ ವೈಫಲ್ಯ: ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಹೆಚ್.ಡಿ.ರೇವಣ್ಣ, ಈ ಘಟನೆಯಲ್ಲಿ ಪೊಲೀಸರ ವೈಫಲ್ಯವಿದೆ ಎಂದು ಆರೋಪಿಸಿದರು. ಮೆರವಣಿಗೆ ಬರುತ್ತಿದ್ದ ಸ್ಥಳದಿಂದ 100 ರಿಂದ 200 ಮೀಟರ್ ಅಂತರದಲ್ಲಿ ವಾಹನ ವೇಗ ಮಿತಿಗೊಳಿಸಿದ್ದರೆ, ಈ ದುರಂತ ನಡೆಯುತ್ತಿರಲಿಲ್ಲ. ಅಲ್ಲದೇ ಈ ಮೆರವಣಿಗೆಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಅನ್ನೂ ಕೂಡ ಏರ್ಪಡಿಸಿರಲಿಲ್ಲ. ಈ ದುರಂತದ ಹೊಣೆಯನ್ನು ಸರ್ಕಾರವೇ ಹೊರಬೇಕು ಎಂದು ಆಗ್ರಹಿಸಿದರು.

ಈ ದುರಂತದ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತೀವ್ರ ದುಃಖ ವ್ಯಕ್ತಪಡಿಸಿದ್ದು, ದುರಂತದಲ್ಲಿ ಮೃತರಾದವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ. ಗಾಯಾಳುಗಳು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ನಾಳೆ (ಸೆ.13) ಹಾಸನಕ್ಕೆ ಭೇಟಿ ನೀಡಲಿದ್ದಾರೆ.

ಸೆ. 22ರಿಂದ ಮತ್ತೆ ಜಾತಿಗಣತಿ

425 ಕೋಟಿ ರೂ. ನೀಡುತ್ತಿದ್ದು, ಇದರಲ್ಲಿ 325 ಕೋಟಿ ರೂ. ವಿಶೇಷ ಭತ್ಯೆಗೆ ವೆಚ್ಚವಾಗಲಿದೆ ಎಂದು ಮಾಹಿತಿ ನೀಡಿದರು.

ಮನೆ ಮನೆಗೂ ವಿದ್ಯುತ್ ಸಂಪರ್ಕವಿದೆ, ಮೀಟರ್ ರೀಡರ್‌ಗಳು ಜಿಯೊ ಟ್ಯಾಗ್ ಮಾಡುವುದರ ಜೊತೆಗೆ 2 ಕೋಟಿ ಮನೆಗಳಿಗೆ ಪ್ರತ್ಯೇಕ ಗುರುತಿನ ನಂಬರ್ ನೀಡಿ ಸ್ಟಿಕ್ಕರ್ ಅಂಟಿಸಲಾಗುತ್ತಿದೆ.

ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಅನ್ನು ಮೊಬೈಲ್ ಸಂಖ್ಯೆಗೆ ಸಂಪರ್ಕಿಸುವ ಜೊತೆಗೆ, ಮೊಬೈಲ್ ಇಲ್ಲದ ಮನೆಗಳ ಸಮೀಕ್ಷೆಯೂ ನಡೆಯಲಿದೆ. ಯಾವುದೇ ಮನೆಯನ್ನು ಸಮೀಕ್ಷೆಯಿಂದ ಹೊರಗಿಡುವ ಪ್ರಶ್ನೆಯೇ ಇಲ್ಲ. ಒಟ್ಟು 60 ಪ್ರಶ್ನೆಗಳನ್ನು ಅಂತಿಮಗೊಳಿಸಿದ್ದು, ಈ ಪಶ್ನೆಗಳಿಗೆ ಆಯೋಗದಿಂದ ನೇಮಕಗೊಂಡ ಸದಸ್ಯರು ಉತ್ತರ ಪಡೆಯಲಿದ್ದಾರೆ. ರಾಜ್ಯದ ಜನತೆ ಯಾರೂ ತಪ್ಪಿಸಿಕೊಳ್ಳದೆ ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಸಹಾಯವಾಣಿ ಸಂಖ್ಯೆ–8050770004ಗೆ ಕರೆ ಮಾಡಿ, ಇಲ್ಲವೇ ಆನ್‌ಲೈನ್ ಅಥವಾ ವೆಬ್‌ಸೈಟ್ ಮೂಲಕ ಜನರು ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಜಾತಿ ಹೇಳಿಕೊಳ್ಳಲು ಕಷ್ಟ ಆದವರು ಸಹಾಯವಾಣಿಗೆ ಕರೆ ಮಾಡಿ ವಿವರ ನೀಡಬಹುದಾಗಿದೆ.

ಹಿಂದಿನ ಸಮೀಕ್ಷೆಯಲ್ಲಿ ಎದುರಾದ ಯಾವುದೇ ತಾಂತ್ರಿಕ ಸಮಸ್ಯೆ ಈ ಬಾರಿ ಇಲ್ಲದಂತೆ ಆಯೋಗ ಮತ್ತು ಸರ್ಕಾರ ಪೂರ್ವ ಸಿದ್ಧತೆ ಮಾಡಿಕೊಂಡಿದೆ. ಮತಾಂತರಗೊಂಡವರು ಅಥವಾ ಜಾತಿ ಗೊಂದಲ ಇದ್ದರೆ, ಆಯೋಗದ ತಜ್ಞರ ತಂಡ ವಿಶ್ಲೇಷಣೆ ಮಾಡಿ ತೀರ್ಮಾನಿಸಲಿದೆ. ಕಾಂತರಾಜ್ ವರದಿ 10 ವರ್ಷ ಹಳೆಯದಾದ ಕಾರಣ ಹೊಸದಾಗಿ ಸಮೀಕ್ಷೆ ನಡೆಸಲು ಶಾಶ್ವತ ಹಿಂದುಳಿದ ಆಯೋಗಕ್ಕೆ ವಹಿಸಲಾಗಿದೆ. ಸಮಾಜದಲ್ಲಿ ಅನೇಕ ಜಾತಿಗಳು ವೈರುಧ್ಯತೆಯಿಂದ ಕೂಡಿದ್ದು, ಅಸಮಾನತೆ ಈಗಲೂ ಇದೆ. ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುತ್ತದೆ. ಸಾಮಾಜಿಕ ನ್ಯಾಯವನ್ನು ಎಲ್ಲರಿಗೂ ಒದಗಿಸಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ ಈ ಕಾರ್ಯ ಕೈಗೆತ್ತಿಕೊಂಡಿದೆ.

ಪ್ರತಿಯೊಬ್ಬರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿ ಗೊತ್ತಾದರೆ ಮಾತ್ರ ಕಲ್ಯಾಣ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ ಸಾಧ್ಯವಿದೆ. ನಮ್ಮ ಗ್ಯಾರಂಟಿ ಯೋಜನೆಗಳ ಮೂಲಕ ಅಸಮಾನತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಪ್ರಯತ್ನ ಮಾಡಿದ್ದೇವೆ. ಹೊಸ ಸಮೀಕ್ಷೆ ವರದಿ ಬಂದ ನಂತರ ಎಲ್ಲರಿಗೂ ನ್ಯಾಯ ಒದಗಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ನಾಳೆ ವಾರ್ಷಿಕ ಮಹಾಸಭೆ

ಮೈಸೂರು, ಸೆ.12– ಮೈಸೂರಿನ ಹನುಮಂತನಗರ ಬಳಕೆದಾರರ ಸಹಕಾರ ಸಂಘ ನಿಯಮಿತದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸೆ.14ರಂದು (ಭಾನುವಾರ) ಬೆಳಗ್ಗೆ 10 ಗಂಟೆಗೆ ಹುಡ್ಕೋ ಬನ್ನಿಮಂಟಪದ ನವಗ್ರಹ ಗಣಪತಿ ದೇವಸ್ಥಾನ ಛತ್ರದಲ್ಲಿ ಆಯೋಜಿಸಲಾಗಿದೆ.

ಇಂದು ಸರ್ವ ಸದಸ್ಯರ ಸಭೆ

ಮೈಸೂರು, ಸೆ.12– ಮೈಸೂರು ವಿದ್ಯಾರಣ್ಯಪುರಂನ ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯು ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ಅವರ ಅಧ್ಯಕ್ಷತೆಯಲ್ಲಿ ಶನಿವಾರ(ಸೆ.13) ಬೆಳಗ್ಗೆ 11ಕ್ಕೆ ವಿಶ್ವೇಶ್ವರನಗರದ ಕೆವಿಆರ್ ವೆಡ್ಡಿಂಗ್ ಬೆಲ್ಸ್ ಕಲ್ಯಾಣ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಸಂಘದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಸಿ.ಅವಿನಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಯನ್ಸ್ ವತಿಯಿಂದ 30 ಪ್ರಾಣಿ–ಪಕ್ಷಿ ದತ್ತು



ಲಯನ್ಸ್ ಪ್ಯಾಲೇಸ್ ಸಿಟಿ ಕ್ಲಬ್ ಮತ್ತು ಪ್ಯಾಲೇಸ್ ಸಿಟಿ ಕ್ವೀನ್ಸ್ ಕ್ಲಬ್ ವತಿಯಿಂದ ಮೈಸೂರು ಮೃಗಾಲಯದ ಪ್ರಾಣಿ–ಪಕ್ಷಿಗಳನ್ನು ದತ್ತು ಪಡೆದು, 4.50 ಲಕ್ಷ ರೂ. ನೆರವಿನ ಚೆಕ್ ಅನ್ನು ಕಾರ್ಯ ನಿರ್ವಾಹಕ ನಿರ್ದೇಶಕಿ ಪಿ.ಅನುಷಾ ಅವರಿಗೆ ಹಸ್ತಾಂತರಿಸಲಾಯಿತು.

ಮೈಸೂರು, ಸೆ.12– ಮೈಸೂರು ಮೃಗಾಲಯದ 30 ಪ್ರಾಣಿ–ಪಕ್ಷಿಗಳನ್ನು ಲಯನ್ಸ್ ವತಿಯಿಂದ ದತ್ತು ಸ್ವೀಕರಿಸಲಾಯಿತು.

ಅಂತರಾಷ್ಟ್ರೀಯ ಲಯನ್ ಸಂಸ್ಥೆ (ಜಿಲ್ಲೆ 317ಜಿ), ಲಯನ್ಸ್ ಕ್ಲಬ್ ಮೈಸೂರ್ ಪ್ಯಾಲೇಸ್ ಸಿಟಿ ಮತ್ತು ಪ್ಯಾಲೇಸ್ ಸಿಟಿ ಕ್ವೀನ್ಸ್ ಕ್ಲಬ್ ಸಹಯೋಗದಲ್ಲಿ 30 ಪ್ರಾಣಿ– ಪಕ್ಷಿಗಳನ್ನು ದತ್ತು ಸ್ವೀಕರಿಸಿ, ಅದ ಕ್ಕಾಗಿ 4.50 ಲಕ್ಷ ರೂ.ಗಳ ಚೆಕ್ ಅನ್ನು ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕಿ ಪಿ. ಅನುಷಾ ಅವರಿಗೆ ಹಸ್ತಾಂತರಿಸಲಾಯಿತು.

ಈ ವೇಳೆ ಲಯನ್ಸ್ 317ಜಿ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ್ ಮಾತನಾಡಿ, ಸತತ ಐದು ವರ್ಷಗಳಿಂದ ಲಯನ್ಸ್ ವತಿಯಿಂದ ಮೃಗಾಲಯದಲ್ಲಿ ಪ್ರಾಣಿ–ಪಕ್ಷಿಗಳನ್ನು ದತ್ತು ಸ್ವೀಕರಿಸಲಾಗುತ್ತಿದ್ದು, ಈ ಬಾರಿ ಪ್ಯಾಲೇಸ್ ಸಿಟಿ ಕ್ಲಬ್ ಮತ್ತು ಪ್ಯಾಲೇಸ್ ಸಿಟಿ ಕ್ವೀನ್ಸ್ ಕ್ಲಬ್ ವತಿಯಿಂದ ಈ ಸತ್ಕಾರ್ಯ ನೆರವೇರಿಸಿರುವುದು ಸಂತಸ ತಂದಿದೆ ಎಂದರು. ಮಾಜಿ ಎಂಸಿಸಿ ಲಯನ್ ಡಾ.ಎನ್. ಕೃಷ್ಣೇಗೌಡ ಮಾತನಾಡಿ, ಮೂಕಪ್ರಾಣಿಗಳಿಗೆ ಆರೋಗ್ಯದ ಉಪಚಾರಕ್ಕೆ ನೆರವಾಗುವ ಮಾನವೀಯ ಕಾರ್ಯಕ್ಕೆ ಎಲ್ಲಾ ಸದಸ್ಯರು ಕೈಜೋಡಿಸಿದ್ದಾರೆ. ಜಯಕುಮಾರ್ ಅವರೇ 2 ಲಕ್ಷ ದೇಣಿಗೆ ನೀಡಿದ್ದು, ಎಲ್ಲರಿಗೂ ಧನ್ಯವಾದಗಳು ಎಂದರು. ಇದೇ ವೇಳೆ ಲಯನ್ಸ್ ಸೇವಾ ಕಾರ್ಯವನ್ನು ಶ್ಲಾಘಿಸಿದ ಮೃಗಾಲಯದ ಅಧಿಕಾರಿಗಳನ್ನು, ಲಯನ್ಸ್ ಕ್ಲಬ್ ಸದಸ್ಯರಾಗುವಂತೆ ಆಹ್ವಾನಿಸಲಾಯಿತು.

ಈ ವೇಳೆ 1ನೇ ಉಪ ಜಿಲ್ಲಾ ಗವರ್ನರ್ ಎಸ್.ಮತ್ತಿ ದೇವಕುಮಾರ, ಜಿಎಂಟಿ ಕೋ–ಆರ್ಡಿನೇಟರ್ ಜಯಕುಮಾರ್, ಡಿಸಿಎಸ್ ಸಿದ್ದೇಗೌಡರು, ಪಿಎಸ್‌ಟಿ ಫೋರಂ ಎಡಿಸಿಎಸ್ ಜಯರಾಮ್, ಪ್ರಾಂತೀಯ ಅಧ್ಯಕ್ಷ ಹೊನ್ನರಾಜು, ಎಡಿಸಿಎಸ್ ಗಳಾದ ಲೋಕೇಶ್, ನಂದೀಶ್, ಝೆಡ್‌ಸಿ ಪ್ರಕಾಶ್, ಡಿಸಿ ಮೋಹನ್, ಕ್ಲಬ್‌ನ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ಅಶ್ವಥ್, ರಾಣಿ ಲಕ್ಷ್ಮಣ್, ಸುಗುಣ ಹೊನ್ನರಾಜು, ಕವಿತಾ ಪ್ರಕಾಶ್, ಶಶಿಕಲಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಸೆ.16ಕ್ಕೆ, ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮ

ಮೈಸೂರು, ಸೆ.12– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕರಾಮುವಿ) ಹಾಗೂ ಕರ್ನಾಟಕ ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟ ಸಹಯೋಗದಲ್ಲಿ ಜ್ಯೋತಿರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ಸೆ.16ರಂದು ಬೆಳಗ್ಗೆ 11ಕ್ಕೆ ಕರಾಮುವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಶ್ರೀರಂಗಪಟ್ಟಣ ಬೇಬಿಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮಹನ್ನೋತಿ ವಿಜ್ಞಾನಿ ಡಾ.ಎಸ್.ವಿ. ಶರ್ಮ, ತ್ರಿಸ್ಕಂದ ಜ್ಯೋತಿರ್ ವಿದ್ವಾನ್ ಸಿದ್ಧಾಂತಿ ಡಾ.ಕೆ.ಪುಟ್ಟು ಹೊನ್ನಯ್ಯ, ಶಾಸ್ವತಿ ಧಾರ್ಮಿಕ ಕ್ರಿಯಾ ಸಮಿತಿಯ ಖ್ಯಾತ ಜ್ಯೋತಿಷಿ ಡಾ.ಭಾನು ಪ್ರಕಾಶ್ ಶರ್ಮ, ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ ಬೋಧನಾ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎನ್. ಅನಂತ ರಾಘವನ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ದಸರಾ ಮಹೋತ್ಸವ-2025

ಇಂದು ದಸರಾ ಚಲನ ಚಿತ್ರೋತ್ಸವ ಉದ್ಘಾಟನೆ

ಸೆಪ್ಟೆಂಬರ್ 14 ರಿಂದ 20ರವರೆಗೆ ಐನಾಕ್ಸ್‌ನಲ್ಲಿ ಚಲನಚಿತ್ರ ಪ್ರದರ್ಶನ

ಮೈಸೂರು, ಸೆ.12(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ದಸರಾ ಚಲನ ಚಿತ್ರೋತ್ಸವ ನಾಳೆ (ಸೆಪ್ಟೆಂಬರ್ 13) ಉದ್ಘಾಟನೆಗೊಳ್ಳಲಿದೆ. ನಗರದ ಮಾಲ್ ಆಫ್ ಮೈಸೂರ್‌ನ ನೆಲ ಮಹಡಿಯಲ್ಲಿ ಬೆಳಿಗ್ಗೆ 11 ಗಂಟೆಗೆ ದಸರಾ ಚಲನ ಚಿತ್ರೋತ್ಸವವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು.

ಚಲನಚಿತ್ರ ನಟಿ ಸು ಫ್ರಂ ಸೋ ಖ್ಯಾತಿಯ ಸಂಧ್ಯಾ ಅರಕೆರೆ, ನಟ ಪೃಥ್ವಿ ಅಂಬರ್, ಅಂಜಲಿ, ಖ್ಯಾತ ಸಂಗೀತ ನಿರ್ದೇಶಕ ನಾಗಾರ್ಜುನ ಶರ್ಮಾ, ಹಿನ್ನೆಲೆ ಗಾಯಕ ಜಸ್ಕರನ್ ಸಿಂಗ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಮಾಲ್ ಆಫ್ ಮೈಸೂರ್‌ನ ಐನಾಕ್ಸ್‌ನಲ್ಲಿ ಸೆಪ್ಟೆಂಬರ್ 14 ರಿಂದ 20ರವರೆಗೆ ಚಲನಚಿತ್ರೋತ್ಸವ ನಡೆಯಲಿದ್ದು, ವಿದ್ಯಾರ್ಥಿಗಳಿಗೆ 300 ಹಾಗೂ ಇತರರಿಗೆ 500 ರೂಪಾಯಿ ಪಾಸ್ ದರ ನಿಗದಿ ಮಾಡಲಾಗಿದೆ.

ಸೆ.14 ದಸರಾ ನಾಡಕುಸ್ತಿಗೆ ಜೋಡಿ ಕಟ್ಟುವ ಕೆಲಸ



ಮೈಸೂರು, ಸೆ.12(ಜಿಎ)-ದಸರಾ ಮಹೋತ್ಸವದ ಅಂಗವಾಗಿ ಸೆ.22ರಿಂದ 28ರವರೆಗೆ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಡಕುಸ್ತಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಸೆ.14 ರಂದು ಬೆಳಗ್ಗೆ 11 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣ ಆವರಣದ ಒಳಾಂಗಣ ಕ್ರೀಡಾಂಗಣದಲ್ಲಿ ನಾಡಕುಸ್ತಿ ಕುಸ್ತಿಪಟುಗಳಿಗೆ ಜೋಡಿ ಕಟ್ಟಲಿದ್ದಾರೆ.

ನಾಡಕುಸ್ತಿಯಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಎಲ್ಲಾ ಕುಸ್ತಿಪಟುಗಳಿಗೆ ಜೋಡಿ ಕಟ್ಟುವ ದಿನದಂದು ತಮ್ಮ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಕುಸ್ತಿ ಸಮವಸ್ತ್ರದಲ್ಲಿರುವ 2 ಭಾವಚಿತ್ರದೊಂದಿಗೆ ಹಾಜರಾಗಬೇಕು. ಕುಸ್ತಿ ಉಪಸಮಿತಿ ವತಿಯಿಂದ ನೀಡುವ ಅರ್ಜಿ ಭರ್ತಿ ಮಾಡಿ, ಜೊತೆಗೆ ಬ್ಯಾಂಕ್ ಖಾತೆಯ ಪಾಸ್‌ಬುಕ್ (ಖಾತೆ ಸಂಖ್ಯೆ, ಬ್ಯಾಂಕ್ ಹೆಸರು ಮತ್ತು ಐಎಫ್‌ಎಸ್‌ಸಿ ಕೋಡ್ ಕಾಣುವ ರೀತಿ) ಮತ್ತು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ 0821-2446638 ಸಂಪರ್ಕಿಸಿ ಎಂದು ದಸರಾ ಕುಸ್ತಿ ಉಪ ಸಮಿತಿ, ಉಪವಿಶೇಷಾಧಿಕಾರಿ ನಾಗೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮೈಸೂರು ನಗರದೆಲ್ಲೆಡೆ ಹಂತ ಹಂತವಾಗಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿಯ ವೃತ್ತದಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ವಿಶೇಷ ವಿನ್ಯಾಸ ರೂಪಿಸುವ ಕಾರ್ಯ ತ್ವರಿತ ಗತಿಯಲ್ಲಿ ಸಾಗಿದೆ.

ಮೈಸೂರು ಅರಮನೆ ದೀಪಾಲಂಕಾರಕ್ಕೆ ಸಿದ್ಧತೆ; ಹಾಳಾಗಿರುವ ಬಲ್ಬ್‌ಗಳ ಬದಲಾವಣೆ ಕಾರ್ಯ



ಅರಮನೆಯ ಆನೆ ಬಾಗಿಲು ಬಳಿ ಸಾರ್ವಜನಿಕ ದರ್ಬಾರ್ ಹಾಲ್ ಮೇಲ್ಛಾವಣಿಯಲ್ಲಿ ಅಲಂಕಾರಿಕಾ ಚಾಂಡ್ಲಿಯರ್ ಬಲ್ಬ್ ಹಾಗೂ ಸೀಲಿಂಗ್‌ನಲ್ಲಿರುವ ಚಿತ್ರಗಳ ಸ್ವಚ್ಛತಾ ಕಾರ್ಯದಲ್ಲಿ ಮಗ್ನರಾಗಿರುವ ಸಿಬ್ಬಂದಿ



ದೀಪಾಲಂಕಾರದ ಹಾಳಾದ ಬಲ್ಬ್‌ಗಳನ್ನು ಕ್ರೇನ್ ಸಹಾಯದಿಂದ ಬದಲಾಯಿಸುತ್ತಿರುವುದು.

ದರ್ಬಾರ್ ಹಾಲ್‌ನಲ್ಲೂ ಸಿದ್ಧತೆ

ನವರಾತ್ರಿ ವೇಳೆ ಅರಮನೆಯ ಒಳಗೆ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯಕ್ಕೆ ಅರಮನೆಯ ಖಾಸಗಿ ಹಾಗೂ ಸಾರ್ವಜನಿಕ ದರ್ಬಾರ್ ಹಾಲ್‌ನಲ್ಲಿ ಸಿದ್ದತಾ ಕಾರ್ಯ ಸಾಗಿದೆ. ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಿರುವ ಅಲಂಕಾರಿಕಾ ಚಾಂಡ್ಲಿಯರ್ (ಜೋತು ಬಿದ್ದಂತೆ ಇರುವ ಲೈಟ್‌ಗಳ ಗೊಂಚಲು) ಬಲ್ಬ್‌ಗಳ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ. ಚಾಂಡ್ಲಿಯರ್‌ನಲ್ಲಿ 19 ರಿಂದ 25 ಬಲ್ಬ್‌ಗಳಿದ್ದು, ಅವು ದರ್ಬಾರ್ ಹಾಲ್‌ಗೆ ಮೆರಗು ನೀಡಲಿವೆ. ನವರಾತ್ರಿ ಹಿನ್ನೆಲೆಯಲ್ಲಿ ಅವುಗಳನ್ನು ಬಿಚ್ಚಿ, ಶಾಂಪುವಿನಿಂದ ತೊಳೆದು ಮರು ಜೋಡಣೆ ಮಾಡುವ ಕಾರ್ಯವೂ ಸಾಗಿದೆ.

ಮೈಸೂರು, ಸೆ.12(ಎಂಟಿವೈ)- ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ದೀಪಾಲಂಕಾರದ ಹಾಳಾಗಿರುವ ಸುಮಾರು 16 ರಿಂದ 17 ಸಾವಿರ ಬಲ್ಬ್ ಬದಲಿಸುವ ಕಾರ್ಯ ತ್ವರಿತವಾಗಿ ಸಾಗಿದ್ದು, ನವರಾತ್ರಿ ಆರಂಭಕ್ಕೂ ಮುನ್ನ ಅರಮನೆಯ ದೀಪಾಲಂಕಾರ ಕಂಗೊಳಿಸಲಿದೆ.

ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯಕ್ಕೂ ಸಿದ್ಧತೆಗಳಾಗುತ್ತಿವೆ. ಈ ಮಧ್ಯೆ ದೀಪಾಲಂಕಾರದ ಬಲ್ಬ್‌ಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲಾಗುತ್ತಿದೆ. ಕಳೆದ ಐದಾರು ದಿನಗಳಿಂದ ಅರಮನೆಯ ವಿವಿಧ ದ್ವಾರಗಳಲ್ಲಿ ಕೆಟ್ಟಿದ್ದ ಬಲ್ಬ್‌ಗಳ ಬದಲಾವಣೆ ಕಾರ್ಯ ಆರಂಭವಾಗಿದ್ದರೂ, ಇಂದಿನಿಂದ ಅರಮನೆಯ ಪ್ರಮುಖ ಭಾಗದ ಬಲ್ಬ್‌ಗಳ ತಪಾಸಣೆ ನಡೆಸಿ, ಕೆಟ್ಟಿರುವ ಬಲ್ಬ್‌ಗಳನ್ನು ಬದಲಾಯಿಸಲಾಗುತ್ತಿದೆ.

ಅರಮನೆ ಪ್ರವೇಶ ದ್ವಾರ, ಗೋಡೆ ಮೇಲೆ ಒಟ್ಟು ಒಂದು ಲಕ್ಷ ಇನ್‌ಕ್ಯಾಂಡಿಲೇಟ್ ಬಲ್ಬ್‌ಗಳ ಅಳವಡಿಸಲಾಗಿದೆ. ಆದರೆ ಪ್ರತಿ ದಿನ ಪಾರಿವಾಳಗಳ ಹಾರಾಟ, ಗಾಳಿ-ಮಳೆಯಿಂದ ಕೆಲವು ಬಲ್ಬ್‌ಗಳು ಸಿಡಿದು ಹೋಗುತ್ತವೆ. ಹೀಗೆಯೇ ಪ್ರತಿ ವರ್ಷ ಸುಮಾರು 30 ಸಾವಿರ ಬಲ್ಬ್‌ಗಳು ಹಾಳಾಗುತ್ತವೆ. ಈ ಹಿನ್ನೆಲೆಯಲ್ಲಿ ದಸರಾ ವೇಳೆಗೆ ಕೆಟ್ಟಿರುವ ಬಲ್ಬ್‌ಗಳನ್ನು ಬದಲಿಸುವುದು ವಾಡಿಕೆಯಾಗಿದೆ. ಈ ಬಾರಿಯೂ ಸುಮಾರು 16,500 ರಿಂದ 17,500 ಬಲ್ಬ್ ಹಾಳಾಗಿರುವ ಅಂದಾಜಿದೆ. 12ಕ್ಕೂ ಹೆಚ್ಚು ಕಾರ್ಮಿಕರು ದೊಡ್ಡ ಕ್ರೇನ್ ಸಹಾಯದಿಂದ ಬಲ್ಬ್ ಬದಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಕೆಂಪು ದೀಪದ ಸಂಜ್ಞೆ

ಅರಮನೆಯ ಮುಖ್ಯ ಕಟ್ಟಡದ ಗೋಪುರದಲ್ಲಿರುವ ಕೆಂಪು ದೀಪ ದೀಪಾಲಂಕಾರದ ಮುನ್ಸೂಚನೆ ನೀಡಲಿದೆ. ಸದಾ ಉರಿಯುವ ಕೆಂಪು ದೀಪ ದೀಪಾಲಂಕಾರದ ಬಲ್ಬ್‌ಗಳು ಆನ್ ಆಗುವ 5 ನಿಮಿಷ ಮುನ್ನ ಕೆಂಪು ದೀಪ ಆಫ್ ಮಾಡಲಾಗುತ್ತದೆ. ಇದು ಸ್ವಿಚ್ ಆನ್ ಮಾಡಲು ನಿಯೋಜಿಸಿರುವ ಸಿಬ್ಬಂದಿಗೆ ಎಚ್ಚರಿಕೆ ಸಂದೇಶ ರವಾನಿಸಲಾಗುತ್ತದೆ. ಬಳಿಕ ದೀಪಾಲಂಕಾರದ ಬಲ್ಬ್ ಆನ್ ಮಾಡುವುದಕ್ಕಾಗಿ ಕೆಂಪು ದೀಪ ಆನ್ ಮಾಡುತ್ತಿದ್ದಂತೆಯೇ ಮೂರು ಪ್ರತ್ಯೇಕ ಸ್ಥಳದಲ್ಲಿರುವ ಮೂರು ಸ್ವಿಚ್‌ಗಳನ್ನು 1-2 ಸೆಕೆಂಡ್ ಅಂತರದಲ್ಲಿ ಆನ್ ಮಾಡಲಾಗುತ್ತದೆ. ಇದರಿಂದ ಏಕಕಾಲಕ್ಕೆ ಲಕ್ಷ ಬಲ್ಬ್‌ಗಳು ಆನ್ ಆದಂತೆ ಕಾಣುತ್ತವೆ.

ಸಾಮಾನ್ಯ ಬಲ್ಬ್ ಬಳಕೆಯೇ ವಿಶೇಷ: ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಎಲ್‌ಇಡಿ ಬಲ್ಬ್‌ಗಳ ಬಳಕೆ ಹೆಚ್ಚಾಗುತ್ತಿದೆ. ಆದರೆ ಮೈಸೂರು ಅರಮನೆಗೆ ಅಳವಡಿಸಿರುವ ಬಲ್ಬ್‌ಗಳು ಇಂದಿಗೂ ಸಾಮಾನ್ಯ ಬಲ್ಬ್‌ಗಳೇ ಆಗಿವೆ. ಈ ಇನ್‌ಕ್ಯಾಂಡಿಲೇಟ್ 15 ವೋಲ್ಟ್ ಸಾಮರ್ಥ್ಯದ್ದಾಗಿದೆ. ಹೊನ್ನಿನ ಬಣ್ಣದಲ್ಲಿ ಬೆಳಗಲಿರುವ ಥ್ರೆಡ್‌ವುಳ್ಳ ಬಲ್ಬ್‌ಗಳಾಗಿವೆ. ಈ ಮಾದರಿಯ ಬಲ್ಬ್‌ಗಳು ಅರಮನೆಯಲ್ಲಿ ಮಾತ್ರವೇ ಬಳಸಲಾಗುತ್ತಿದ್ದು, ದೆಹಲಿ ಕಂಪನಿಯೊಂದು ಸರಬರಾಜು ಮಾಡುತ್ತಿದೆ.

3 ಸ್ವಿಚ್‌ನಲ್ಲಿ ಲಕ್ಷ ಬಲ್ಬ್ ಬೆಳಗಲಿವೆ

ಅರಮನೆಯ ದೀಪಾಲಂಕಾರಕ್ಕೆ ಒಟ್ಟು ಒಂದು ಲಕ್ಷ ಇನ್‌ಕ್ಯಾಂಡಿಲೇಟ್ ಬಲ್ಬ್ ಅಳವಡಿಸಲಾಗಿದೆ. ಅವುಗಳನ್ನು ವಿಭಾಗಿಸಲಾಗಿದೆ. ಅರಮನೆಯ ಮುಖ್ಯ ಕಟ್ಟಡ, ಜಯಮಾರ್ತಾಂಡ ದ್ವಾರ ಹಾಗೂ ಕೋಟೆ ಆಂಜನೇಯಸ್ವಾಮಿ ದೇವಾಲಯದ ದ್ವಾರದ ಬಳಿ ಪ್ರತ್ಯೇಕವಾಗಿ 3 ಸ್ವಿಚ್ ಅಳವಡಿಸಲಾಗಿದೆ. ಈ ಮೂರು ಸ್ವಿಚ್ ಅನ್ನು ಏಕಕಾಲಕ್ಕೆ ಆನ್ ಮಾಡುವುದರಿಂದ ದೀಪಾಲಂಕಾರದ ಲಕ್ಷ ಬಲ್ಬ್‌ಗಳು ಬೆಳಗಲಿವೆ

ಸಾಮಾನ್ಯ ಪ್ರಕ್ರಿಯೆ: ಈ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಮಾತನಾಡಿ, ಪ್ರತಿ ವರ್ಷ ಕೆಟ್ಟಿರುವ ಬಲ್ಬ್‌ಗಳನ್ನು ಬದಲಿಸುವುದು ಸಾಮಾನ್ಯ ಪ್ರಕ್ರಿಯೆ. ಈ ಬಾರಿ ಅಂದಾಜು 16,500 ರಿಂದ 17,500 ಬಲ್ಬ್‌ಗಳು ಹಾಳಾಗಿರಬಹುದು ಎಂದು ಅಂದಾಜಿಸಲಾಗಿದೆ. ಅರಮನೆ ಪ್ರಮುಖ ಭಾಗದ ಬಲ್ಬ್‌ಗಳ ಬದಲಾವಣೆಗೆ ದೊಡ್ಡ ಕ್ರೇನ್ ಬಳಸಲಾಗುತ್ತಿದೆ. ವಾರದಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ. ಇನ್‌ಕ್ಯಾಂಡಿಲೇಟ್ ಬಲ್ಬ್‌ಗಳು ಅರಮನೆಯ ಸೌಂದರ್ಯ ಇಮ್ಮಡಿಗೊಳಿಸುವ ನಿಟ್ಟಿನಲ್ಲಿ ಅವುಗಳನ್ನೇ ಉಳಿಸಿಕೊಳ್ಳಲಾಗಿದೆ. ದೆಹಲಿಯ ಕಂಪನಿಯಿಂದ ವರ್ಷಕ್ಕೆ 35 ಸಾವಿರ ಇನ್‌ಕ್ಯಾಂಡಿಲೇಟ್ ಬಲ್ಬ್ ತರಿಸಿಕೊಳ್ಳಲಾಗುತ್ತಿದೆ. ಅವುಗಳಲ್ಲಿ ದಸರಾ ಸಂದರ್ಭದಲ್ಲಿ 16 ರಿಂದ 17 ಸಾವಿರ ಬಲ್ಬ್‌ಗಳ ಬದಲಿಸಲಾಗುತ್ತದೆ. ಉಳಿದ ಸಂದರ್ಭದಲ್ಲೂ ಬಲ್ಬ್‌ಗಳ ಬದಲಾವಣೆ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ ಎಂದರು.

ಲೈವ್ ಆಗಿ ಬದಲಾವಣೆ: ಅರಮನೆಯ ದೀಪಾಲಂಕಾರದ ಬಲ್ಬ್‌ಗಳನ್ನು ಸ್ವಿಚ್ ಆನ್ ಮಾಡಿಕೊಂಡೇ ಲೈವ್ ಆಗಿ ಬದಲಿಸಲಾಗುತ್ತದೆ. ಇದಕ್ಕಾಗಿ 9ಕ್ಕೂ ಹೆಚ್ಚು ಮಾರ್ಗದ ಸ್ವಿಚ್ ಅಳವಡಿಸಲಾಗಿದ್ದು, ಯಾವ ಭಾಗದಲ್ಲಿ ವಿದ್ಯುತ್ ಬಲ್ಬ್ ಪರಿಶೀಲಿಸಲಾಗುತ್ತದೋ ಆ ಭಾಗದ ಸ್ವಿಚ್ ಆನ್ ಮಾಡಿಕೊಂಡು ಬಲ್ಬ್ ಬದಲಾವಣೆ ಕಾರ್ಯ ನಡೆಸಲಾಗುತ್ತದೆ ಎಂದು ತಿಳಿಸಿದರು.

ದಸರಾ ಮಹೋತ್ಸವ: ಐದು ದಿನ ಅರಮನೆಗೆ ಪ್ರವಾಸಿಗರಿಗೆ ನಿರ್ಬಂಧ

- ಸೆ.15ರಿಂದ ಅ.12ರವರೆಗೆ ಧ್ವನಿ ಬೆಳಕು ಕಾರ್ಯಕ್ರಮ ತಾತ್ಕಾಲಿಕ ಸ್ಥಗಿತ
- ಸೆ.16ರಂದು ಸಿಂಹಾಸನ ಜೋಡಣೆ; ಅ.31ರಂದು ಸಿಂಹಾಸನ ವಿಸರ್ಜನೆ



ಮೈಸೂರು, ಸೆ.12(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಅರಮನೆಯಲ್ಲಿ ರಾಜವಂಶಸ್ಥರು ವಿವಿಧ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುವುದರಿಂದ ಐದು ದಿನಗಳ ಕಾಲ ಅರಮನೆಗೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದ್ದು, ಸೆ.15ರಿಂದ ಅ.12ರವರೆಗೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಅರಮನೆ ಮಂಡಳಿ ನಿರ್ಧರಿಸಿದೆ.

ದಸರಾ ಮಹೋತ್ಸವ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಅರಮನೆಯಲ್ಲಿ ದಸರಾ ಸಿದ್ಧತೆ ಭರದಿಂದ ಸಾಗಿದೆ. ನವರಾತ್ರಿ ವೇಳೆ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಚಿನ್ನದ ಸಿಂಹಾಸನವೇರಿ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಸೆ.16ರಂದು ಅರಮನೆಯಲ್ಲಿರುವ ಸ್ಟ್ರಾಂಗ್ ರೂಮ್‌ನಿಂದ ದರ್ಬಾರ್ ಹಾಲ್‌ಗೆ ಚಿನ್ನದ ಸಿಂಹಾಸನ ಜೋಡಣೆ ಮಾಡಲು ಮುಹೂರ್ತ ಫಿಕ್ಸ್ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಸೆ.16ರಂದು ಬೆಳಗ್ಗೆ 8.30ರಿಂದ ಮಧ್ಯಾಹ್ನ 1 ಗಂಟೆವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ. ಮಧ್ಯಾಹ್ನ 1 ಗಂಟೆ ನಂತರ ಪ್ರವಾಸಿಗರು ಅರಮನೆ ವೀಕ್ಷಿಸಬಹುದಾಗಿದೆ.

ನವರಾತ್ರಿ ಆರಂಭದ ದಿನವಾದ ಸೆ.22ರಂದು ಅರಮನೆಯ ದರ್ಬಾರ್ ಹಾಲ್‌ನಲ್ಲಿ ಖಾಸಗಿ ದರ್ಬಾರ್ ಆರಂಭವಾಗುವುದರಿಂದ ಅಂದು ಬೆಳಗ್ಗಿನಿಂದ ಮಧ್ಯಾಹ್ನ 2 ಗಂಟೆವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ. ಖಾಸಗಿ ದರ್ಬಾರ್ ಮುಗಿದ ನಂತರ ಅರಮನೆ ವೀಕ್ಷಣೆಗೆ ಅವಕಾಶ ನೀಡಲಾಗುತ್ತದೆ. ಆಯುಧ ಪೂಜೆ ದಿನವಾದ ಅ.1 ಹಾಗೂ ವಿಜಯ ದಶಮಿ ದಿನವಾದ ಅ.2ರಂದು ಅರಮನೆ ವೀಕ್ಷಣೆಗೆ ದಿನವಿಡೀ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ ಅಲ್ಲದೆ, ದರ್ಬಾರ್ ಹಾಲ್‌ನಿಂದ ಸಿಂಹಾಸನ ವಿಸರ್ಜಿಸಿ, ಸ್ಟ್ರಾಂಗ್ ರೂಂಗೆ ಕೊಂಡೊಯ್ದು ಸುರಕ್ಷಿತವಾಗಿಡುವುದಕ್ಕಾಗಿ ಅ.31ರಂದು ಬೆಳಗ್ಗೆಯಿಂದ ಮಧ್ಯಾಹ್ನ 12 ಗಂಟೆವರೆಗೂ ಅರಮನೆಗೆ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ನೀಡದಿರಲು ಅರಮನೆ ಮಂಡಳಿ ನಿರ್ಧರಿಸಿದೆ.

> ದಸರಾ ಮಹೋತ್ಸವದ ಅಂಗವಾಗಿ ಅರಮನೆ ಆವರಣದಲ್ಲಿ ಸಂಜೆ 7ರಿಂದ 8 ಗಂಟೆವರೆಗೆ ನಡೆಯುತ್ತಿದ್ದ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ಸೆ.15ರಿಂದ ಅ.12ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅ.13ರಿಂದ ಎಂದಿನಂತೆ ಧ್ವನಿ ಮತ್ತು ಬೆಳಕು ವ್ಯವಸ್ಥೆ ಪುನರಾರಂಭವಾಗಲಿದೆ.
> -ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಮಂಡಳಿ ಉಪ ನಿರ್ದೇಶಕ

ಸೆ. 22ರಿಂದ ಯೋಗ ದಸರಾ

ಪಂಚತತ್ವ ದರ್ಶನ, ವೈಜ್ಞಾನಿಕ ಪ್ರಾಣಾಯಾಮ ಇನ್ನು ಹತ್ತು ಹಲವು ವಿಶೇಷ

ಮೈಸೂರು, ಸೆ.12(ಎಂಕೆ)- ಪಂಚತತ್ವ ದರ್ಶನ... ವೈಜ್ಞಾನಿಕ ಪ್ರಾಣಾಯಾಮ ವಿಚಾರ-ವಿನಿಮಯದೊಂದಿಗೆ ನಾಡದೇವಿಗೆ ವಂದಿಸುವ ಕಾರ್ಯಕ್ರಮಗಳನ್ನು ಯೋಗ ದಸರಾ ಉಪಸಮಿತಿ ರೂಪಿಸಿದೆ.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಆರೋಗ್ಯ ಆಕರ್ಷಣೆಯಾದ ಯೋಗ ದಸರಾ, ಈ ವರ್ಷ ಪಂಚಭೂತಗಳನ್ನು ಸ್ಮರಿಸುವುದರೊಂದಿಗೆ ವೈಜ್ಞಾನಿಕ ಯೋಗ ಜ್ಞಾನವನ್ನು ಪಸರಿಸಲು ಅಣಿಯಾಗುತ್ತಿದೆ. ಸೆ.22 ರಿಂದ 30ರವರೆಗೆ ನಾನಾ ಕಾರ್ಯಕ್ರಮಗಳೊಂದಿಗೆ ಯೋಗಾಭ್ಯಾಸದ ಮೂಲಕ ಆರೋಗ್ಯ ಸಿದ್ದಿಯ ಅರಿವನ್ನು ಮೂಡಿಸಲು ಯೋಗ ದಸರಾ ಉಪಸಮಿತಿ ನಿರ್ಧರಿಸಿದೆ.

ಸೆ.22 ರಂದು ಸಂಜೆ 5 ಗಂಟೆಗೆ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಮೃತಮಹೋತ್ಸವ ಸಭಾಂಗಣದಲ್ಲಿ ಯೋಗ ದಸರಾ ಉದ್ಘಾಟನೆ ಕಾರ್ಯಕ್ರಮ ನಡೆಯಲಿದ್ದು, ಯೋಗ್ಯ ನೃತ್ಯ ರೂಪಕಗಳ ಜೊತೆಗೆ ಪಂಚತತ್ವ ದರ್ಶನಕ್ಕೆ ವೇದಿಕೆ ಸಜ್ಜುಗೊಳಿಸಲಾಗುತ್ತಿದೆ.

ಹಾಗೆಯೇ ಸೆ.25 ರಂದು ಬೆಳಗ್ಗೆ 10 ಗಂಟೆಗೆ ಯೋಗ ವಿಜ್ಞಾನ ವಿಚಾರ ಸಂಕಿರಣ ನಡೆಯಲಿದ್ದು, ಯೋಗ ದಸರಾ ಪೂರ್ವಭಾವಿಯಾಗಿ ಸೆ.18, 19 ಮತ್ತು 20 ರಂದು ಮಾನಂದವಾಡಿ ರಸ್ತೆಯ ಬ್ರಹ್ಮಸಭಾ, ನಾಯ್ಕ ಸರ್ಕಲ್, ಶ್ರೀರಾಂಪುರ 2ನೇ ಹಂತ, ಶ್ರೀ ಗಾಯತ್ರಿ ರಾಮಮಂದಿರ, ಶ್ರೀ ರಾಮ ಮಂದಿರ ಬಲ್ಲಾಳ್ ವೃತ್ತ, ಸಿದ್ಧಾರ್ಥ ನಗರದ ಗಣಪತಿ ದೇವಸ್ಥಾನ, ಮಾತೃಮಂಡಳಿ ವೃತ್ತದಲ್ಲಿರುವ ಚಂದ್ರಮೌಳೇಶ್ವರ ದೇವಸ್ಥಾನ ಸೇರಿದಂತೆ 17 ಸ್ಥಳಗಳಲ್ಲಿ ವಿವಿಧ ಸಂಘ-ಸಂಸ್ಥೆಗಳಿಂದ ವೈಜ್ಞಾನಿಕ ಪ್ರಾಣಾಯಾಮ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಸ್ಪರ್ಧೆಗಳು: ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಸೆ.27 ರಂದು ಬೆಳಗ್ಗೆ 8 ಗಂಟೆಯಿಂದ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಯೋಗಪಟುಗಳು ಭಾಗವಹಿಸಲಿದ್ದಾರೆ ಎಂದು ಯೋಗ ದಸರಾ ಉಪಸಮಿತಿ ಉಪವಿಶೇಷಾಧಿಕಾರಿ ಕೆ.ರಮ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯೋಗ ಚಾರಣ, ದುರ್ಗಾ ನಮಸ್ಕಾರ: ನಾಡ ಅಧಿದೇವತೆ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಸೆ.30 ರಂದು ಬೆಳಗ್ಗೆ 6 ಗಂಟೆಗೆ ಬೆಟ್ಟ ಹತ್ತುವ ಮೂಲಕ ಯೋಗ ಚಾರಣ ಹಾಗೂ ಬೆಟ್ಟದ ಮೇಲೆ ಬೆಳಗ್ಗೆ 8 ಗಂಟೆಗೆ ದುರ್ಗ ನಮಸ್ಕಾರ ಕಾರ್ಯಕ್ರಮ ನಡೆಯಲಿದ್ದು, ಸಾವಿರಾರು ಮಂದಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.


ಮೈಸೂರು ಅರಮನೆ ಆವರಣದಲ್ಲಿ ದಸರಾ ಗಜಪಡೆಗೆ 'ಮಣ್ಣಿನ ಸ್ನಾನ' ಭಾಗ್ಯ

ಆನೆಗಳ ಆರೋಗ್ಯ ದೃಷ್ಟಿಯಿಂದ ಇದೇ ಮೊದಲ ಬಾರಿಗೆ 'ಮಡ್ ಬಾತ್'

ಮೈಸೂರು, ಸೆ.12(ಎಂಟಿವೈ)- ದಸರಾ ಆರಂಭಕ್ಕೆ ದಿನಗಣನೆ ಆರಂಭವಾಗಿದೆ. ಗಜಪಡೆಯ ಆರೋಗ್ಯ ದೃಷ್ಟಿಯಿಂದ ಇದೇ ಮೊದಲ ಬಾರಿಗೆ ಅರಮನೆ ಆವರಣದಲ್ಲಿ ಆನೆಗಳಿಗೆ 'ಮಣ್ಣಿನ ಸ್ನಾನ' (ಮಡ್ ಬಾತ್)ದ ವ್ಯವಸ್ಥೆ ಮಾಡಲಾಗಿದೆ.

ನವರಾತ್ರಿ ಆರಂಭಕ್ಕೆ ಕೇವಲ 10 ದಿನ ಮಾತ್ರವಿದ್ದು, ಇದರಲ್ಲಿ ಪ್ರಮುಖ ಪಾತ್ರ ವಹಿಸುವ ಆನೆಗಳ ಆರೋಗ್ಯ ಕಾಪಾಡುವ ಮಹತ್ತರ ಜವಾಬ್ದಾರಿ ಅರಣ್ಯ ಇಲಾಖೆ ಮೇಲಿದೆ. ಕೆಲ ದಿನಗಳ ಹಿಂದೆ 2-3 ಆನೆಗಳಿಗೆ ಭೇದಿಯಾಗಿ, ಈಗ ಸುಧಾರಿಸಿಕೊಂಡಿವೆ. ಎಚ್ಚರಿಕಾ ಕ್ರಮವಾಗಿ ವಿಶೇಷ ಆರೈಕೆ ಮಾಡಲಾಗುತ್ತಿದೆ. ಈಗ ತಜ್ಞರ ಸಲಹೆಯಂತೆ 'ಮಣ್ಣಿನ ಸ್ನಾನ' ಪದ್ಧತಿ ಅನುಸರಿಸಲಾಗುತ್ತಿದೆ.

ಆನೆಗಳಿಗೆ ಮಣ್ಣಿನ ಸ್ನಾನ ಅಚ್ಚುಮೆಚ್ಚು: ಆನೆಗಳಿಗೆ ಮಣ್ಣಿನ ಸ್ನಾನ ಅಚ್ಚುಮೆಚ್ಚು. ದೇಹ ತಣಿಸಿಕೊಳ್ಳಲು ಮೈಮೇಲೆ ಮಣ್ಣು ಎರಚಿಕೊಳ್ಳುತ್ತವೆ. ಇದರಿಂದ ಅವುಗಳ ಚರ್ಮ ರೋಗವೂ ನಿವಾರಣೆಯಾಗುವುದರೊಂದಿಗೆ ಲವಲವಿಕೆಯಿಂದ ಇರಲು ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ಕಾಡಾನೆಗಳು, ಶಿಬಿರಗಳಲ್ಲಿನ ಸಾಕಾನೆಗಳು ಮೈಮೇಲೆ ಮಣ್ಣು ಎರಚಿಕೊಂಡು ಸಂಭ್ರಮಿಸುತ್ತವೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಗೆ ಮಣ್ಣಿನ ಸ್ನಾನದ ಭಾಗ್ಯ ಒದಗಿ ಬಂದಿದೆ.



ಅರಮನೆ ಆವರಣದಲ್ಲಿ ದಸರಾ ಗಜಪಡೆಯ ಆನೆಗಳಿಗೆ ಮಣ್ಣಿನ ಸ್ನಾನ ಮಾಡಲು ಸುರಿದಿರುವ ಮಣ್ಣಿನ ರಾಶಿ ಮೇಲೆ ಹೊರಳಾಡುತ್ತಿರುವ ರೂಪ.


ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆ ತಾಲೀಮಿನ ವೇಳೆ ಕಾಂಕ್ರೀಟ್ ಹಾಗೂ ಡಾಂಬರ್ ರಸ್ತೆಯಲ್ಲಿ ಸಾಗಿ, ದಿನ ದೂಡುತ್ತಿವೆ. ಅವುಗಳು ಮೈಮೇಲೆ ಮಣ್ಣು ಎರಚಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿರುವ ಆನೆ ತೊಳೆಯುವ ಕೊಳದ ಬಳಿ ಅರಣ್ಯ ಇಲಾಖೆ ಒಂದು ಲೋಡ್ ಮಣ್ಣನ್ನು ತಂದು ಸುರಿದಿದ್ದು, ಆನೆಗಳು ಆ ಮಣ್ಣಿನ ಗುಡ್ಡೆ ಮೇಲೆ ಹೊರಳಾಡಿ, ಮೈಮೇಲೆ ಮಣ್ಣನ್ನು ಎರಚಿಕೊಳ್ಳಲಾರಂಭಿಸಿವೆ. ತಾಲೀಮು ಮುಗಿಸಿ ಬಂದ ನಂತರ ಅವುಗಳ ಮೈತೊಳೆದ ಬಳಿಕ ಒಂದಾದ ನಂತರ ಒಂದರಂತೆ ಮಣ್ಣಿನಲ್ಲಿ ಮಿಂದೇಳಲು ಬಿಡಲಾಗುತ್ತಿದೆ. ನೈಸರ್ಗಿಕ ವಿಧಾನವಾದ ಮಣ್ಣಿನ ಸ್ನಾನದಿಂದ ಆನೆಗಳ ಅಜೀರ್ಣ ಸಮಸ್ಯೆ, ದೇಹ ತಂಪಾಗಿಸುವ ಹಾಗೂ ಚರ್ಮದ ಸಮಸ್ಯೆ ನಿವಾರಣೆ ಸಾಧ್ಯ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪಟ್ಟದ ಆನೆಯಾಗಿ 'ಶ್ರೀಕಂಠ' ಆಯ್ಕೆ

ಮೈಸೂರು, ಸೆ.12(ಎಂಟಿವೈ)- ದಸರಾ ಗಜಪಡೆಯಲ್ಲಿ ಮೊದಲ ಬಾರಿಗೆ ಆಗಮಿಸಿರುವ 'ಶ್ರೀಕಂಠ'ನನ್ನು ಪಟ್ಟದ ಆನೆಯಾಗಿಯೂ 'ಏಕಲವ್ಯ'ನನ್ನು ಪಟ್ಟದ ನಿಶಾನೆ ಆನೆಯಾಗಿಯೂ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಆಯ್ಕೆ ಮಾಡಿದ್ದಾರೆ.

ನವರಾತ್ರಿ ಆರಂಭಕ್ಕೆ ಕೇವಲ 10 ದಿನ ಮಾತ್ರವಿದ್ದು, ಈ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಪ್ರಮೋದಾದೇವಿ ಒಡೆಯರ್ ಅವರು ಪರಿಶೀಲಿಸಿ, ಅಂತಿಮವಾಗಿ ಎರಡು ಗಂಡಾನೆಗಳನ್ನು ಆಯ್ಕೆ ಮಾಡಿದರು. ರಾಜವಂಶಸ್ಥರ ಕೋರಿಕೆ ಮೇರೆಗೆ ಗುರುವಾರ ಸಂಜೆ ಆನೆ ಬಾಗಿಲಿನ ಮೂಲಕ ಸವಾರಿ ತೊಟ್ಟಿಗೆ ಪ್ರಶಾಂತ, ಧನಂಜಯ, ಗೋಪಿ, ಕಂಜನ್, ಭೀಮಾ, ಏಕಲವ್ಯ, ಶ್ರೀಕಂಠ, ಹೇಮಾವತಿ, ಕಾವೇರಿ ಆನೆಯನ್ನು ಕರೆದೊಯ್ಯಲಾಯಿತು.

ಸವಾರಿ ತೊಟ್ಟಿಗೆ ಆನೆ ಬಂದ ಆನೆಗಳನ್ನು ಪ್ರಮೋದಾದೇವಿ ಒಡೆಯರ್ ಅವರು ವೀಕ್ಷಿಸಿದರು. ನಿರೀಕ್ಷೆಯಂತೆ ಹೊಸ ಆನೆ ಶ್ರೀಕಂಠ ಆನೆಯನ್ನು ಪಟ್ಟದ ಆನೆಯಾಗಿ ಆಯ್ಕೆ ಮಾಡಿದರು. ಅಲ್ಲದೆ, ಪಟ್ಟದ ನಿಶಾನೆಯಾಗಿ ಏಕಲವ್ಯನನ್ನು ಗುರುತಿಸಿದರು. ರಾಜವಂಶಸ್ಥರ ಬೇಡಿಕೆಯಂತೆ ಅರಣ್ಯ ಇಲಾಖೆ ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಲು ಎರಡು ಆನೆಗಳಿಗೆ ಜವಾಬ್ದಾರಿ ನೀಡಿದೆ



ಮೊದಲ ಬಾರಿಯೇ ಒಲಿದ ಅದೃಷ್ಟ: ಶ್ರೀಕಂಠ, ಮೊದಲ ಬಾರಿಗೆ ದಸರಾ ಗಜಪಡೆಯಲ್ಲಿ ಸ್ಥಾನಗಿಟ್ಟಿಸಿಕೊಂಡಿದ್ದು, ರಾಜವಂಶಸ್ಥರ ಮನಗೆಲ್ಲುವಲ್ಲಿ ಯಶಸ್ವಿಯಾಗಿದೆ. ಹಾಸನ ಮತ್ತು ಕೊಡಗು ಜಿಲ್ಲೆಯ ಗಡಿಭಾಗದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಸಂದರ್ಭ ಶ್ರೀಕಂಠನನ್ನು 2014ರಲ್ಲಿ ಶನಿವಾರಸಂತೆ ಅರಣ್ಯ ವಲಯದಲ್ಲಿ ಸೆರೆ ಹಿಡಿಯಲಾಗಿತ್ತು ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಿಧನರಾದ ಬಳಿಕ ಸೆರೆ ಹಿಡಿದ ಮೊದಲ ಆನೆಯಾಗಿರುವ ಹಿನ್ನೆಲೆಯಲ್ಲಿ ರಾಜವಂಶಸ್ಥರ ಮೇಲಿನ ಗೌರವದಿಂದಾಗಿ ಇದಕ್ಕೆ ಶ್ರೀಕಂಠ ಎಂದು ನಾಮಕರಣ ಮಾಡಲಾಗಿತ್ತು.

ದೈತ್ಯ ದೇಹ, ಉದ್ದನೆಯ ದಂತ ಸೇರಿದಂತೆ ಲಕ್ಷಣವಾಗಿ ರುವ ಶ್ರೀಕಂಠ ಆನೆಯ ಮೃದು ಸ್ವಭಾವ ರಾಜವಂಶಸ್ಥರ ಮನ ಗೆದ್ದಿತ್ತು. ದಸರಾ ಗಜಪಡೆಯಲ್ಲಿ ಶ್ರೀಕಂಠ ಸ್ಥಾನ ಗಿಟ್ಟಿಸಿಕೊಂಡಿರುವ ಕುರಿತು ಆ.4ರಂದು 'ಮೈಸೂರು ಮಿತ್ರ'ದಲ್ಲಿ ವರದಿ ಪ್ರಕಟವಾಗಿತ್ತು. ಈ ಹಿನ್ನೆಲೆಯಲ್ಲಿ ಅ.12ರಂದು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಮತ್ತಿಗೋಡು ಶಿಬಿರಕ್ಕೆ ಹೋಗಿ ಶ್ರೀಕಂಠ ಆನೆಯನ್ನು ಪರಿಶೀಲಿಸಿದ್ದರು. ಇದೀಗ ಶ್ರೀಕಂಠ ಆನೆಯನ್ನು ಪಟ್ಟದ ಆನೆಯಾಗಿ ಆಯ್ಕೆ ಮಾಡಿದ್ದಾರೆ.

ಸೆ.19ರಂದು ಪತ್ರಕರ್ತರು, ಕುಟುಂಬದವರಿಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮಡಿಕೇರಿ, ಸೆ.12– ಕೊಡಗು ಪತ್ರಕರ್ತರ ಸಂಘ, ಪತ್ರಕರ್ತರ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ಸೆ.19 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಪತ್ರಕರ್ತರು, ಪತ್ರಕರ್ತರ ಕುಟುಂಬ ವರ್ಗದವರು, ಪತ್ರಿಕಾ ಕ್ಷೇತ್ರದ ಸಿಬ್ಬಂದಿಗಳು, ಪತ್ರಿಕಾ ವಿತರಕರು ಹಾಗೂ ಕುಟುಂಬದವರಿಗೆ ಪತ್ರಿಕಾಭವನದ ಬಳಿಯ ಕಾವೇರಿ ಹಾಲ್‌ನಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆಯ 15 ವಿಭಾಗಗಳ ನುರಿತ ತಜ್ಞರು ಹಾಗೂ ವೈದ್ಯರು ಈ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ನೇತ್ರ ತಜ್ಞರು, ಜನರಲ್ ಮೆಡಿಸಿನ್, ಮೂಳೆ ತಜ್ಞರು, ಇ.ಎನ್.ಟಿ. ತಜ್ಞರು, ಶ್ವಾಸಕೋಶ ತಜ್ಞರು, ದಂತ ವೈದ್ಯಕೀಯ, ಶಸ್ತ್ರ ಚಿಕಿತ್ಸಕರು, ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು, ಶ್ರವಣ ಆರೋಗ್ಯ ತಜ್ಞರು, ಮಾನಸಿಕ ಆರೋಗ್ಯ ತಜ್ಞರು ಮುಂತಾದ 15 ವಿಭಾಗಗಳ ನುರಿತ ತಜ್ಞರು ಈ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೇ ಆರೋಗ್ಯಕ್ಕೆ ಸಂಬಂಧಿಸಿದ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಆಯುಷ್ಮಾನ್ ಭಾರತ್ ಯೋಜನಾಧಿಕಾರಿ ಕೂಡ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಾನ್‌ಬೈಲ್ ಪ್ರೌಢಶಾಲೆ ವಿದ್ಯಾರ್ಥಿಗಳು ಥ್ರೋಬಾಲ್‌ನಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ



ಸುಂಟಿಕೊಪ್ಪ,ಸೆ.12– ಕಾನ್‌ಬೈಲ್ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಥ್ರೋಬಾಲ್ ವಿಭಾಗದಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ. ಕುಶಾಲನಗರದ ಬಾಲಕಿಯರ ಪ್ರೌಢಶಾಲೆಯಲ್ಲಿ ಆಯೋಜನೆಗೊಂಡಿದ್ದ ತಾಲೂಕು ಮಟ್ಟದ ಪ್ರೌಢಶಾಲಾ ವಿಭಾಗದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಗೆಲುವು ಸಾಧಿಸುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇದೇ ಶಾಲೆಯ ವಿದ್ಯಾರ್ಥಿ ವಲಯಮಟ್ಟದ ಕ್ರೀಡಾಕೂಟದಲ್ಲಿ ಜೀವಿತ್ ಉದ್ದಜಿಗಿತ, ಎತ್ತರ ಜಿಗಿತ, ಭಾರದ ಗುಂಡು ಎಸೆತದಲ್ಲಿ ತೃತೀಯ, ದೀಕ್ಷಿತ್ ಹೈ ಜಂಪ್ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಇಂದು ರಾಷ್ಟ್ರೀಯ ಲೋಕ ಅದಾಲತ್

ಮಡಿಕೇರಿ, ಸೆ.12– ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ಆದೇಶದನ್ವಯ, ಕೊಡಗು ಜಿಲ್ಲೆಯಲ್ಲಿ ಸೆ.13 ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ.

ಸಾರ್ವಜನಿಕ, ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನ ಮಾಡಿಕೊಳ್ಳುವ ಮೂಲಕ, ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. ರಾಜಿ ಸಂಧಾನದಲ್ಲಿ ಪಾಲ್ಗೊಂಡು, ತಮಗಾಗುವ ಆರ್ಥಿಕ ಹೊರೆ ಹಾಗೂ ಸಮಯ ಪೋಲಾಗುವುದನ್ನು ತಪ್ಪಿಸಲು, ಮೊದಲಿನ ಬಾಂಧವ್ಯ ಉಳಿಸಿಕೊಳ್ಳಲು ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಕೊಡಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಶುಭ ಅವರು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ರಾಜಿ ಸಂಧಾನಕ್ಕಾಗಿ ಸಿವಿಲ್ ದಾವೆಗಳು, ಭೂಸ್ವಾಧೀನ, ಬ್ಯಾಂಕ್ ವಸೂಲಾತಿ, ದರಖಾಸ್ತು ಅರ್ಜಿಗಳು, ಕಾರ್ಮಿಕ ಪ್ರಕರಣಗಳು, ಎಂಎಂಆರ್‌ಡಿ, ಚೆಕ್ ಬೌನ್ಸ್, ಮೋಟಾರು ವಾಹನ ಅಪಘಾತ, ವೈವಾಹಿಕ ಪ್ರಕರಣಗಳು ಹಾಗೂ ರಾಜಿ ಆಗಲು ಅರ್ಹವಿರುವ ರಾಜಿಯಾಗುವಂತಹ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ, ಹಲವಾರು ಪ್ರಕರಣಗಳನ್ನು ರಾಜಿಗಾಗಿ ಗುರುತಿಸಲಾಗಿದೆ.

ಮಡಿಕೇರಿ ದಸರಾ ಜನೋತ್ಸವಕ್ಕೆ 1.50 ಕೋಟಿ ರೂ. ಅನುದಾನ ಬಿಡುಗಡೆ

ಮಡಿಕೇರಿ ದಸರಾ ಸಮಿತಿಗೆ ಮುಖ್ಯಮಂತ್ರಿ ಭರವಸೆ



ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿದ ಮಡಿಕೇರಿ ದಸರಾ ಸಮಿತಿ.

ಮಡಿಕೇರಿ,ಸೆ.12– ಮಡಿಕೇರಿ ದಸರಾ ಜನೋತ್ಸವಕ್ಕೆ 1.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಮಡಿಕೇರಿ ದಸರಾ ಸಮಿತಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಅದ್ಧೂರಿ ದಸರಾ ಆಚರಣೆಗೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವಂತೆ ಕೋರಿತು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ಈಗಾಗಲೇ 1.50 ಕೋಟಿ ರೂ. ಬಿಡುಗಡೆಗೆ ಅನುಮೋದನೆ ನೀಡಲಾಗಿದೆ ಎಂದರು. ನಿಯೋಗದ ನೇತೃತ್ವ ವಹಿಸಿದ್ದ ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಕಳೆದ ವರ್ಷದಂತೆ ಈ ಬಾರಿಯೂ 1.50 ಕೋಟಿ ರೂ. ಬಿಡುಗಡೆ ಮಾಡುವ ಭರವಸೆ ದೊರೆತಿದೆ. ಹೆಚ್ಚಿನ ಅನುದಾನದ ನಿರೀಕ್ಷೆ ಇತ್ತಾದರೂ ಕಳೆದ ವರ್ಷದ ಮೊತ್ತವನ್ನೇ ನೀಡಲು ಸರಕಾರ ನಿರ್ಧರಿಸಿ ಆಗಿತ್ತು ಎಂದರು.

ದಸರಾ ಸಮಿತಿಯ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷರಾದ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಖಜಾಂಚಿ ಸಬಿತ, ಉಪಾಧ್ಯಕ್ಷ ಬಿ.ಪಿ.ಡಿಶು, ಕಾರ್ಯದರ್ಶಿ ಕಾನೆಹಿತ್ಲು ಮೊಣ್ಣಪ್ಪ, ಸಹ ಕಾರ್ಯದರ್ಶಿ ಮುದ್ದುರಾಜು, ದಶ ಮಂಟಪ ಸಮಿತಿ ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್, ವೇದಿಕೆ ಸಮಿತಿ ಅಧ್ಯಕ್ಷ ಚಂದ್ರಶೇಖರ್.ಆರ್.ಪಿ ಮತ್ತಿತರರು ನಿಯೋಗದಲ್ಲಿದ್ದರು.

ಜಾತಿ ಜನಗಣತಿ ವೇಳೆ 'ಕೊಡವ' ಎಂದು ನಮೂದಿಸಲು ಸಿಎನ್‌ಸಿ ಮನವಿ



ಎನ್.ಯು.ನಾಚಪ್ಪ

ಮಡಿಕೇರಿ,ಸೆ.12– ರಾಜ್ಯ ಸರಕಾರದ ವತಿಯಿಂದ ನಡೆಯುವ ಜಾತಿ ಜನಗಣತಿ ಸಂದರ್ಭ ಕೊಡವರ ಸಮಗ್ರ ಸಬಲೀಕರಣಕ್ಕಾಗಿ ಜಾತಿ, ಭಾಷೆ, ಮಾತೃಭಾಷೆ ಮತ್ತು ಧರ್ಮದ ಕಾಲಂನಲ್ಲಿ ಕೊಡವರು 'ಕೊಡವ' ಎಂದು ನಮೂದಿಸುವಂತೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ರಾಜ್ಯ ಸರಕಾರವು ಹಿಂದುಳಿದ ವರ್ಗಗಳ ಆಯೋಗದ ಮೂಲಕ ಇದೇ ಸೆ.22ರಿಂದ ನಡೆಸುವ ಜಾತಿ ಜನಗಣತಿಯಲ್ಲಿ ಉತ್ತಮ ನಾಳೆಗಾಗಿ ಮತ್ತು ಕೊಡವರ ಸಮಗ್ರ ಸಬಲೀಕರಣಕ್ಕಾಗಿ ಕೊಡವ ಎಂದು ನವಮೂದಿಸುವುದು ಅತ್ಯವಶ್ಯಕವಾಗಿದೆ. ಕೊಡವರ ಹಕ್ಕುಗಳು ಖಾತ್ರಿಯಾಗಬೇಕಾದಲ್ಲಿ ಕೊಡವ ಎಂದು ದಾಖಲಿಸಿ ಎಂದು ಕರೆ ನೀಡಿದ್ದಾರೆ.

ಇದು ರಾಜಕೀಯ, ಆರ್ಥಿಕ ಸಬಲೀಕರಣ ಮತ್ತು ಸಾಂಸ್ಕೃತಿಕ, ಜಾನಪದ ಉನ್ನತಿಯನ್ನು ಸಾಧಿಸಲು ನಿರ್ಣಾಯಕವಾಗಿದೆ. ಅಲ್ಲದೆ ನಮ್ಮ ಸೂಕ್ಷ್ಮಾತಿ ಸೂಕ್ಷ್ಮ ಡೇಟಾವನ್ನು ದೃಢೀಕರಿಸುತ್ತದೆ. ಈ ಪ್ರಕ್ರಿಯೆಯು ಕೇಂದ್ರ ಸರಕಾರದ 2026–27ರ ರಾಷ್ಟ್ರೀಯ ಜನಸಂಖ್ಯಾ ಗಣತಿಯ ಪ್ರಸ್ತಾವಿತ ಅನುಷ್ಠಾನಕ್ಕೆ ಮತ್ತು ಅಖಿಲ ಭಾರತ ಜಾತಿ ಗಣತಿಗೆ ಆಧಾರವಾಗಿ ಸಾಂವಿಧಾನಿಕ ಖಾತರಿಯನ್ನು ಪಡೆಯಲು ಮತ್ತಷ್ಟು ಆಧಾರವಾಗಲಿದೆ ಎಂದು ಎನ್.ಯು.ನಾಚಪ್ಪ ಅಭಿಪ್ರಾಯಪಟ್ಟಿದ್ದಾರೆ.

ಸೆ.15 ರಂದು ಸೈಕಲ್ ಜಾಥಾ

ಮಡಿಕೇರಿ, ಸೆ.12– ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತದ ವತಿಯಿಂದ ಸೆ.15 ರಂದು ಬೆಳಗ್ಗೆ 7.30 ಗಂಟೆಗೆ ಸೈಕಲ್ ಜಾಥಾ ನಡೆಯಲಿದೆ. ನಂತರ ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

14 ವರ್ಷದೊಳಗಿನ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗೆ ದೇವಾವೃತ್ ಆಯ್ಕೆ



ಮಡಿಕೇರಿ,ಸೆ.12– ಕೊಡಗು ವಿದ್ಯಾಲಯದ 8ನೇ ತರಗತಿ ವಿದ್ಯಾರ್ಥಿ ದೇವಾವೃತ್ ಡಿ.ಬಿ. ಮಹಾರಾಷ್ಟ್ರದ ಸದ್ವಿ ಪ್ರೀತಿ ಸುಧಾಜಿ ಇಂಟರ್ ನ್ಯಾಷನಲ್ ಸ್ಕೂಲ್ ಮೆಹತಾದಲ್ಲಿ ನಡೆದ ಸಿಬಿಎಸ್‌ಸಿ ದಕ್ಷಿಣ ವಲಯ ಮಟ್ಟದ ಅಂಡರ್–14 ಕ್ರಿಕೆಟ್ ಆಯ್ಕೆ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟಕ್ಕೆ ಆಯ್ಕೆಯಾಗಿದ್ದಾನೆ.

ಒಟ್ಟು 450 ಆಟಗಾರರು ಪಾಲ್ಗೊಂಡ ಆಯ್ಕೆ ಪ್ರಕ್ರಿಯೆಯಲ್ಲಿ ಕೇವಲ 18 ಮಂದಿಯ ತಂಡದಲ್ಲಿ ಸ್ಥಾನ ಪಡೆದಿರುವ ದೇವಾವೃತ್ ದಕ್ಷಿಣ ವಲಯ ಮಟ್ಟದ ಕ್ರಿಕೆಟ್ ತಂಡದಲ್ಲಿ ಲೆಗ್ ಸ್ಪಿನ್ನರ್ ಆಗಿ ಆಡಲಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲರಾದ ಕೆ.ಎಸ್. ಸುಮಿತ್ರಾ ತಿಳಿಸಿದ್ದಾರೆ.

ಸೆ.15ರಿಂದ 20ರವರೆಗೆ ನೋಯಿಡಾದಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಸಿಬಿಎಸ್‌ಇ ಟಿ20 ಕ್ರಿಕೆಟ್ ಪಂದ್ಯಾಟದಲ್ಲಿ ದೇವಾವೃತ್ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ. ದೇವಾವೃತ್ ಅವರು ದಂಬೆಕೋಡಿ ಭೀಷ್ಮ ಮತ್ತು ಕವನ ದಂಪತಿ ಪುತ್ರನಾಗಿದ್ದಾನೆ.

ಸಮರ್ಥ, ಸ್ವಚ್ಛ ಸಮಾಜ ನಿರ್ಮಾಣಕ್ಕೆ ಮಕ್ಕಳ ಪಾತ್ರ ಅಗತ್ಯ



ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೊಡಗು ಜಿಲ್ಲಾ ಘಟಕದ ಪದಗ್ರಹಣ.

ವಿರಾಜಪೇಟೆ, ಸೆ.12– ಮಕ್ಕಳು ಸಮಾಜದ ಭವಿಷ್ಯದ ಆಸ್ತಿಯಾಗಿದ್ದು ಅವರನ್ನು ಸಮರ್ಥ ಮತ್ತು ಸ್ವಚ್ಛ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪಿಸುವಲ್ಲಿ ನಾವೆಲ್ಲರೂ ಕೈಜೋಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಮಂಡೆಪಂಡ ಸುಜಾ ಕುಶಾಲಪ್ಪ ಕರೆ ನೀಡಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೊಡಗು ಜಿಲ್ಲಾ ಘಟಕದ ಪದಗ್ರಹಣ ಕಾರ್ಯಕ್ರಮಕ್ಕೆ ವಿರಾಜಪೇಟೆ ಪ್ರಗತಿ ಶಾಲಾ ಆವರಣದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಲಾಯಿತು. ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಇಂದು ಕೊಡಗು ಜಿಲ್ಲೆಯಲ್ಲೂ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದ್ದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿ ರಾಜ್ಯ ವ್ಯಾಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ, ಅತ್ಯಂತ ಪ್ರಾಮಾಣಿಕ ಮತ್ತು ನೈಜತೆಗೆ ಹತ್ತಿರವಾಗಿ ಮಕ್ಕಳ ಸೇವೆಯನ್ನು ಮಾಡುತ್ತಿರುವ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅತ್ಯಂತ ಉನ್ನತ ಸ್ಥಾನಕ್ಕೆ ಬೆಳೆಯಬೇಕು ಮತ್ತು ಸರ್ಕಾರ ಇಂತಹ ಸಂಘಟನೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಿ, ಮಕ್ಕಳ ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆಗಳನ್ನು ಪ್ರೇರೇಪಿಸಬೇಕು. ಅರಣ್ಯ ಇಲಾಖೆ ಸಹಯೋಗದಲ್ಲಿ ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳನ್ನು ರೂಪಿಸಲು ಯೋಜನೆ ಹಾಕಿಕೊಳ್ಳುವುದಾಗಿ ಹೇಳಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸಿದ್ದೇಶ್ ಮಾತನಾಡಿ, ಸಂಘಟನೆ ಬೆಳೆದು ಬಂದ ಹಾದಿ ಮತ್ತು ಕೊಡಗಿನಲ್ಲಿ ಈ ಸಂಘಟನೆ ಅಸ್ತಿತ್ವದ ಅವಶ್ಯಕತೆ ಬಗ್ಗೆ ಕೂಲಂಕುಶವಾಗಿ ವಿವರಿಸಿದರು. ಪ್ರಗತಿ ಶಾಲೆಯ ಮುಖ್ಯ ಶಿಕ್ಷಕಿ ಪ್ರತಿಮಾ ಸಂಘಟನೆಗೆ ಶುಭ ಹಾರೈಸಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಷ್ಟ್ರೀಯ ಪರಿಸರ ಪ್ರಶಸ್ತಿ ವಿಜೇತರೂ, ಆಗಿರುವ ಸಿ.ಎನ್.ಅಶೋಕ್ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಮಿತಿ ವತಿಯಿಂದ ಜಿಲ್ಲಾಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ ಅವರಿಗೆ, ಅಧಿಕೃತ ಆದೇಶ ಪತ್ರದೊಂದಿಗೆ ಸನ್ಮಾನಿಸಿ ಅಧಿಕಾರ ನೀಡಲಾಯಿತು. ನಂತರ ಜಿಲ್ಲಾ ಸಮಿತಿ ಮತ್ತು 5 ತಾಲೂಕು ಸಮಿತಿಗಳ ಪದಗ್ರಹಣ ನಡೆಯಿತು.

ವೇದಿಕೆಯಲ್ಲಿ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಸಂಘಟನಾ ಕಾರ್ಯದರ್ಶಿ ಸಚಿನ್, ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ, ಕರಿನೆರವಂಡ ಡ್ಯಾನಿ ಕುಶಾಲಪ್ಪ, ವಿರಾಜಪೇಟೆ ತಾಲೂಕು ಅಧ್ಯಕ್ಷೆ ಮುಕ್ಕಾಟಿರ ಕಾವೇರಮ್ಮ, ಮಡಿಕೇರಿ ತಾಲೂಕು ಅಧ್ಯಕ್ಷ ಪಾಲೆರ ಮಂದಣ್ಣ, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ವಿನೋದ್ ಮೂಡಗದ್ದೆ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಅಪ್ಪಾಡ ಸುದೀಶ್ ಕುಶಾಲಪ್ಪ, ಕುಶಾಲನಗರ ತಾಲೂಕು ಅಧ್ಯಕ್ಷೆ ಚೈತನ್ಯ ಸಿ ಮೋಹನ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಮಕ್ಕಳು ಹಾಡು, ನೃತ್ಯ, ಕವನ ವಾಚನ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ರಂಜಿಸಿದರು. ಕುಶಾಲನಗರದ ತಿಷ್ಯ ಪೊನ್ನೆಟ್ಟಿ ಪ್ರಾರ್ಥಿಸಿ, ಮಡಿಕೇರಿ ತಾಲೂಕಿನ ಪ್ರಧಾನ ಕಾರ್ಯದರ್ಶಿ ಹರ್ಷಿತ ಶೆಟ್ಟಿ ಸ್ವಾಗತಿಸಿದರೆ, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ವಿನೋದ್ ಮೂಡಗದ್ದೆ ವಂದಿಸಿ, ಕೌಶಲ್ಯ ಹರೀಶ್ ನಿರೂಪಿಸಿದರು.

ಸೆ.16, 17ರಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಸೆ.16 ಮತ್ತು 17 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಯಡೂರು, ತಲ್ತಾರೆ ಶೆಟ್ಟಳ್ಳಿ, ಕೂತಿ, ಹೊಸಬೀಡು, ಕಲ್ಕಂದೂರು, ಬಸವನಕಟ್ಟೆ, ನಗರಳ್ಳಿ, ಹೆಮ್ಮನಗದ್ದೆ, ಶಾಂತಳ್ಳಿ, ಬೆಟ್ಟದಳ್ಳಿ, ಬೀದಳ್ಳಿ, ಕುಂದಳ್ಳಿ, ಹೆಗ್ಗಡೆ ಮನೆ, ಹರಗ, ಕುಂಬಾರಗಡಿಗೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬೆಟ್ಟದಲ್ಲಿ ಜಾತ್ರೆಗೆ ಸಿದ್ಧತೆ ಕೈಗೊಳ್ಳಿ

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ



ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧಿಕಾರಿಗಳ ಸಭೆ ನಡೆಸಿದರು.

ಹನೂರು, ಸೆ.12– ಶ್ರೀ ಕ್ಷೇತ್ರ ಮಲೆಮಹದೇಶ್ವರಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ ಹಾಗೂ ಕಾರ್ತಿಕ ಸೋಮವಾರ ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳಿಗೆ ಸಕಲ ಸೌಲಭ್ಯ ಕಲ್ಪಿಸಲು ಎಲ್ಲ ಸಿದ್ದತೆ ಕೈಗೊಳ್ಳುವಂತೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾದ ಕೆ. ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರಿನ ವಿಕಾಸಸೌಧದ ಮೂರನೇ ಮಹಡಿಯ ಸಭಾಂಗಣದಲ್ಲಿಂದು 'ಮಹದೇಶ್ವರ ಬೆಟ್ಟದ ಮಹಾಲಯ ಅಮಾವಾಸ್ಯೆ ದಸರಾ, ದೀಪಾವಳಿ ಹಾಗೂ ಕಾರ್ತಿಕ ಸೋಮವಾರ ಜಾತ್ರಾ ಕಾರ್ಯಕ್ರಮಗಳ ಪೂರ್ವಭಾವಿ ಸಿದ್ದತೆಗಳನ್ನು ಪರಿಶೀಲಿಸಿ ಅವರು ಮಾತನಾಡಿದರು.

ಜಾತ್ರೆಗಾಗಿ ಶ್ರೀ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರಲಿದ್ದಾರೆ. ಹೀಗಾಗಿ ಮೂಲ ಸೌಕರ್ಯಗಳು ಸಮರ್ಪಕವಾಗಿ ಇರಬೇಕು. ಶುದ್ದ ಕುಡಿಯುವ ನೀರು ಪೂರೈಸಬೇಕು, ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಆವರಣದಲ್ಲಿ ಶುದ್ದ ಕುಡಿಯುವ ನೀರಿನ ಘಟಕಗಳಲ್ಲಿಯೂ ನೀರಿನ ವ್ಯವಸ್ಥೆ ಇರಬೇಕು. ಭಕ್ತಾಧಿಗಳಿಗೆ ನೆರಳಿನ ವ್ಯವಸ್ಥೆಗಾಗಿ ಶಾಮಿಯಾನ ಅಳವಡಿಸಬೇಕು. ಸರತಿ ಸಾಲಿನಲ್ಲಿ ದರ್ಶನಕ್ಕಾಗಿ ಬರುವ ಭಕ್ತರಿಗೂ ದೇವಸ್ಥಾನದ ಸುತ್ತಲೂ ಶಾಮಿಯಾನ ಅಳವಡಿಸಿ ನೆರಳಿನ ವ್ಯವಸ್ಥೆಯನ್ನ ಮಾಡಬೇಕು ಎಂದರು. ವಿಶೇಷ ದಾಸೋಹದಲ್ಲಿ ಭಕ್ತರಿಗೆ ಅನುಕೂಲವಾಗುವ ಸೌಕರ್ಯಗಳನ್ನು ಕಲ್ಪಿಸಬೇಕು. ಭಕ್ತಾದಿಗಳು ಹೆಚ್ಚು ಸಂಖ್ಯೆಯಲ್ಲಿ ಕ್ಷೇತ್ರಕ್ಕೆ ಆಗಮಿಸುವುದರಿಂದ ಅಗತ್ಯಕ್ಕೆ ತಕ್ಕಂತೆ ಶೌಚಾಲಯಗಳು, ಸ್ನಾನಗೃಹಗಳು ಇರಬೇಕು. ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸಿ ಶುಚಿತ್ವ ಕಾಪಾಡಿಕೊಳ್ಳಲು ಕ್ರಮವಹಿಸಬೇಕು. ವಿಶೇಷ ಲಗೇಜ್ ಕೌಂಟರ್, ಮಾಹಿತಿ ಕೇಂದ್ರ ನಿರ್ವಹಣೆ ಮಾಡಬೇಕು ಎಂದರು.

ಜಾತ್ರೆ ಸಂದರ್ಭಗಳಲ್ಲಿ ನಿರಂತರವಾಗಿ ದಾಸೋಹ ಪ್ರಸಾದ ವಿತರಣೆ ಇರಬೇಕು. ಪರ (ಅಡುಗೆ) ಮಾಡುವ ಭಕ್ತಾಧಿಗಳಿಗೆ ಬೇಕಿರುವ ಸೌಲಭ್ಯಗಳನ್ನು ಕಲ್ಪಿಸಬೇಕು. ಭಕ್ತಾಧಿಗಳ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇರಬೇಕು. ಸುಗಮ ಸಂಚಾರಕ್ಕಾಗಿ ಸೂಚನಾ ಫಲಕಗಳು, ಬ್ಯಾರಿಕೇಡ್ ವ್ಯವಸ್ಥೆಯನ್ನು ಮಾಡಬೇಕು ಎಂದು ಸಚಿವರು ತಿಳಿಸಿದರು.

ಜಾತ್ರಾ ಸಂದರ್ಭದಲ್ಲಿ ಎಲ್ಲಾ ಕಡೆಯಿಂದ ಆಗಮಿಸುವ ಭಕ್ತಾಧಿಗಳಿಗೆ ಕೆಎಸ್‌ಆರ್.ಟಿ.ಸಿ ವತಿಯಿಂದ ಅಗತ್ಯಕ್ಕೆ ತಕ್ಕಂತೆ ಬಸ್ಸುಗಳನ್ನು ನಿಯೋಜನೆ ಮಾಡಬೇಕು. ಜಾತ್ರಾ ಅವಧಿಯಲ್ಲಿ ಅಗ್ನಿಶಾಮಕ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಅಗತ್ಯ ಸೇವೆಯನ್ನು ನೀಡಬೇಕು. ಜಾತ್ರಾ ಸಂದರ್ಭದಲ್ಲಿ ಸ್ವಚ್ಚತೆ, ಆರೋಗ್ಯ ಸೇವೆಗಾಗಿ ವಿಶೇಷವಾಗಿ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ನಿರ್ದೇಶನ ನೀಡಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟದ ರಸ್ತೆಯ ಮಾರ್ಗ ಮಧ್ಯದಲ್ಲಿ ರಸ್ತೆಗಳನ್ನು ತುರ್ತಾಗಿ ದುರಸ್ತಿ ಮಾಡಬೇಕಿದೆ. ಈ ಕೆಲಸವನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಿ ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ತಿಳಿಸಿದರು.

ಜಾತ್ರಾ ಸಂದರ್ಭದಲ್ಲಿ ಕೈಗೊಳ್ಳಬೇಕಿರುವ ಸಿದ್ದತೆಗಳ ಬಗ್ಗೆ ಸಾಲೂರು ಶ್ರೀಗಳಾದ ಶಾಂತಮಲ್ಲಿಕಾರ್ಜುನಸ್ವಾಮಿ ಅವರು ಸಲಹೆ ಸೂಚನೆಗಳನ್ನು ನೀಡಿದರು.

ಮದ್ದೂರಿನಲ್ಲಿ ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ಖಂಡಿಸಿ ಪಂಜಿನ ಮೆರವಣಿಗೆ



ಬಿಜೆಪಿ ನಗರ ಮಂಡಲ ವತಿಯಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ, ಸೆ.12– ಮದ್ದೂರಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದ ಕಲ್ಲು ತೂರಾಟ ಮತ್ತು ಹಿಂದುಗಳ ಮೇಲೆ ದೌರ್ಜನ್ಯ ಖಂಡಿಸಿ ಬಿಜೆಪಿ ನಗರ ಮಂಡಲ ವತಿಯಿಂದ ನಗರದಲ್ಲಿ ಪಂಜಿನ ಮೆರವಣಿಗೆ ನಡೆಯಿತು.

ನಗರದ ಮಾರಿಗುಡಿ ಆವರಣದಿಂದ ಆರಂಭವಾದ ಪಂಜಿನ ಮೆರವಣಿಗೆ ವೀರಭದ್ರಸ್ವಾಮಿ ದೇವಾಲಯ, ಹಳೆ ಮಾರುಕಟ್ಟೆ, ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡೀವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತದಲ್ಲಿ ಕೆಲಹೊತ್ತು ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಂಜಿನ ಮೆರವಣಿಗೆ ನೇತೃತ್ವ ವಹಿಸಿದ್ದ ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವರಾಜ್ ಮಾತನಾಡಿ, ಮದ್ದೂರಿನಲ್ಲಿ ಗಣೇಶಮೂರ್ತಿ ವಿಸರ್ಜನೆ ವೇಳೆ ನಡೆದ ಕಲ್ಲು ತೂರಾಟ ಒಂದು ಪೂರ್ವ ನಿಯೋಜಿತ ಸಂಚು ಆಗಿದೆ. ಈ ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತಿದ್ದ ಹಿಂದೂಗಳ ಮೇಲೆ ಕಾಂಗ್ರೆಸ್ ಸರ್ಕಾರ ಪೊಲೀಸ್ ಇಲಾಖೆ ಬಳಕೆ ಮಾಡಿಕೊಂಡು ಹಿಂದೂಗಳ ಮೇಲೆ ದೌರ್ಜನ್ಯ ನಡೆಸಿ, ಅಮಾಯಕ ಹಿಂದೂಗಳ ಮೇಲೆ ಮೊಕದ್ದಮೆ ಹೂಡಿದೆ. ಇದನ್ನು ನೋಡಿದರೆ ನಾವು ಭಾರತದಲ್ಲಿದ್ದೇವೆ ಅಥವಾ ತಾಲಿಬಾನಿನಲ್ಲಿ ಇದ್ದಂತಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ್ ಅವರು ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಮುಂದಿನ ದಿನಗಳಲ್ಲಿ ಹಿಂದೂಗಳು ಕಾಂಗ್ರೆಸ್ ಸರ್ಕಾರಕ್ಕೆ ತಕ್ಕಪಾಠ ಕಲಿಸಲಿದ್ದಾರೆ. ಕೆ.ಜೆ.ಹಳ್ಳಿ, ಡಿ.ಜೆ.ಹಳ್ಳಿ ಪ್ರಕರಣ ನೋಡಿದ್ದೀರಿ. ನಮಗೆ ರಕ್ಷಣೆ ಕೊಡುವಂತೆ ಪೋಲಿಸರ ಮೇಲೆ ದಾಳಿ ನಡೆಸಿದ್ದಾರೆ. ಅಂದ ಮೇಲೆ ಮುಂದಿನ ದಿನಗಳಲ್ಲಿ ನಿಮ್ಮ ಮನೆಗೇ ಬಂದು ದಾಳಿ ಮಾಡುವುದರಲ್ಲಿ ಯಾವುದೇ ಅನುಮಾನ ಬೇಡ, ಗಣೇಶ ವಿಸರ್ಜನೆ ವೇಳೆಯಲ್ಲಿ ಕಲ್ಲು ತೂರಾಟ ಮಾಡಿರುವ ಆರೋಪಿಗಳನ್ನು ಬಂಧಿಸಿ ದೇಶದಿಂದ ಗಡಿಪಾರು ಮಾಡಿ ಶಿಕ್ಷೆಗೆ ಗುರಿಪಡಿಸಬೇಕು. ಯಾವುದೇ ಕಾರಣಕ್ಕೂ ಸರ್ಕಾರ ಪ್ರಕರಣವನ್ನು ವಾಪಸ್ ತೆಗೆದುಕೊಳ್ಳಬಾರದು. ಹಿಂದೂ ಮೇಲೆ ಹೂಡಿರುವ ಪ್ರಕರಣವನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಪಂಜಿನ ಮೆರವಣಿಗೆಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಸದಸ್ಯರಾದ ಮನೋಜ್ ಪಟೇಲ್, ಚಂದ್ರಶೇಖರ್, ನಗರಸಭಾ ಮಾಜಿ ಸದಸ್ಯರಾದ ಶಿವಣ್ಣ, ಸುಂದರ್ ರಾಜ್, ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಮುಖಂಡ ಚಂದ್ರಶೇಖರ್, ಬಿಜೆಪಿ ಮಾಜಿ ಅಧ್ಯಕ್ಷ ನಾರಾಯಣಪ್ರಸಾದ್, ಮಾಜಿ ಚೂಡಾಧ್ಯಕ್ಷ ಬಾಲಸುಬ್ರಹ್ಮಣ್ಯ, ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯ ಪ್ರಧಾನ ಕಾರ್ಯದರ್ಶಿ ಆನಂದಭಗೀರಥ, ಉಪಾಧ್ಯಕ್ಷ ಮಹೇಶ್, ನಗರಮಂಡಲ ಪ್ರಧಾನ ಕಾರ್ಯದರ್ಶಿ ಕೂಸಣ್ಣ ಮಹೇಶ್, ರಾಜ್, ಚಂದು, ವೀರೇಂದ್ರ, ಸೋಮವಾರಪೇಟೆ ಗುರುಪ್ರಸಾದ್, ನಾಣಿ, ಸಂತು, ರಘು, ನಾಗೇಶ್, ರಾಜೇಶ್, ರಾಮಸಮುದ್ರ ಶಿವಣ್ಣ, ವೇಣುಗೋಪಾಲ್, ಪುರಿವಯ್ಯ, ಕೃಷ್ಣಪ್ಪ ರಮೇಶ್, ಭಾಸ್ಕರ್, ಕುಮಾರ್, ರಾಜೇಂದ್ರ, ಪುನೀತ್, ಪೋಟೋ ಕೃಷ್ಣ, ಮಣಿ ಇತರರಿದ್ದರು.

ತಾಲೂಕು ಮಟ್ಟದ ಕ್ರೀಡಾಕೂಟ: ಕಬ್ಬಡಿ ವಿಭಾಗದಲ್ಲಿ ದೀನಬಂಧು ಶಾಲೆ ಪ್ರಥಮ



ಚಾಮರಾಜನಗರ : 14 ವರ್ಷದ ಮೇಲ್ಪಟ್ಟು 17 ವರ್ಷದೊಳಗಿನ ತಾಲೂಕು ಮಟ್ಟದ ಕ್ರೀಡಾಕೂಟದ ಕಬಡ್ಡಿ ವಿಭಾಗದಲ್ಲಿ ನಗರದ ದೀನಬಂಧು ಶಾಲೆ ವಿದ್ಯಾರ್ಥಿಗಳ ತಂಡ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದೆ.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ನಗರದ ದೀನಬಂಧು ಶಾಲೆಯ ಬಾಲಕರ ತಂಡ ಭಾಗವಹಿಸಿ ಪ್ರಥಮ ಸ್ಥಾನಪಡೆದು ತಾಲೂಕಿಗೆ, ಶಾಲೆಗೆ ಕೀರ್ತಿ ತಂದಿದೆ.

ಬಹುಮಾನ ವಿತರಣೆ : ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರಾದ ಬಸವರಾಜು ತಂಡಕ್ಕೆ ಬಹುಮಾನ, ಪ್ರಮಾಣಪತ್ರ ವಿತರಿಸಿದರು. ದೈಹಿಕ ಶಿಕ್ಷಕರಾದ ಗುರುಸಿದ್ದಯ್ಯ, ಮಹೇಶ್ ಕುಮಾರ್, ಭಾಗ್ಯಲಕ್ಷ್ಮೀ, ಮಹದೇವ ಸ್ವಾಮಿ, ತಗಡೂರಯ್ಯ, ಕಬಡ್ಡಿ ತಂಡದ ನಾಯಕ ಸಂದೇಶ್ ರಾಜ್, ಕಿಶೋರ್ ಕುಮಾರ್, ಗೋವಿಂದರಾಜು, ಶಿವ ಕುಮಾರ್, ಮದನ್, ಸಾಗರ್, ಮಂಜು ಇತರರು ಹಾಜರಿದ್ದರು.

ಗೂಳಿಪುರ ಗ್ರಾಪಂ ಅಧ್ಯಕ್ಷರಾಗಿ ರೇಖಾ ಆಯ್ಕೆ

ಯಳಂದೂರು, ಸೆ.12– ಸಮೀಪದ ಗೂಳಿಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ರೇಖಾ ಅಶ್ವಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷೆ ನೀಲಮ್ಮ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು. ರೇಖಾ ಅಶ್ವಥ್ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾದ ಚಾಮರಾಜನಗರ ಕೃಷಿ ಇಲಾಖೆಯ ಜಯರಾಮಯ್ಯ ಅವಿರೋಧ ಆಯ್ಕೆಯನ್ನು ಘೋಷಿಸಿದರು. ನೂತನ ಅಧ್ಯಕ್ಷೆ ರೇಖಾ ಅಶ್ವಥ್ ಮಾತನಾಡಿ, ಸರ್ವ ಸದಸ್ಯರ ಸಹಕಾರವನ್ನು ಪಡೆದು, ಗೂಳಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಆದ್ಯತೆ ನೀಡಲಾಗುವುದು. ನರೇಗಾ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಪ್ರತಿ ಮನೆಗೂ ತಲುಪಿಸಲಾಗುವುದು. ಜಲಜೀವನ್ ಮಿಷನ್ ಯೋಜನೆಯಡಿ ಮನೆ, ಮನೆಗೂ ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು. ಪ್ರತಿಯೊಂದು ಮನೆಗೂ ಇ–ಸ್ವತ್ತು ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ. ಪಂ. ಉಪಾಧ್ಯಕ್ಷರಾದ ಮಹೇಶ್ವರಿ, ಸದಸ್ಯರಾದ ನೀಲಮ್ಮ, ನಿಂಗರಾಜಮ್ಮ, ಚಿನ್ನಮ್ಮ, ಶಿವಮ್ಮ, ರವಿ ಶಂಕರಮೂರ್ತಿ, ಬೂದಂಬಳ್ಳಿ ಶಂಕರ್, ಬೂದಂಬಳ್ಳಿ ಗಿರೀಶ್, ಚಿನ್ನಸ್ವಾಮಿ, ನಾಗಣ್ಣ, ಶಿವಕುಮಾರ್, ಜಡೆಸ್ವಾಮಿ, ಪಿಡಿಓ ವಸಂತ, ಗ್ರಾಪಂ ಸಿಬ್ಬಂದಿ ಹಾಜರಿದ್ದರು.



ಗೂಳಿಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷೆ ರೇಖಾ ಅಶ್ವಥ್ ಅವರನ್ನು ಅಭಿನಂದಿಸಲಾಯಿತು.

ಡಾ.ವಿಷ್ಣುಗೆ ಕರ್ನಾಟಕ ರತ್ನ: ಸಂಭ್ರಮಾಚರಣೆ



ಡಾ. ವಿಷ್ಣುವರ್ಧನ್ ಅಭಿಮಾನಿಗಳಿಂದ ಸಂಭ್ರಮಾಚರಣೆ.

ಕೊಳ್ಳೇಗಾಲ, ಸೆ.12– ರಾಜ್ಯ ಸರ್ಕಾರ ನಟ ಡಾ.ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಅಭಿಮಾನಿಗಳು ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ಪಟ್ಟಣದ ಬಸ್ ನಿಲ್ದಾಣ ರಸ್ತೆಯಲ್ಲಿರುವ ವಿಷ್ಣು ಫ್ರೂಟ್ಸ್ ಮುಂಭಾಗದಲ್ಲಿ ವಿಷ್ಣು ಫ್ರೂಟ್ಸ್ ಸ್ಟಾಲ್ ಮಾಲೀಕ ಸಿದ್ದರಾಜು ನೇತೃತ್ವದಲ್ಲಿ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ತಿನ್ನಿಸುವ ಮೂಲಕ ಸಂಭ್ರಮಿಸಿದರು.

ಈ ವೇಳೆ ವಿಷ್ಣು ಅಭಿಮಾನಿ ಸಿದ್ಧರಾಜು ಮಾತನಾಡಿ, ನಮ್ಮ ನೆಚ್ಚಿನ ನಾಯಕರಾದ ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಿರುವುದು ನಮ್ಮೆಲ್ಲರಿಗೂ ಸಂತಸ ತಂದಿದೆ. ಈ ಪ್ರಶಸ್ತಿ ನೀಡಿದ್ದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಅಭಿಮಾನಿಗಳಾದ ಸಿಂಹ ಮಹದೇವ, ಸಿದ್ದರಾಜು, ರಾಮು, ಶ್ರೀಧರ್, ರಾಜಶೇಖರ್, ಚಂದ್ರು, ರಮೇಶ್, ಸಣ್ಣಯ್ಯ, ಸೋಮಶೇಖರ್, ಅಜಯ್, ನವೀನ್ ಕುಮಾರ್, ಮಂಜುನಾಥ, ರಾಜಣ್ಣ, ಅಪ್ಪಿ, ರಾಘು, ಟೈಲರ್ ಜಯಶಂಕರ್ ಇದ್ದರು.

ಮೈಸೂರು ಮಿತ್ರ

ಶನಿವಾರ 13 ಸೆಪ್ಟೆಂಬರ್ 2025

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

HOUSE FOR SALE
10400, "SHREE HARI NILAYA", VIJAYANAGARA 4TH STAGE, (2ND PHASE) GROUND FLOOR, SINGLE B.H.K, 1ST FLOOR DUPLEX, PRICE 1 CRORE(NEGO)
Contact
9739153525, 9741170263

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9740893554

ಬೇಕಾಗಿದ್ದಾರೆ
ನ್ಯೂ ಶಾರದ ರೆಸಾರ್ಟ್ ಕೆ.ಆರ್.ಎಸ್ ಮೇನ್ ರೋಡ್
1).ಹೆಡ್ ಕುಕ್ ಆಲ್ ರೌಂಡರ್
2) ತಂದೂರಿ ಕುಕ್
3) ರೂಂ ಬಾಯ್
4) ಕ್ಯಾಪ್ಟನ್ ಸ್ಟೀವರ್ಡ್
ಸಂಪರ್ಕಿಸಿ:
9880185785

ತಕ್ಷಣ ಬೇಕಾಗಿದ್ದಾರೆ
ವಾಹನ ಹೊಗೆ ಪರೀಕ್ಷೆ ಕೇಂದ್ರದಲ್ಲಿ ಕೆಲಸ ಮಾಡಲು
ಶ್ರೀ ಸರ್ವೀಸ್ ಸ್ಟೇಷನ್ ಸರಸ್ವತಿಪುರಂ ಮೈಸೂರು
PART TIME / FULL TIME
Mob: 9591424139

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಕಂಪನಿಯೊಂದಕ್ಕೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ + ESI+ PF ಇರುತ್ತದೆ.
7204710103, 9986501873

HOUSE FOR SALE
30x40 duplex
New house
Dattagalli 3rd Stage
Mob: 9740088990 9886691475

ನಿವೇಶನಗಳು ಮಾರಾಟಕ್ಕಿವೆ
ಪ್ರಕೃತಿ ಬಡಾವಣೆ, ಟಿ. ನರಸೀಪುರ ಮೇನ್ ರೋಡ್
1) 20x30 W/F 37 L
2) 20x30 E/F 38 L
3) 53x60 N/F ಸೈಟ್ ಜಯಪುರ ಹತ್ತಿರ H. D. ಕೋಟೆ ಮೇನ್ ರೋಡ್. 50L
9591810822 / 9008570086

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ತಕ್ಷಣ ಬೇಕಾಗಿದ್ದಾರೆ
* Senior PHARMA AIDE for Medical Shop (Exp : 10-20 years)
* Sales Person for Super Market
Location : Bogadi
Mob : 9880587586

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಕೆ.ಜಿ.ಕೊಪ್ಪಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಡ್ರೈವರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 21000+ W/o (8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819, 9620667819

ಮನೆ ಬಾಡಿಗೆಗೆ ಬೇಕಾಗಿದೆ
ವಿಜಯನಗರ 3 ಮತ್ತು 4ನೇ ಹಂತ, ದಟ್ಟಗಳ್ಳಿ, ಕನಕದಾಸನಗರ, ಸೋಮನಾಥನಗರ, ಕೆರ್ಗಳ್ಳಿ, ಬೋಗಾದಿ ಬಡಾವಣೆ ಸುತ್ತಮುತ್ತ 1 ಅಥವಾ 2 ರೂಂಗಳುಳ್ಳ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಬೇಕಾಗಿದೆ.
ಸಂಪರ್ಕಿಸಿ: 95910 52208

ತುರ್ತಾಗಿ ಕೆಲಸಕ್ಕೆ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಡಿಟಿಪಿ ಟೈಪಿಂಗ್ ಅನುಭವವುಳ್ಳ ಮಹಿಳೆಯರು ಕಂಪ್ಯೂಟರ್ ಸಂಪೂರ್ಣ ಜ್ಞಾನವುಳ್ಳವರು.
ನೋಟರಿ ಕಛೇರಿ ಕೆಲಸಕ್ಕೆ ಬೇಕಾಗಿರುತ್ತಾರೆ.
9901369901, 0821-3501513

ಶ್ರೀ ಮಣಿಕಂಠ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7022059340

WANTED
Immediately for Tiles Company. Sales Girls / Sales Women, Near Bannimantap, Timings 10 AM to 7 PM, Salary -16000/-, Language : Kannada Mandatory, Hindi and English manageable. Education : PUC or More
Contact
9845802314

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ನಿವೃತ್ತ ಕೇಂದ್ರ/ರಾಜ್ಯ/ಬ್ಯಾಂಕ್ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ SSLC & Above any Degree ಸೆಮಿನಾರ್ ನಡೆಯುವ ಸ್ಥಳ : ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ, ಮೈಸೂರು-01, ದಿನಾಂಕ : 16-09-2025 ಸಮಯ 11 ಗಂಟೆಗೆ, ಲಘು ಉಪಹಾರ ವ್ಯವಸ್ಥೆ ಇದೆ.
Call: 9449068132

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಸ್ಥಳ : SHARADA PLATINA, 1st Floor, Opp, Cloth Tower, Time 11 Am, Date : 16-9-2025, (Fallowed by Lunch)
Ph. 9448376423, 9886883858

SITES / HOUSES FOR SALE
50x80 Corner, 30x50, 30x40 Parashuramnagar, Bannur Road, 20x30, 3 BHK Duplex, 30x40, 3 BHK, Lalithadri Nagar.
WANTED : Commercial site or Building for immediate purchase.
Contact : 94489 38989 / 78920 35789

REQUIRED
HOSTEL WARDENS
MALE Graduate with relevant experience in a Residential PU College.
Remuneration as per industry norms. Accommodation with PF & ESI facilities.
Contact:
9108481695

MYSURU RETINA CARE STAFF REQUIRED
(FRESHER OR EXPERIENCE)
1. O.T. TECHNICIAN
2. SUPERVISOR,
3. MANEGER,
4. HOUSE KEEPING
7338369364, 0821-2543244
No. 22A, Sri Guru Krupam, I Floor, Nivedita Nagar, Mysore-22

SHILPA MAKEUP STUDIO & ACADEMY
Special Offer : ~~40,000~~/- 25,000/-
1. HD Makeup, 2. Waterproof Makeup 3. Glassy Makeup, 4. Self Makeup 5. 15+ Hairstyles, 6. Saree Dropping 7. Mehendi, 8. Nailart, 9. Portfolio Shoot 10. Social Media Handling
9148979194
Ramakrishna Nagar, E&F Block, Dakshineshwara Road, Near Ruby Bakery, No-#1489, Mysore.

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ 9800 (24 CT)
Mob: 9108146123

SITE FOR SALE
40X60 at Saraswathipuram, Dattagalli, Kuvempunagar, Vivekananda Nagar, R.K. Nagar, 50x80 at Dattagalli, Somanathanagar, 30x40 at Ramakrishna Nagar & Rajeevnagar
Call
7353430309

ಸೈಟು ಮಾರಾಟಕ್ಕಿದೆ
ನಂಜನಗೂಡು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮೂಡದಿಂದ ಅನುಮೋದನೆಗೊಂಡ 30x40 ಅಳತೆಯ ಸೈಟುಗಳು ಮಾರಾಟಕ್ಕಿದೆ. ಸಂಪರ್ಕಿಸಿ
9148436347

DTCP & RERA APPROVED SITE
30x40 WEST FACING @ JUST RS. 20 LAKHS.
BANK LOAN AVAILABLE.
Near JSS International University & adjacent to pheriperal ring road.
Mob: 7795609173

HOUSE FOR SALE
30X40
Ground and First Floor
MUDA Property E-Katha
Vidyaranyapuram
8861868916

ಮಾರಾಟಕ್ಕಿದೆ
ಪ್ರಾವಿಷನ್/ಕಿರಾಣಿ ಅಂಗಡಿ ಮತ್ತು ಅಂಗಡಿಗೆ ಉತ್ತಮವಾದ ವುಡನ್ ಮತ್ತು ಕಬ್ಬಿಣದ ರ್‍ಯಾಕ್‌ಗಳು, ಕ್ಯಾಶ್ ಟೇಬಲ್ ಮಾರಾಟಕ್ಕಿದೆ.
ಜಯನಗರ 2ನೇ ಮುಖ್ಯ ರಸ್ತೆ, ಮೈಸೂರು
Mob: 7022135656

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ - ಬೆಳಿಗ್ಗೆ ಮತ್ತು ರಾತ್ರಿ ಪಾಳಯಕ್ಕೆ
2) ಹೌಸ್‌ಕೀಪಿಂಗ್ - ಹುಡುಗರು/ಮಹಿಳೆಯರು
9739166772, 9731663856

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ.ಗೆ 1-9-2025ರಿಂದ 15-09-2025 ರವರೆಗೆ ಮಾಡಿಕೊಡಲಾಗುತ್ತದೆ.
Mob : 9008711654

SITE FOR SALE
2250 Sqft(N/E)
Srirampura BEML Layout, 2nd Stage
Near to BEML arch.
9108084349

ಸಂಪು ಮತ್ತು ಟ್ಯಾಂಕ್
ಸೋಲಾರ್ ಸರ್ವೀಸ್
Mob: 8197383645

ನಮ್ಮಲ್ಲಿ ಬಾದಾಮಿ, ಗೋಡಂಬಿ ಪಿಸ್ತಾ, ದ್ರಾಕ್ಷಿ, ಅಂಜೂರ, ಖರ್ಜೂರ ಡ್ರೈಫ್ರೂಟ್ಸ್ ಗಿಫ್ಟ್ ಬಾಕ್ಸ್‌ಗಳು ದೊರೆಯುತ್ತದೆ. ಸಂಪರ್ಕಿಸಿ
ರಾಜ್‌ಗುರು ಡ್ರೈಫ್ರೂಟ್ಸ್
ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
9845460211, 7022293342

Villa Plots FOR SALE
30x40,30x50,40x60
28 Acres Project,MUDA App
1 Kms from Adithya Circle,
Dattagalli, Kergalli,Mysore
8660105902

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ / ಜೆಎಸ್‌ಎಸ್ 2ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ಪ್ರಮಾಣ ಪತ್ರ
ಸಂತೋಷ್ ಶರವಣಸಿಂಧೆ ಆದ ನಾನು ಮಂಗಳೂರು ಮಾಳ ಗ್ರಾಮ, ಹನಗೋಡು ಹೋಬಳಿ, ಹುಣಸೂರು ತಾಲೂಕು, ಮೈಸೂರು ಜಿಲ್ಲೆಯಲ್ಲಿ ವಾಸವಿದ್ದು, ನನ್ನ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್ ಮತ್ತಿತರ ದಾಖಲೆಗಳಲ್ಲಿ ನನ್ನ ಹೆಸರು 'ಸಂತೋಷ್ ಶರವಣ ಸಿಂಧೆ' ಎಂದಿದ್ದು, ನನ್ನ ಪಾಸ್‌ಪೋರ್ಟ್ ನಂ. P4696709ನಲ್ಲಿ 'ಸಂತೋಷ್' ಎಂದು ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿಯವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ/- ಸಂತೋಷ್ ಶರವಣಸಿಂಧೆ

ಸಾರ್ವಜನಿಕ ತಿಳುವಳಿಕೆ
ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಸೋಸಲೆ ಹೋಬಳಿ, ಹೊರಳಹಳ್ಳಿ, ಚಿಟಗಯ್ಯನ ಕೊಪ್ಪಲು ಗ್ರಾಮದಲ್ಲಿ ವಾಸವಾಗಿರುವ ರಾಮು.ಸಿ.ಎಂ ಆದ ನಾನು, ನನ್ನ ಹೆಸರು ರಾಮಕೃಷ್ಣಎಂ ಬಿನ್ ಮಹದೇವು ಎಂಬುದಾಗಿದ್ದು, ಇನ್ನು ಮುಂದೆ ನನ್ನ ಹೆಸರನ್ನು ರಾಮು.ಸಿ.ಎಂ ಎಂದು ನೋಟರಿ ಪಬ್ಲಿಕ್‌ರವರ ಮುಂದೆ ಪ್ರಮಾಣ ಪತ್ರದ ಮೂಲಕ ಬದಲಾವಣೆ ಮಾಡಿಕೊಂಡಿರುತ್ತೇನೆ. ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳನ್ನು ರಾಮು. ಸಿ.ಎಂ ಎಂಬ ಹೆಸರಿನಿಂದ ಮುಂದುವರೆಸುತ್ತೇನೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇನೆ.
ಸ್ಥಳ : ಮೈಸೂರು
ದಿನಾಂಕ : 12-9-2025
ಸಹಿ/- ರಾಮು. ಸಿ.ಎಂ

SBIT TRAVELS
Group Tour
THAILAND 05 DAYS
20 TH OCTOBER
9343524127
(Saraswathipuram, Mysuru)

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ಗಜಾನನ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

MUDA Approved SITES FOR SALE
Ananda Sagara, Nityananda Sagara, Kuberananda Sagara
30x40, 60x40
All facing available.
1st STAGE.
JK, 8951144240

HOUSE FOR LEASE 1 BHK
Furshished Room for Rent, Vijayanagar 4th Stage, Near SVEI School
Gayathri
9066828045, 6362865625

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಯಸ್ಸಿನ ವಯೋಮಿತಿ 40ರ ಒಳಗೆ
9663991888, 9663427888

SOUTH WEST CORNER SITE FOR SALE
Close to TVS Factory
Very close to upcoming peripheral Ring Road
Immediate construction
Can get High Rentals.
Mob: 8088063609

ಬೇಕಾಗಿದ್ದಾರೆ
ಲೋಡರ್, ಅನ್ ಲೋಡರ್‌ಗಳು, ಡ್ರೈವರ್‌ಗಳು ಹಾಗೂ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
9844163411, 9845700612

ವಧು ಬೇಕಾಗಿದೆ
ಒಕ್ಕಲಿಗ ಗೌಡ ಜನಾಂಗದ ಹುಡುಗನಿಗೆ ಅದೇ ಜಾತಿಯ ವಧು ಬೇಕಾಗಿದೆ.
Mob: 7406464491

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ರಿಂಗ್ ರೋಡ್‌ನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 15,000.
Mob: 9902754149

REQUIRED
Lady Warden for Girls Hostel
Freshers can also apply.
Salary: 12,000. Age: 21 to 35 years.
Place: Mysore
Mob: 9964242430
Need to stay in hostel. Food and accommodation is free.

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಸ್ಥಳ : Maurya Residency Sri Harsha Road, Mysore -01, Time 11 Am, Date : 16-9-2025, Fallowed by Lunch
Ph. 9448376423, 9886883858

2 BHK HOUSE FOR RENT OR LEASE
Mobile
9448053926
9449833926
Sharadha devi Nagar, Mysore

SITE FOR SALE
40x60 W/F
Phase-1
Nithyananda Sagara
Mob: 8050821108

ಬೇಕಾಗಿದ್ದಾರೆ
1) ಸರ್ವೀಸ್ ಹುಡುಗರು (Freshers)
2) ಪಾರ್ಟ್ ಟೈಮ್ ಕೆಲಸಕ್ಕೆ ಹುಡುಗರು
3) ಕ್ಯಾಷಿಯರ್ (ಹುಡುಗರು)
4) ಪ್ಯಾಕಿಂಗ್ ಹುಡುಗರು
5) ನೈಟ್ ಡ್ಯೂಟಿ ಹುಡುಗರು
ಸ್ಥಳ: ಮೈಸೂರು
Mob: 9964242430

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
6361740552, 9449408551

ಮಹಿಳೆಯರು ಬೇಕಾಗಿದ್ದಾರೆ
ಅನುಭವವುಳ್ಳ ಟೆಲಿಕಾಲರ್ಸ್ ಬೇಕಾಗಿದ್ದಾರೆ.
Mob: 6364548607

ಹೋಟೆಲ್ ಕೆಲಸಕ್ಕೆ
ಹುಡುಗರು / ಹೆಂಗಸರು ಬೇಕಾಗಿದ್ದಾರೆ.
ದೋಸೆ, ಟೀ, ಪಾರ್ಸಲ್ ಕೌಂಟರ್.
9606238790, 9986998606

NEW COMMERCIAL PROPERTY FOR SALE
Size 26x30, 2 Shops, Ground Floor 2 BHK, 1st Floor, 1 Big Hall, Attach Bathroom with Glass II nd Floor. Near Panchamukhi Ganapathy Temple, Sayyaji Rao Road, Mysore.
7975750042
Price : 2.20 Cr. Slightly Negotiable

ನವನಿಧಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ
#291/1, ಕಾಂಟೂರ್ ರಸ್ತೆ 3ನೇ ಹಂತ, ಗೋಕುಲಂ, ತ್ರಿನೇತ್ರ ಸರ್ಕಲ್, ಮೈಸೂರು-570002, ನೋಂದಣಿ ಸಂಖ್ಯೆ : 3306:2014-15
ಆಹ್ವಾನ ಪತ್ರಿಕೆ
ಸರ್ವಸದಸ್ಯರ ಸಭೆಯು ದಿನಾಂಕ 14-09-2025ರ ಭಾನುವಾರ ಬೆಳಗ್ಗೆ 11 ಗಂಟೆಗೆ ನಂದಗೋಕುಲದಲ್ಲಿರುವ ತ್ರಿನೇತ್ರ ಸರ್ಕಲ್ ಹತ್ತಿರ, ಎಂಸಿಸಿ ಸಮುದಾಯ ಭವನದಲ್ಲಿ ನಡೆಯಲಿದೆ. ಸಭೆಯ ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೆ ಆಹ್ವಾನವೆಂದು ಪರಿಗಣಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಕರು

SITE FOR SALE
60x70 N/E Corner
4107 sq.ft. area, S/E Corner, 2200 sq.ft. area.
Suvarna Nagar, Bogadi Road.
Mob: 8050821108

FOR SALE
1. 20x30 Old Houses @ Kuvempunagar, RK Nagar
2. 20x30 New Duplex House Near Utthanahalli, MUDA Approved
3. 30x40, 40x60@ Srinagar, Shardha Layout, JP Nagar
4.30x40 Sites Near RT Nagar BSNL Layout @ Just 22 Lakhs
Newly Constructing Apartments.
Commercial Properties Available.
PRAKRUTHI PROPERTIES
95386 90359, 90359 90359

WANTED
Looking for a Male Candidate for a Part time job in a Cafe. Timings - 5:00 pm to 9:30 pm Job type: Cafe work, need to prepare Coffee, Tea and Cleaning. Location: Vijayanagar 2nd stage, near surya bakery, Mysore and need Immediate Joining.
Contact
9900190319

ಬೇಕಾಗಿದ್ದಾರೆ
FMCG DISTIBUTORSಗೆ ಬಿಲ್ಲಿಂಗ್ ಮಾಡಲು Computer Knowledge ಇರುವ ಹುಡುಗ ಬೇಕಾಗಿದ್ದಾರೆ ಮತ್ತು Goods 3 Wheeler Auto Driver ಬೇಕಾಗಿದ್ದಾರೆ.
Sanjay
9686891690

ವಿಶ್ವದೇವ ವೈದಿಕ ಭವನ
ಎಲ್ಲಾತರಹದ ವೈದಿಕ ಕಾರ್ಯಗಳನ್ನು ತಿಂಗಳ ಮಾಸಿಕ ವರ್ಷಾಬ್ದೀಕ ಹಾಗೂ 9ನೇ ದಿನದಿಂದ 14ನೇ ದಿನದ ವೈಕುಂಠದವರೆಗು ಅವರ ಕರ್ಮಗಳನ್ನು ಒಂದೇ ಜಾಗದಲ್ಲಿ ಹಾಗೂ ನೂರು ಜನ ಒಟ್ಟಿಗೆ ಊಟ ಮಾಡಬಹುದು ಈ ಕೂಡಲೇ ಸಂಪರ್ಕಿಸಿ
8088799540, 8861998817

S.K. CONSTRUCTION
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ - Plan-3.D. Elivation ಮತ್ತು Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ
Ph: 9620528490

REQUIRED
Any MBBS General Medicines/ Physician Timing : 4 to 8 Pm Evening, Sri. Lakshmi Devi Clinic NM.17, Near Surya Bakery, Kumbar Koppal, Mysore-16
Mobile
8722893251, 7760972780

ಅರ್ಚಕರು ಬೇಕಾಗಿದ್ದಾರೆ
ಶ್ರೀ ಅಮ್ಮನವರ ದೇವಸ್ಥಾನಕ್ಕೆ ತ್ರಿಮತಸ್ಥ ಬ್ರಾಹ್ಮಣ ಅರ್ಚಕರು ಬೇಕಾಗಿದ್ದಾರೆ.
Mob : 9739297626

ನಮ್ಮಲ್ಲಿ ಮನೆ ಊಟ ದೊರೆಯುತ್ತದೆ. ಎಲ್ಲಾ ತರಹದ ಅಂಗಡಿ-ಮಳಿಗೆಗಳಿಗೆ ಪ್ರತಿದಿನವು - ಮಧ್ಯಾಹ್ನದ ಊಟ 20 ರಿಂದ 50 ಜನರಿಗೆ ಮಾಡಿ ಕೊಡಲಾಗುತ್ತದೆ. (No Functions)
7795320056, 8431812476

'ಇಂಡಸ್ಟ್ರಿಯಲ್ ನಿವೇಶನ ಮಾರಾಟಕ್ಕಿದೆ
11,000 Sqft (ಹನ್ನೊಂದು ಸಾವಿರ)
SKF ಮತ್ತು ಆಟೋಲೀವ್ ಫ್ಯಾಕ್ಟರಿ ಹಿಂಭಾಗ ಕೆಡಕೊಳ ಇಂಡಸ್ಟ್ರಿಯಲ್ ಏರಿಯಾ, ನಂಜನಗೂಡು.
Price : 2000₹ Per Sqft
8971858181, 7019032133

ಮನೆ ಕಟ್ಟಿಸುವವರ ಗಮನಕ್ಕೆ
ಚದುರಡಿಗೆ 1900/- ರಂತೆ ಉತ್ತಮ ಗುಣಮಟ್ಟವುಳ್ಳ ಸಾಮಗ್ರಿಗಳನ್ನು ಬಳಸಿ ನಮ್ಮ ಕನಸಿನ ಮನೆಯನ್ನು ಕಟ್ಟಿಕೊಡಲಾಗುವುದು.
ಸಂಪರ್ಕಿಸಿ : S.R. Constructions
ದಿವಾನ್ಸ್ ರಸ್ತೆ, ಮೈಸೂರು-570024
6364281689

CAR FOR SALE
HYUNDAI ALCAZAR Platinum, Disel Year -2023, Driven-17,000km 7 seater, Manual Colour-White Single-Hand driven. Price-20,00,000(Neg)
Contact
9900023456

ಜಮೀನು ಹಾಗೂ ಮಳಿಗೆ ಬಾಡಿಗೆಗಿದೆ
ಬೋಗಾದಿ ರಿಂಗ್ ರಸ್ತೆಯಿಂದ 3 ಕಿ.ಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ ಅಲಿನೇಶನ್ 1 1/4 ಎಕರೆ ಜಮೀನು ವಿವಿಧ ಉದ್ದೇಶಗಳಿಗೆ ಬಾಡಿಗೆಗಿದೆ ಹಾಗೂ 120 ಚ.ಅ. ಪೂರ್ವ ದಿಕ್ಕಿನ ಮಳಿಗೆ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ
8197609290

SITE FOR SALE
30X50 EAST FACE
ಬೆಳವಾಡಿ (Near V.N. 4th Stage)
Price : 42 Lakh (Negotiable)
8105506211

TEACHERS TRAINING
Montessori, Nursery and Kindergarten, SSLC PASS/ PUC/Any Degree Can Apply
100% JOB ASSURANCE
LITTLE STAR ABC MONTESSORI
Vijayanagar, Mysore-570017.
Call : 8884970282

ಮಾರಾಟಕ್ಕಿದೆ
ಮೈಸೂರು ಮಹಾನಗರ ಪಾಲಿಕೆ, ಶ್ರೀರಾಂಪುರ 1ನೇ ಹಂತ, ವಾರ್ಡ್ ನಂ. 64, 11ನೇ ಅಡ್ಡ ರಸ್ತೆಯಲ್ಲಿ ಉತ್ತರ ದಿಕ್ಕಿಗಿರುವ 30X40 ಅಡಿಯಲ್ಲಿ 3 ಮನೆ ಹಾಗೂ ಒಂದು ರೂಮ್ ಇರುವ 3 ಅಂತಸ್ತಿನ ನಿವೇಶನ ಸಂಖ್ಯೆ 1617 ಮಾರಾಟಕ್ಕಿದೆ. ಗ್ರೌಂಡ್ ಫ್ಲೋರ್‌ರಲ್ಲಿ 2 ಬೆಡ್ ರೂಮ್ ಮನೆ, ಮೊದಲನೇ ಹಾಗೂ ಎರಡನೇ ಫ್ಲೋರ್‌ರಲ್ಲಿ 3 ಬೆಡ್ ರೂಮಿನ ಡ್ಯುಪ್ಲೆಕ್ಸ್ ಮನೆ, ಎರಡನೇ ಫ್ಲೋರ್‌ರಲ್ಲಿ 2 ಬೆಡ್ ರೂಮ್ ಮನೆ ಹಾಗೂ ಮೂರನೇ ಫ್ಲೋರ್‌ರಲ್ಲಿ 1 ರೂಮ್, ಆಸಕ್ತರು ಸಂಪರ್ಕಿಸಿ:
8971476711

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 50 ವರ್ಷದೊಳಗಿನ ಪುರುಷರು ಬೈಕ್ ಇರುವಂತವರು ಬೇಕಾಗಿದ್ದಾರೆ.
S.S.L.C, PUC ವಿದ್ಯಾರ್ಹತೆ ಇರಬೇಕು
ನಾಯ್ಡುನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಸಾತಗಳ್ಳಿ, ಸಿದ್ಧಾರ್ಥನಗರ, ರಾಜೀವ್‌ನಗರ, ಹಂಚ್ಯಾ ಹೆಬ್ಬಾಡಿ ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ
7259598615

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸಾಮಾಜಿಕ ಕ್ರಾಂತಿಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರು

ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಬಣ್ಣನೆ





ಕಾರ್ಯಕ್ರಮದಲ್ಲಿ ನಾರಾಯಣ ಗುರುಗಳ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಮತ್ತೊಂದು ಚಿತ್ರದಲ್ಲಿ ಬೆಳ್ಳಿರಥದಲ್ಲಿ ನಾರಾಯಣ ಗುರುಗಳ ಭಾವಚಿತ್ರದ ಮೆರವಣಿಗೆ ಕಾಣಬಹುದು.

ತಿ.ನರಸೀಪುರ, ಸೆ.12– ಸ್ವಾರ್ಥ ತುಂಬಿರುವ ಮನುಷ್ಯ, ಮನುಷ್ಯರನ್ನೇ ಪ್ರೀತಿಸದೆ, ಕಂದಾಚಾರ, ಮೌಢ್ಯತೆಯೇ ಹೆಚ್ಚಾಗಿದ್ದ ಕಾಲದಲ್ಲಿ ಅವುಗಳನ್ನು ಹೋಗಲಾಡಿಸುವ ಮೂಲಕ ಮನುಷ್ಯ-ಮನುಷ್ಯರನ್ನು ಪ್ರೀತಿಸುವಂತೆ ಮಾಡಿದ ಬ್ರಹ್ಮಶ್ರೀ ನಾರಾಯಣ ಗುರು ಸಾಮಾಜಿಕ ಕ್ರಾಂತಿಯ ಹರಿಕಾರ ಎಂದು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಬಣ್ಣಿಸಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಆರ್ಯ ಈಡಿಗರ ಸಂಘದ ಸಹಯೋಗದೊಂದಿಗೆ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದಿನ ಕಾಲದಲ್ಲಿ ಹಿಂದುಳಿದವರನ್ನು ಶೋಷಣೆ ಮಾಡಲಾಗುತ್ತಿತ್ತು. ಇಂತಹ ಸಂದರ್ಭ ಕಂದಾಚಾರ, ಮೂಢನಂಬಿಕೆಗಳನ್ನು ಹೋಗಲಾಡಿಸಿ ಸಾಮಾಜಿಕ ಕ್ರಾಂತಿ ಮಾಡಿದ ನಾರಾಯಣ ಗುರುಗಳ ಆದರ್ಶವನ್ನು ಎಲ್ಲರೂ ಪಾಲಿಸಬೇಕು ಎಂದರು.

ಮುಖ್ಯ ಭಾಷಣಕಾರ ಪಿಆರ್‌ಎಂ ಕಾಲೇಜಿನ ಪ್ರಾಂಶುಪಾಲ ವೀರಭದ್ರಸ್ವಾಮಿ ಮಾತನಾಡಿ, ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂಬ ಸಂದೇಶ ನೀಡಿ ಜಾತಿ ಮತ ಮೇಲು ಕೀಳುಗಳ ಭೇದ ಮರೆಸಿ, ದನಿಯಿಲ್ಲದವರ ದನಿಯಾಗಿ, ಶಕ್ತಿ ಇಲ್ಲದವರಿಗೆ ಆತ್ಮವಿಶ್ವಾಸದ ಶಕ್ತಿ ನೀಡಿ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಪ್ರೇರೇಪಿಸಿದ ಬ್ರಹ್ಮಶ್ರೀ ನಾರಾಯಣ ಗುರುಗಳ ಆದರ್ಶ ಜೀವನ ಎಲ್ಲರಿಗೂ ಮಾದರಿಯಾಗಿದೆ. ಗುರಿ ಮುಟ್ಟುವ ದಾರಿ ಸ್ಪಷ್ಟವಾಗಿದ್ದಾಗ ಸೀಮಾತೀತರಾಗಿ ಮಾನ್ಯತೆ ಪಡೆಯುತ್ತಾರೆ. ಗುರುಗಳು ಆ ಕಾಲಘಟ್ಟದಲ್ಲಿ ರಾತ್ರಿ ಶಾಲೆಗಳನ್ನು ನಡೆಸಿ, ಸಾವಿರಾರು ಜನರಿಗೆ ಉದ್ಯೋಗ ದೊರಕಿಸಿಕೊಟ್ಟ ಮಹಾನ್ಯರು. ಅವರು ವಿದ್ಯೆಯಿಂದ ಸ್ವತಂತ್ರರಾಗಿ, ಸಂಘಟನೆಯಿಂದ ಬಲಿಷ್ಠರಾಗಿ ಎಂದು ಕರೆ ನೀಡಿದರು. ದೇವಸ್ಥಾನಗಳಿಗೆ ಪ್ರವೇಶ ಇಲ್ಲದ ಕಾಲದಲ್ಲಿ ತಾವೇ ಸ್ವತಃ ಶಿವನನ್ನು ಕುದ್ರೋಳಿಯಲ್ಲಿ ಪ್ರತಿಷ್ಠಾಪಿಸಿ ಧಮನಿತ, ಶೋಷಿತ ವರ್ಗಗಳಿಗೆ ದೇಗುಲ ಪ್ರವೇಶ ದೊರಕಿಸಿಕೊಟ್ಟವರು ನಾರಾಯಣ ಗುರುಗಳು ಎಂದರು.

ವೀರಭದ್ರಸ್ವಾಮಿ ಮಾತನಾಡಿ, ಸಮಾಜದಲ್ಲಿ ಜಾತಿ, ಮತ ಭೇದಗಳು ಹೆಚ್ಚಾಗಿದ್ದ ಕಾಲದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುವೆಂಬ ಮಹಾನ್ ಸಮಾಜ ಸುಧಾರಕ ಉದಯಿಸಿ, ಸಮಾಜದ ತಾರತಮ್ಯಗಳನ್ನು ಕಡಿಮೆ ಮಾಡಲು ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಸಂಸ್ಕೃತ ಭಾಷೆಯಲ್ಲಿ ಅದ್ವಿತೀಯ ಪಂಡಿತರಾಗಿದ್ದ ನಾರಾಯಣ ಗುರುಗಳು, ಕೇರಳದಲ್ಲಿ ಅಸ್ಪೃಶ್ಯತೆಯ ವಿರುದ್ಧ ತಮ್ಮದೇ ಆದ ನಿಲುವಿನಲ್ಲಿ ಸಮಾಧಾನಕರ ಉಪಾಯಗಳನ್ನು ಕಂಡುಕೊಂಡರು ಎಂದರು.

ತಾಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ಕಿರಗಸೂರು ಶಂಕರ್ ಮಾತನಾಡಿದರು. ಈ ವೇಳೆ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಆರ್.ಚೈತನ್ಯ ಹಾಗೂ ಪದವಿ ವಿದ್ಯಾರ್ಥಿನಿ ಎಸ್.ರಮ್ಯ ಅವರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಆರ್ಯ ಈಡಿಗರ ಸಂಘದ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸಾದ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ರೈತ ಮುಖಂಡ ಕರಗಸೂರು ಪ್ರಸಾದ್ ನಾಯಕ್, ಮನ್ಸೂರ್ ಅಲಿ, ಪುಟ್ಟಯ್ಯ ಅಪ್ಪಣ್ಣ, ಮಾಜಿ ಅಧ್ಯಕ್ಷ ವಾಸುದೇವ್, ಅನಂತು, ಗುರು, ಪ್ರಶಾಂತ್ ಈಡಿಗ, ನಂಜುಂಡಯ್ಯ, ಪುರಸಭೆ ಸದಸ್ಯ ನಾಗರಾಜು, ಪುಟ್ಟಮಲ್ಲಯ್ಯ, ಮೂಗೂರು ಸಿದ್ದರಾಜು, ಮಹದೇವಮ್ಮ, ನಾಗಣ್ಣ, ಸುರೇಶ್, ರವಿಕುಮಾರ್, ಶೀಲಾ, ಶೋಭಾ, ತ್ರಿವೇಣಿ, ಲಲಿತ ಸೇರಿದಂತೆ ಮತ್ತಿತರರಿದ್ದರು.

ಆಕರ್ಷಕ ಮೆರವಣಿಗೆಗೆ ಚಾಲನೆ

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರದ ಮೆರವಣಿಗೆಗೆ ತಾಪಂ ಮಾಜಿ ಅಧ್ಯಕ್ಷ [illegible] ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಈಡಿಗ ಸಮಾಜದವರ ನಿವೇಶನಕ್ಕಾಗಿ ಮನವಿ ಸಲ್ಲಿಸಿರುವುದು ಪುರಸಭೆಯಲ್ಲಿ ಚರ್ಚೆಯಾಗಿದೆ. ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ನಿವೇಶನ ಕೊಡಿಸುವ ಭರವಸೆ ನೀಡಿದ ಅವರು ಸಣ್ಣ ಸಮುದಾಯ ದೊಡ್ಡ ಸಮುದಾಯವಾಗಿ ಬೆಳೆಯಲಿ. ನಾರಾಯಣ ಗುರುಗಳ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ಸಾಗಿ ಎಂದು.

ವಿವಿಧ ಹೂಗಳಿಂದ ಸಿಂಗರಿಸಿದ್ದ ಬೆಳ್ಳಿ ರಥದಲ್ಲಿ ನಾರಾಯಣ ಗುರುಗಳ ಭಾವಚಿತ್ರದ ಮೆರವಣಿಗೆ ಪಟ್ಟಣದ ವಿವಿಧ ರಸ್ತೆಗಳಲ್ಲಿ ಸಾಗಿತು. ಮೆರವಣಿಗೆಯಲ್ಲಿ ಆರ್ಯ ಈಡಿಗರ ಸಂಘದ ಸದಸ್ಯರು, ವಿವಿಧ ಸಂಘಟನೆಗಳ ಮುಖಂಡರು, ಮಹಿಳೆಯರು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ಮಗು ಸಾವು

ನಂಜನಗೂಡು, ಸೆ.12– ತಾಲೂಕಿನ ಬದನವಾಳು ಗ್ರಾಮದ ಬಳಿ ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಮಗು ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಸಾವನ್ನಪ್ಪಿದೆ.



ಹ'ಡ'ತ'ಲ' ಗ್ರಾಮದ ನಿವಾಸಿ ಮಹೇಶ್ ಹಾಗೂ ರಾಣಿ ದಂಪತಿ ಪುತ್ರಿ ಆದ್ಯ(5) ಸಾವನ್ನಪ್ಪಿದ ಮಗು. ಮಹೇಶ್ ದಂಪತಿ ತಮ್ಮ 5 ವರ್ಷದ ಪುತ್ರಿಯೊಂದಿಗೆ ಬುಧವಾರ ದೊಡ್ಡ ಕವಲಂದೆ ಕಡೆಯಿಂದ ನಂಜನಗೂಡು ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಬದನವಾಳು ಗ್ರಾಮದ ಬಳಿ ನಂಜನಗೂಡು ಕಡೆಯಿಂದ ಹೆಡತಲೆ ಗ್ರಾಮದ ಕಡೆಗೆ ತೆರಳುತ್ತಿದ್ದ ಮೂವರು ಯುವಕರಿದ್ದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಮಗು ಸೇರಿದಂತೆ ಎರಡೂ ಬೈಕ್‌ನಲ್ಲಿದ್ದ 6 ಮಂದಿ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಮಗುವಿನ ಸ್ಥಿತಿ ಚಿಂತಾಜನಕವಾಗಿತ್ತು. ಆದರೆ ಆಸ್ಪತ್ರೆ, ಚಿಕಿತ್ಸೆ ಬಿಲ್ 1.5 ಲಕ್ಷ ಕಟ್ಟುವಂತೆ ತಾಕೀತು ಮಾಡಿತು. ಹಾಗಾಗಿ ಬಿಲ್ ಪಾವತಿಸಲು ಪೋಷಕರು ಪರದಾಡುತ್ತಿದ್ದ ಹಿನ್ನೆಲೆಯಲ್ಲಿ ಮಗುವಿನ ದೊಡ್ಡಮ್ಮ ಮಂಗಳಮ್ಮ ಗ್ರಾಮಕ್ಕೆ ಆಗಮಿಸಿ ಗ್ರಾಮಸ್ಥರ ಕೆಲ ಮನೆಗಳ ಮುಂದೆ ಕಣ್ಣೀರಿಡುತ್ತಾ ಸೆರಗೊಡ್ಡಿ ಭಿಕ್ಷೆ ಬೇಡಿ ಸುಮಾರು 80 ಸಾವಿರ ರೂ. ಸಂಗ್ರಹಿಸಿದ್ದರು. ವಿಷಯ ತಿಳಿದ ಗ್ರಾಮಸ್ಥರು ಸಹ ಮಗುವಿನ ಚಿಕಿತ್ಸೆಗೆ ಉದಾರವಾಗಿ ಧನಸಹಾಯ ಮಾಡಿದ್ದರು. ಮಗುವಿನ ದೊಡ್ಡಮ್ಮ ಸೆರಗೊಡ್ಡಿ ಭಿಕ್ಷೆ ಬೇಡಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಅಲ್ಲದೇ ಶಾಸಕ ದರ್ಶನ್ ಸಹ ಆಸ್ಪತ್ರೆಯವರೊಂದಿಗೆ ಮಾತನಾಡಿ ಚಿಕಿತ್ಸೆಗೆ ನೆರವಾಗಿದ್ದರು. ಬಳಿಕ ಮಗುವನ್ನು ಖಾಸಗಿ ಆಸ್ಪತ್ರೆಯಿಂದ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮಗು ಆದ್ಯ ಸಾವನ್ನಪ್ಪಿದ್ದಾಳೆ. ವಿಷಯ ತಿಳಿದು ಆಸ್ಪತ್ರೆಗೆ ತೆರಳಿದ ಶಾಸಕ ದರ್ಶನ್ ಮಹೇಶ್, ರಾಣಿ ದಂಪತಿಗೆ ಸಾಂತ್ವನ ಹೇಳಿದರು.

ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ನೂತನ ನಿರ್ದೇಶಕರಾಗಿ ನೇಮಕ ಹಿನ್ನೆಲೆ
ಡಾ.ಬಿ.ದಿನೇಶ್‌ರಿಂದ ಸಿಎಂ ಸಿದ್ದರಾಮಯ್ಯರಿಗೆ ಅಭಿನಂದನೆ

ತಿ.ನರಸೀಪುರ, ಸೆ.12– ಬೆಂಗಳೂರಿನ ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನೂತನ ನಿರ್ದೇಶಕ ಡಾ.ಬಿ.ದಿನೇಶ್ ಅವರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ದಿನೇಶ್ ಅಭಿನಂದಿಸಿದರು.

ಮೈಸೂರಿನ ಜಯದೇವ ಆಸ್ಪತ್ರೆ ಹೃದ್ರೋಗ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ದಿನೇಶ್ ಅವರನ್ನು ಸರ್ಕಾರ ಬೆಂಗಳೂರಿನ ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನೂತನ ನಿರ್ದೇಶಕರಾಗಿ ನೇಮಕ ಮಾಡಿತ್ತು. ಈ ಹಿನ್ನೆಲೆಯಲ್ಲಿ ದಿನೇಶ್ ಅವರು ತಮ್ಮ ನೇಮಕಕ್ಕೆ ಕಾರಣರಾದ ಸಿಎಂ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿದರು. ಅಭಿನಂದನೆ ಸ್ವೀಕರಿಸಿ ಸಿಎಂ ಸಿದ್ದರಾಮಯ್ಯ ಮಾತನಾಡಿ, ಜಯದೇವ ಆಸ್ಪತ್ರೆ ಬಡವರ ಪಾಲಿನ ಸಂಜೀವಿನಿ ಇದ್ದಂತೆ. ತಾವು ಉತ್ತಮವಾಗಿ ಕಾರ್ಯ ನಿರ್ವಹಿಸಿ ಜನಸಾಮಾನ್ಯರಿಗೆ ಸಕಾಲಕ್ಕೆ ಚಿಕಿತ್ಸೆ ಸಿಗುವಂತೆ ಮಾಡಿ. ಜಯದೇವ ಆಸ್ಪತ್ರೆ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ತಿಳಿಸಿದ ಸಿಎಂ ಸರ್ಕಾರ ಸದಾ ನಿಮ್ಮ ಜೊತೆ ಇರಲಿದೆ ಎಂದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ದಿನೇಶ್. ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ದೊಡ್ಡಬಾಗಿಲು ಗ್ರಾಮದವನಾದ ನನಗೆ ಸರ್ಕಾರ ದೊಡ್ಡ ಜವಾಬ್ದಾರಿ ನೀಡಿದೆ. ಜೊತೆಗೆ ಹಿಂದುಳಿದ ವರ್ಗದವನಾದ ನನ್ನನ್ನು ಗುರ್ತಿಸಿ ದೊಡ್ಡ ಅವಕಾಶ ನೀಡಿದ್ದು, ಅದನ್ನು ಸದ್ಬಳಕೆ ಮಾಡಕೊಳ್ಳುವುದಾಗಿ ತಿಳಿಸಿದರು.

ಜಯದೇವ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಆಸ್ಪತ್ರೆಗೆ ಬಂದವರಿಗೆಲ್ಲಾ ಸೂಕ್ತ ಮತ್ತು ಸಕಾಲದಲ್ಲಿ ಚಿಕಿತ್ಸೆ ದೊರಕುವಂತೆ ಮಾಡುತ್ತೇನೆ. ಸರ್ಕಾರ ನನಗೆ ನೀಡಿರುವ ಅವಕಾಶ ಬಳಸಿಕೊಂಡು ಆಸ್ಪತ್ರೆ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಎಂ.ಮಲ್ಲಿಕಾರ್ಜುನ ಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ಎನ್.ಎಸ್. ಬಸವರಾಜು, ಎನ್.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಎಂ.ನಾಗೇಶ್, ಅಕ್ಕೂರು ಎಂ.ಗುರುಮೂರ್ತಿ, ರಮೇಶ್, ನಾಗರಾಜು, ಕೆಎಸ್‌ಆರ್‌ಟಿಸಿ ರಾಜಣ್ಣ ಇದ್ದರು.

ಇಂದು ಕಂದಾಯ ಅದಾಲತ್

ಹುಣಸೂರು, ಸೆ.12– ತಾಲೂಕು ಕಾನೂನು ಸೇವಾ ಸಮಿತಿಯಿಂದ ಸೆ.13 ರಂದು ಬೆಳಗ್ಗೆ 11 ಗಂಟೆಗೆ ನಗರದ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜಯಪುರದಲ್ಲಿ ಗಣೇಶ ವಿಸರ್ಜನೆ



ಮೈಸೂರು ತಾಲೂಕಿನ ಜಯಪುರದ ವಿನಾಯಕ ಬಡಾವಣೆ 3ನೇ ಕ್ರಾಸ್‌ನಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶನನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ವಿಸರ್ಜನೆ ಮಾಡಲಾಯಿತು. ಈ ವೇಳೆ ಯುವ ನಟ ಅವಿನಾಶ್, ಮುಖಂಡರಾದ ಪಾಲಾಕ್ಷ, ವಿನೋದ್, ಮಹದೇವು, ರಂಗಸ್ವಾಮಿ, ವಕೀಲರಾದ ಸಿದ್ದಪ್ಪಾಜಿ ಹಾಗೂ ಗಣೇಶೋತ್ಸವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಕಾಡಾನೆಗಳ ಹಾವಳಿ: ಮುಸುಕಿನ ಜೋಳ ನಾಶ



ಕಾಡಾನೆ ಹಿಂಡು ಜಮೀನಿನಲ್ಲಿ ಬೀಡು ಬಿಟ್ಟಿರುವುದು

ಮಲ್ಲುಂಡಿ, ಸೆ.12– ಕಾಡಾನೆಗಳ ಹಾವಳಿಗೆ ಮುಸುಕಿನ ಜೋಳದ ಫಸಲು ನಾಶವಾಗಿರುವ ಘಟನೆ ನಂಜನಗೂಡು ತಾಲೂಕಿನ ನೆಲ್ಲಿತಾಳಪುರ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ಮಹದೇವಯ್ಯ ಅವರಿಗೆ ಸೇರಿದ ಮುಸುಕಿನ ಜೋಳದ ಫಸಲು ನಾಶವಾಗಿದೆ. ಇವರು ತಮ್ಮ 4 ಎಕರೆ ಜಮೀನಿನಲ್ಲಿ ಮುಸುಕಿನ ಜೋಳ ಬೆಳೆದಿದ್ದರು. ಆದರೆ ಗುರುವಾರ ರಾತ್ರಿ ಕಾಡಿನಿಂದ ಬಂದ ಕಾಡಾನೆಗಳ ಹಿಂಡು ಮಹದೇವಯ್ಯನವರ ಜಮೀನಿನಲ್ಲಿ ಬೀಡು ಬಿಟ್ಟು ಮುಸುಕಿನ ಜೋಳ ತಿಂದು ಹಾಕಿ ಫಸಲನ್ನು ನಾಶಗೊಳಿಸಿವೆ.

ಶುಕ್ರವಾರ ಬೆಳಗ್ಗೆ ಕಾಡಾನೆಗಳನ್ನು ಕಂಡ ಗ್ರಾಮಸ್ಥರು ಅರಣ್ಯಾಧಿಕಾರಿಗಳಿಗೆ ವಿಷಯ ಮುಟ್ಟಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿ ಗ್ರಾಮಸ್ಥರೊಡಗೂಡಿ ಸಂಜೆ ವೇಳೆಗೆ ಕಾಡಾನೆಗಳನ್ನು ಚಿಕ್ಕದೇವಮ್ಮನ ಬೆಟ್ಟದ ಕಾಡಿಗೆ ಅಟ್ಟಿದರು.

ರೈತ ಮಹದೇವಯ್ಯ ಮಾತನಾಡಿ, ಸಾಲ ಸೋಲ ಮಾಡಿ ಕಷ್ಟಪಟ್ಟು ಬೆಳೆದ ಫಸಲು ಕಾಡಾನೆಗಳ ಪಾಲಾಗುತ್ತಿವೆ. ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಕಾಡಾನೆಗಳ ಹಾವಳಿಯಿಂದ ರೈತರು ತಮ್ಮ ಜಮೀನುಗಳಿಗೆ ತೆರಳಿ ಕೆಲಸ ಮಾಡಲು ಭಯಪಡುತ್ತಿದ್ದಾರೆ. ಹೀಗಾಗಿ ಅರಣ್ಯಾಧಿಕಾರಿಗಳು ಕಾಡಾನೆ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಅಲ್ಲದೇ ಮುಸುಕಿನ ಜೋಳ ಫಸಲು ಕಳೆದುಕೊಂಡಿರುವ ನಮಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಆಗ್ರಹಿಸಿದರು.

ಕೀಟನಾಶಕ ಬಳಸದೆ ಉತ್ತಮ ಬೆಳೆ ಬೆಳೆಯಬಹುದು

ಕೃಷಿ ವಿಜ್ಞಾನ ಕೇಂದ್ರದ ಬೀಜ ಸಂಸ್ಕರಣಾ ಸಂಶೋಧನಾ ತಜ್ಞೆ ದಿವ್ಯಾ

ಹುಣಸೂರು, ಸೆ.12– ಬೀಜ ಸಂಸ್ಕರಣೆಯಿಂದ ಬೆಳೆಗೆ ರೋಗ ಬರುವುದಿಲ್ಲ ಮತ್ತು ಕೀಟನಾಶಕ ಬಳಸದೆ ಉತ್ತಮ ಬೆಳೆ ಬೆಳೆದು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಆದಾಯ ಗಳಿಸಬಹುದು ಎಂದು ಕೃಷಿ ವಿಜ್ಞಾನ ಕೇಂದ್ರದ ಬೀಜ ಸಂಸ್ಕರಣಾ ಸಂಶೋಧನಾ ತಜ್ಞೆ ದಿವ್ಯಾ ತಿಳಿಸಿದರು. ತಾಲೂಕಿನ ಕರ್ಣಕುಪ್ಪೆ ಗ್ರಾಪಂನಲ್ಲಿ ಐಟಿಸಿಎಂಎಸ್ಕೆ ಮತ್ತು ಔಟ್‌ರಿಚ್ ಸಂಸ್ಥೆ ಸಹಯೋಗದೊಂದಿಗೆ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಸುತ್ತೂರು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹುಣಸೂರು ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಾತ್ಯಕ್ಷಿಕೆ ಮೂಲಕ ಕೀಟನಾಶಕಗಳನ್ನು ಬಳಸದೆ ಸಾವಯವ ಬೇಸಾಯ ಪದ್ಧತಿ ಅಳವಡಿಸಿಕೊಂಡು ಹೆಚ್ಚು ಇಳುವರಿ ಬರುವ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಅನುವು ಮಾಡಿಕೊಡಲು ಐಟಿಸಿಎಂಎಸ್ಕೆ ಮತ್ತು ಔಟ್‌ರಿಚ್ ಸಂಸ್ಥೆ ಮುಂದೆ ಬಂದಿದೆ. ರೈತರು ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಕೃಷಿ ಅಧಿಕಾರಿ ಜಯಕುಮಾರ್ ಮಾತನಾಡಿ, ರೈತರು ಬೀಜೋಪಚಾರ ಪದ್ಧತಿಯಲ್ಲಿ ಭತ್ತ, ರಾಗಿ, ಜೋಳ, ಅಲಸಂದೆ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿನ ಸವಕಳಿ ತಡೆಗಟ್ಟುವುದರ ಜೊತೆಗೆ ಫಲವತ್ತಾದ ಮಣ್ಣನ್ನು ರಕ್ಷಿಸಬಹುದು ಹಾಗೂ ಸಾಮಾಜಿಕ ಮತ್ತು ಜೈವಿಕ ಅರಣ್ಯ ಬೆಳೆಗಳನ್ನು ಕೂಡ ಬೆಳೆಯಬಹುದೆಂದರು.

ಸಹಾಯಕ ತೋಟಗಾರಿಕಾ ಅಧಿಕಾರಿ ರವಿ ಮಾತನಾಡಿ, ತೋಟಗಾರಿಕೆ ಇಲಾಖೆಯಲ್ಲಿ ಲಭ್ಯವಿರುವ ಹನಿ ನೀರಾವರಿ ಮತ್ತು ತೋಟಗಾರಿಕಾ ಬೆಳೆಗಳನ್ನು ಬಾಧಿಸುವ ರೋಗಗಳ ಬಗ್ಗೆ ವಿವರಿಸಿ, ಅದಕ್ಕೆ ಸೂಕ್ತ ಪರಿಹಾರಗಳನ್ನು ಸೂಚಿಸಿದರು. ಗ್ರಾಪಂ ಅಧ್ಯಕ್ಷ ಪಾಪಣ್ಣ, ಔಟ್‌ರಿಚ್ ಸಂಸ್ಥೆ ಯೋಜನಾ ಸಮನ್ವಯಾಧಿಕಾರಿ ನಂಜುಂಡಸ್ವಾಮಿ ಮಾತನಾಡಿದರು. ಪಿಡಿಓ ಪ್ರದೀಪ್, ರೈತ ರಾಘವೇಂದ್ರ, ಪ್ರಗತಿಪರ ರೈತ ಕೆ.ಎಂ.ರಾಜು, ರೈತ ಕ್ಷೇತ್ರ ಪಾಠಶಾಲೆಯ ಸದಸ್ಯರು, ಸ್ವ-ಸಹಾಯ ಸಂಘದ ಸದಸ್ಯರು ಮತ್ತು ಕೃಷಿ ಸಖಿಯರು, ಕರ್ಣಕುಪ್ಪೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ನೂರಕ್ಕೂ ಹೆಚ್ಚು ರೈತರು ಮತ್ತು ಔಟ್‌ರಿಚ್ ಸಂಸ್ಥೆ ಸಿಬ್ಬಂದಿಗಳಾದ ಪ್ರಕಾಶ್, ರಂಗಸ್ವಾಮಿ, ಸಾಗರ್, ಪ್ರಮೋದ್, ದಿಲೀಪ್, ಕಾರ್ತಿಕ್, ಸತ್ಯ ಉಪಸ್ಥಿತರಿದ್ದರು.

ಮನೆ ಹಿಂಭಾಗ ಗಾಂಜಾ ಬೆಳೆದಿದ್ದ ಇಬ್ಬರ ಬಂಧನ

ಸರಗೂರು, ಸೆ.12– ತಾಲೂಕಿನ ಕಂದಲಿಕೆ(ತೆಕ್ಕಲು) ಗ್ರಾಮದಲ್ಲಿ ಮನೆ ಹಿಂಭಾಗ ಗಾಂಜಾ ಗಿಡಗಳನ್ನು ಬೆಳೆದಿದ್ದ ಇಬ್ಬರು ಆರೋಪಿಗಳನ್ನು ಅಬಕಾರಿ ಪೊಲೀಸು ಬಂಧಿಸಿದ್ದಾರೆ.




ಗಾಂಜಾ ಗಿಡ ವಶಪಡಿಸಿಕೊಂಡಿರುವುದು.

ಗ್ರಾಮದ ನಿವಾಸಿಗಳಾದ ರಾಜೇಶ್, ರಮೇಶ್ ಬಂಧಿತ ಆರೋಪಿಗಳು. ಇವರಿಂದ ಒಟ್ಟು 21.5 ಕೆಜಿ ತೂಕದ 1.50 ಲಕ್ಷ ರೂ. ಮೌಲ್ಯದ 33 ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮನೆ ಹಿಂಭಾಗ ಗಾಂಜಾ ಬೆಳೆದಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರು, ಗ್ರಾಮಾಂತರ ಜಿಲ್ಲೆ ಅಬಕಾರಿ ಉಪ ಆಯುಕ್ತರ ನಿರ್ದೇಶನದಂತೆ ನಂಜನಗೂಡು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಮಾರ್ಗದರ್ಶನದಲ್ಲಿ ಗುರುವಾರ ಬೆಳಗ್ಗೆ ದಾಳಿ ನಡೆಸಿದ ಕೋಟೆ ವಲಯದ ಅಬಕಾರಿ ಪೊಲೀಸರು ರಾಜೇಶ್ ಅವರ ಮನೆ ಹಿಂಭಾಗ ಬೆಳೆದಿದ್ದ 4.5 ಕೆಜಿ ತೂಕದ 3 ಗಾಂಜಾ ಗಿಡಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೇ ಅದೇ ಗ್ರಾಮದ ರಮೇಶ್ ಅವರ ಮನೆ ಮೇಲೆ ದಾಳಿ ನಡೆಸಿ ಮನೆ ಹಿಂಭಾಗದಲ್ಲಿ ಬೆಳೆದಿದ್ದ 17 ಕೆಜಿ ತೂಕದ 30 ಹಸಿ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಕಾರ್ಯಾಚರಣೆ ವೇಳೆ ಅಬಕಾರಿ ನಿರೀಕ್ಷಕ ಎಸ್.ಶಿವರಾಜು, ಉಪ ನಿರೀಕ್ಷಕ ಅಪ್ಸಲ್, ಮುಖ್ಯಪೇದೆ ಬಿ.ವಿ.ರವಿ, ಸಿಬ್ಬಂದಿಗಳಾದ ಕೃಷ್ಣ, ಬಿಲ್ ಕಲೆಕ್ಟರ್ ಮಹೇಶ್, ಕಂದಾಯ ಅಧಿಕಾರಿಗಳು, ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಶಿವಪ್ಪ ನಿಧನ



ಬೆಟ್ಟದಪುರ, ಸೆ.12– ಪಿರಿಯಾಪಟ್ಟಣ ತಾಲೂಕಿನ ಶಾನುಭೋಗನಹಳ್ಳಿ ಗ್ರಾಮದ ಶಿವಪ್ಪ(80) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

7.27 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಂಜನಗೂಡು/ಮಲ್ಲುಂಡಿ, ಸೆ.12– ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅನುದಾನದ ಕೊರತೆ ಇಲ್ಲ. ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿಯೊಬ್ಬರ ವೈಯಕ್ತಿಕ ಅಭಿವೃದ್ಧಿ ಜೊತೆಗೆ ಇತರೆ ಅಭಿವೃದ್ಧಿ ಕೆಲಸಗಳಿಗೂ ಒತ್ತು ನೀಡಲಾಗಿದೆ. ಇದಕ್ಕೆ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳೇ ಸಾಕ್ಷಿ ಎಂದು ಶಾಸಕ ದರ್ಶನ್ ತಿಳಿಸಿದರು.



ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ತಾಲೂಕಿನ ಹುರ, ಸಿದ್ದೇಗೌಡನಗುಂಡಿ, ಮಲ್ಲಹಳ್ಳಿ, ಚನ್ನಪಟ್ಟಣ, ಹಾಡ್ಯದಹುಂಡಿ, ಮಡಕೆಹುಂಡಿ, ಹೊಸಕಡಜಟ್ಟಿ, ಮೂಡಲಹುಂಡಿ, ಜಾಲಹಳ್ಳಿ ಗ್ರಾಮಗಳಲ್ಲಿ 7 ಕೋಟಿ 27 ಲಕ್ಷದ 60 ಸಾವಿರ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ವೈಯಕ್ತಿಕ ಅಭಿವೃದ್ಧಿ ಜೊತೆಗೆ ರಸ್ತೆ, ಚರಂಡಿ ಮತ್ತು ಮೂಲಸೌಕರ್ಯ ಒದಗಿಸಲು ಹೆಚ್ಚಿನ ಅನುದಾನವನ್ನು ನಮ್ಮ ಸರ್ಕಾರ ಒದಗಿಸುತ್ತಿದೆ. ಇದಕ್ಕೆ ನಂಜನಗೂಡು ಕ್ಷೇತ್ರಕ್ಕೆ 600 ಕೋಟಿಗಿಂತಲೂ ಹೆಚ್ಚಿನ ಅನುದಾನ ಬಿಡುಗಡೆಗೊಂಡು ನಿರಂತರವಾಗಿ ಅಭಿವೃದ್ಧಿ ಕೆಲಸಗಳು ಸಾಗುತ್ತಿರುವುದೇ ಸಾಕ್ಷಿ ಎಂದರು.

ಹುರ ಗ್ರಾಮದಿಂದ ಹೊಸ ಕಡಜಟ್ಟಿ ಗ್ರಾಮದವರೆಗೆ, ಹುರ ಮತ್ತು ಸರಗೂರು ತಾಲೂಕಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ರಾಜ್ಯ ಹೆದ್ದಾರಿಯನ್ನು 6 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಜೊತೆಗೆ ಹುರ ಗ್ರಾಮದಲ್ಲಿ 14.5 ಲಕ್ಷ ವೆಚ್ಚದಲ್ಲಿ ಶಾಲಾ ಕೊಠಡಿ ನಿರ್ಮಾಣ, ತಾಲೂಕಿನ ಸಿದ್ದೇಗೌಡನಹುಂಡಿಯಲ್ಲಿ ಸಾಮಾನ್ಯ ವರ್ಗದ ಬೀದಿಯಲ್ಲಿ 15 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಮಲ್ಲಹಳ್ಳಿಯಲ್ಲಿ 20 ಲಕ್ಷ, ಚನ್ನಪಟ್ಟಣದಲ್ಲಿ 15 ಲಕ್ಷ, ಮಡಿಕೆಹುಂಡಿಯಲ್ಲಿ 15 ಲಕ್ಷ, ಮೂಡಲಹುಂಡಿಯಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಚರಂಡಿ ಮತ್ತು ಸಿಸಿ ರಸ್ತೆ ನಿರ್ಮಾಣ ಮಾಡಲಾಗುವುದು. ಜಾಲಹಳ್ಳಿಯಲ್ಲಿ ಎಸ್‌ಇಪಿ ಯೋಜನೆಯಡಿ 20 ಲಕ್ಷ ವೆಚ್ಚದಲ್ಲಿ ಪ.ಜಾತಿಯ ಬೀದಿಗಳಲ್ಲಿ ಚರಂಡಿ ಮತ್ತು ಸಿಸಿ ರಸ್ತೆ ನಿರ್ಮಾಣ ಕಾಮಗಾರಿ, ಹಾಡ್ಯದಹುಂಡಿಯಲ್ಲಿ 14.5 ಲಕ್ಷ ವೆಚ್ಚದಲ್ಲಿ ಶಾಲಾ ಕೊಠಡಿ ನಿರ್ಮಾಣ ಸೇರಿದಂತೆ 7.27 ಕೋಟಿ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗಿದ್ದು, ಹುರ ಗ್ರಾಮದಿಂದ ಸರಗೂರು ತಾಲೂಕಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಮುಂದಿನ 3 ತಿಂಗಳೊಳಗೆ ಮುಕ್ತಾಯವಾಗಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ನೆರವಾಗಲಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ಹಲ್ಲರೆ ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಮಹದೇವಸ್ವಾಮಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಮುಖಂಡರಾದ ಮಹದೇವು, ಶಿವಣ್ಣ, ರಂಗಸ್ವಾಮಿ, ಪುಟ್ಟ ಸ್ವಾಮಿ, ತಾಯಮ್ಮ, ಶಿವಮೂರ್ತಿ, ಮಲ್ಲಿಕಾರ್ಜುನ, ದೇವಪ್ರಕಾಶ್, ಕಡಜಟ್ಟಿ ಮಹೇಶ್, ಮಂಜು ಪಟೇಲ್, ಸಾಮಾಜಿಕ ಜಾಲತಾಣ ಅಧ್ಯಕ್ಷ ಎಸ್. ಮಹೇಶ್, ಆದರ್ಶ, ಶಿವನಾಗಪ್ಪ, ಗ್ರಾಪಂ ಸದಸ್ಯ ಶ್ರೀನಿವಾಸ್, ಗುತ್ತಿಗೆದಾರ ಜಯಕುಮಾರ್, ಕೆಆರ್‌ಐಡಿಎಲ್ ಅಧಿಕಾರಿಗಳಾದ ಶರಣ್, ಅಭಿಷೇಕ್, ಪಂಚಾಯತ್ ರಾಜ್ ಇಲಾಖೆ ಎಇಇ ರಾಜು, ಇಂಜಿನಿಯರ್ ಬಸವರಾಜ್, ಯಶವಂತ್, ಪಿಡಿಓ ಕವಿತಾ, ವಿಜಯಲಕ್ಷ್ಮಿ, ಎಇ ಈರಯ್ಯ ಸೇರಿದಂತೆ ಹಲವರಿದ್ದರು.

> 6 ಶಾಸಕರು ಕಳೆದ ಎರಡೂವರೆ ವರ್ಷಗಳಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ನಿರಂತರವಾಗಿ ಅಭಿವೃದ್ಧಿ ಕೆಲಸಗಳನ್ನು ನಡೆಸುತ್ತಿದ್ದಾರೆ. ಈ ಭಾಗದ ಪ್ರಮುಖ ಸಮಸ್ಯೆಯಾಗಿದ್ದ ಕಾಡುಪ್ರಾಣಿಗಳ ಹಾವಳಿ ತಡೆಗಟ್ಟಲು 12 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಮೆಸ್ ನಿರ್ಮಾಣಗೊಳಿಸಿದ್ದಾರೆ. ಅಲ್ಲದೆ ಹುಲ್ಲಹಳ್ಳಿ ಮತ್ತು ಹುರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯನ್ನು 20 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೊಳಿಸಿದ್ದಾರೆ. ಚಂದ್ರವಾಡಿಯಿಂದ ಲಂಕೆ ಮಾರ್ಗವಾಗಿ ಮತ್ತು ತರಗನಹಳ್ಳಿ ಗ್ರಾಮದಿಂದ ಯಾಲಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ, ಚಂದ್ರವಾಡಿ ಗ್ರಾಮದಿಂದ ಆಕಳ, ಅಲ್ಲಯ್ಯನಪುರ ಗ್ರಾಮದಿಂದ ಕಾಟೂರು ಮಾರ್ಗ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು ಈ ರಸ್ತೆ ಅಭಿವೃದ್ಧಿಗಳಿಗಾಗಿ ಮುಂದಿನ ದಿನಗಳಲ್ಲಿ ಜಿಪಂ ಇಲಾಖೆಯಿಂದ 10 ಕೋಟಿ ಅನುದಾನ ಬಿಡುಗಡೆಗೊಂಡಿದ್ದು ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಹಂತದಲ್ಲಿದ್ದು, ಶೀಘ್ರ ರಸ್ತೆ ಅಭಿವೃದ್ಧಿಗೊಳ್ಳಲಿದೆ.
> – ಕೇಶವಮೂರ್ತಿ, ಮಾಜಿ ಶಾಸಕ.


ನಿರಂತರ ಪ್ರಯತ್ನದಿಂದ ಅಗಾಧ ಸಾಧನೆ ಸಾಧ್ಯವಿದೆ

ವಿದ್ಯಾರ್ಥಿಗಳಿಗೆ ಐಎಎಸ್ ಅಧಿಕಾರಿ ಕೆ.ಎ.ದಯಾನಂದ ಆತ್ಮವಿಶ್ವಾಸ

ಮೈಸೂರು, ಸೆ.12(ಎಂಕೆ)– ಜೀವನೋತ್ಸಾಹದೊಂದಿಗೆ ಸಾಧಿಸುವ ಹುಚ್ಚುತನ, ನಿರಂತರ ಪರಿಶ್ರಮದಿಂದ ಸಕ್ಸಸ್ ಲಭಿಸಲಿದ್ದು, ನಮ್ಮಿಂದ ಸಾಧ್ಯವಾಗಿದೆ ಎಂದರೆ ನಿಮ್ಮಿಂದಲೂ ಸಾಧ್ಯವಾಗಲಿದೆ ಎಂದು ಕರ್ನಾಟಕ ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ.ದಯಾನಂದ, ಕಿಕ್ಕಿರಿದು ತುಂಬಿದ್ದ ಪದವಿ ವಿದ್ಯಾರ್ಥಿಗಳಲ್ಲಿ ಸಾಧಿಸುವ ಆತ್ಮವಿಶ್ವಾಸ ತುಂಬಿದರು.

ಮೈಸೂರು ಕಲಾಮಂದಿರದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಕಾರದೊಂದಿಗೆ ಸಮನ್ವಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಭರವಸೆ ಹೆಜ್ಜೆ–3(ಬದುಕಿನ ಸಾಧನೆಗಳ ಕುರಿತು ಪದವಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರ) ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಸುಂದರವಾದ ಬದುಕನ್ನು ಕಟ್ಟಿಕೊಳ್ಳುವುದು ನಮ್ಮಿಂದಲೇ ಸಾಧ್ಯ ಎಂದು ತಿಳಿಹೇಳಿದರು.

ಸಾಧನೆಯ ಹಿಂದೆ ಪರಿಶ್ರಮ ಅಡಗಿರಲಿದೆ. ಐಎಎಸ್ ಮಾಡುವುದು ಮಾತ್ರವೇ ಸಾಧನೆಯಲ್ಲ. ರೈತರಾಗಿಯೂ ಮಹತ್ತರ ಸಾಧನೆ ಮಾಡಬಹುದು ಎಂಬುದಕ್ಕೆ ನಮ್ಮ ಮುಂದೆ ಹಲವು ಉದಾಹರಣೆಗಳಿವೆ. ಮನುಷ್ಯನಿಗೆ ಏನನ್ನಾದರೂ ಸಾಧಿಸುವ ಹುಚ್ಚುತನ ಇರಬೇಕು. ಅದಕ್ಕಿಂತ ಮೊದಲು ನಮ್ಮ ಬಗ್ಗೆ ನಮಗೆ ನಂಬಿಕೆ ಇರಬೇಕು.



ಕಲಾಮಂದಿರದಲ್ಲಿ ಶುಕ್ರವಾರ ನಡೆದ ಭರವಸೆ ಹೆಜ್ಜೆ–3 ಕಾರ್ಯಾಗಾರವನ್ನು ರಾಷ್ಟ್ರಪ್ರಶಸ್ತಿ ಪುರಸ್ಕೃತ ರೈತ ದುರ್ಗಪ್ಪ ಅಂಗಡಿ ಉದ್ಘಾಟಿಸಿದರು. ಕರ್ನಾಟಕ ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ.ದಯಾನಂದ ಮತ್ತಿತರರಿದ್ದರು.

ತನ್ನೊಳಗೆ ಇರುವ ಶಕ್ತಿಯನ್ನು ಕಂಡುಕೊಂಡು, ಅದರ ಸದ್ಬಳಕೆ ಮಾಡಿಕೊಳ್ಳಬೇಕು. ಎಲ್ಲಿ ಬಡತನ, ಕಷ್ಟ ಇರುತ್ತೋ ಅಲ್ಲಿ ಮಾತ್ರವೇ ಛಲ ಹುಟ್ಟಲಿದೆ ಎಂದರು.

ಉನ್ನತ ಸ್ಥಾನಗಳನ್ನು ಪಡೆದುಕೊಳ್ಳಿ: ವಿದ್ಯಾರ್ಥಿಗಳು ಉನ್ನತ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುವುದರಿಂದ ಸಮಾಜದಲ್ಲಿ ಧನಾತ್ಮಕ ಬದಲಾವಣೆ ತರಲು ಸಾಧ್ಯವಿದೆ. ಜ್ಞಾನ ಇರುವಲ್ಲಿ ಉತ್ತಮ ಬದುಕು ಇದ್ದು, ನಾವು ಕನಸು ಕಂಡ ರೀತಿ ಜೀವನ ನಡೆಸಲು ಶಕ್ತಿಯುತ ಸ್ಥಾನಗಳಿಗೆ ತಲುಪಬೇಕು. ಉನ್ನತ ಸ್ಥಾನದಲ್ಲಿ ಅಧಿಕಾರ ಹೊಂದಿದಾಗ ದಾರ್ಶನಿಕರು ಕಂಡ ಒಳ್ಳೆಯ ಸಮಾಜ ನಿರ್ಮಿಸಲು ಸಾಧ್ಯವಿದೆ. ಯುವಜನರು ಭಾರತದ ಭವಿಷ್ಯ ಎಂದು ತಿಳಿಸಿದರು.

ದುಡಿದರೆ ನಿಮ್ಮ ರಾಶಿ ಭವಿಷ್ಯವೇ ಬದಲಾಗುತ್ತದೆ...!

ಯಾರೋ ಕರೀತಾರೆ, ಜೈಕಾರ ಹಾಕಿದರೆ ಐನೂರು ಕೊಡುತ್ತಾರೆ ಅಂತ ಹೋಗಿ, ಅಲ್ಲೇನಾದರೂ ಗಲಾಟೆಯಾದರೆ ನಿಮ್ಮ ಮೇಲೆ ಕೇಸ್‌ಗಳು ಬೀಳುತ್ತವೆ. ಅದರ ಬದಲು ದುಡಿಯಿರಿ. ಕಷ್ಟಪಟ್ಟು ದುಡಿದರೆ ನಿಮ್ಮ ರಾಶಿ ಭವಿಷ್ಯವೇ ಬದಲಾಗುತ್ತದೆ. ನಿಮ್ಮನ್ನು ನೋಡಿ ಸೆಲ್ಫಿ ತೆಗೆದುಕೊಳ್ಳುವ ಮಟ್ಟಕ್ಕೆ ಬೆಳೆಯಿರಿ. ಬಡವರಿಗೆ ತುತ್ತು ಅನ್ನಹಾಕಿದರೆ ಅಲ್ಲಿಯೇ ದೇವರಿದ್ದಾನೆ. ತಂದೆ–ತಾಯಿ ಕಡೆಗಣಿಸಿದರೆ ಅದಕ್ಕಿಂತ ದೊಡ್ಡ ಶಾಪ ಮತ್ತೊಂದಿಲ್ಲ.

- ದುರ್ಗಪ್ಪ ಅಂಗಡಿ, ರಾಷ್ಟ್ರಪ್ರಶಸ್ತಿ ಪುರಸ್ಕೃತ ರೈತರು

ಜ್ಞಾನದ ಹಂಚಿಕೆಯೇ ದೊಡ್ಡ ಕೊಡುಗೆ: ಸಮನ್ವಯ ಟ್ರಸ್ಟ್ ನಿರ್ದೇಶಕ ಸಮನ್ವಯ ಕಾಶಿ ಮಾತನಾಡಿ, ಬದುಕಿನ ಸಾಧ್ಯತೆಗಳ ಕುರಿತು ಯುವಜನರಿಗೆ ಮಾರ್ಗದರ್ಶನ ನೀಡುವ, ಸಾಧನೆ ಮಾಡುವಂತೆ ಪ್ರೋತ್ಸಾಹಿಸುವ ವಿಶೇಷ ಕಾರ್ಯಾಗಾರ ಇದಾಗಿದ್ದು, ವಿದ್ಯಾರ್ಥಿಗಳಿಗೆ ಬುಕ್ಸ್, ಬ್ಯಾಗ್ ಕೊಡುವುದು ಕೊಡುಗೆಯಲ್ಲ. ಜ್ಞಾನದ ಹಂಚಿಕೆಯೇ ದೊಡ್ಡ ಕೊಡುಗೆ. ಸಾಧಿಸಿದವರು ನಮ್ಮ ಮುಂದೆ ಇದ್ದಾರೆ. ನಮ್ಮಿಂದ ಯಾವುದು ಸಾಧ್ಯವಾಗುತ್ತೊ ಅದೆಲ್ಲವನ್ನೂ ಮಾಡೋಣ. ಬದುಕು ಚಿಕ್ಕದು. ಆದರೆ, ನಮ್ಮೆಲ್ಲರ ಪ್ರದರ್ಶನ ಗುಣಮಟ್ಟದ್ದಾಗಿರಬೇಕು.

ಅಂತರರಾಷ್ಟ್ರೀಯ ಈಜುಪಟು ಬೆಂಗಳೂರಿನ ಎನ್.ಎಂ.ಧ್ಯಾನ್ ಕಶ್ಯಪ್, ಅಂತರಾಷ್ಟ್ರೀಯ ಯೋಗಪಟು ತಮಿಳುನಾಡು ಸೇಲಂನ ಪಿ.ಸುಂದರಿಸನ್, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ, ಮೈಸೂರು ಮಹಾನಗರ ಪಾಲಿಕೆ ಕಂದಾಯ ವಿಭಾಗದ ಆಯುಕ್ತ ಸೋಮಶೇಖರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ, ಯತೀಶ್, ನಂದಿನಿ, ಸಾಗರ ಮತ್ತಿತರರು ಉಪಸ್ಥಿತರಿದ್ದರು.

ಸೊಸೈಟಿ ಅಕ್ಕಿ ತಿನ್ನುವ ನನಗೆ 25ಕ್ಕೂ ಅಧಿಕ ಪ್ರಶಸ್ತಿ ಬಂದಿವೆ!

ರಾಷ್ಟ್ರಪ್ರಶಸ್ತಿ ಪುರಸ್ಕೃತ ರೈತ ದುರ್ಗಪ್ಪ ಅಂಗಡಿ ಮಾತನಾಡಿ, ಹಳ್ಳಿಯಲ್ಲಿ ಏಡಿ ಹಿಡಿದುಕೊಂಡು ಗದ್ದೆ ಕೆಲಸ ಮಾಡಿಕೊಂಡಿದ್ದ ನನ್ನನ್ನು ವೇದಿಕೆ ಮೇಲೆ ನಿಲ್ಲಿಸಿದ್ದು ನನ್ನ ಬಡತನ. 15 ಲಕ್ಷ ಸಾಲ, ವಾರಕೊಮ್ಮೆ ಸೊಸೈಟಿ ಅಕ್ಕಿ ಅನ್ನ ತಿನ್ನುವ ಪರಿಸ್ಥಿತಿಯಲ್ಲಿದ್ದ ನಾನು ಇಂದು 25 ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆದಿದ್ದೇನೆ ಎನ್ನುತ್ತಲೇ ತಮ್ಮ ಕಷ್ಟದ ದಿನಗಳು, ತಮ್ಮ ಒಂದೂವರೆ ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿಯಿಂದ ಸಾಲ ತೀರಿಸಿ, ಮಾದರಿ ರೈತ ಎನಿಸಿಕೊಂಡ ಬಗೆಯನ್ನು ವಿವರಿಸುತ್ತಲೇ ಹೆಜ್ಜೆ ಇಡುವಾಗ ಯೋಚನೆ ಮಾಡಿ ಇಡಿ. ಕನಸು ಕಾಣಿ. ಆದರೆ, ಕಲ್ಲು–ಮುಳ್ಳಿನ ದಾರಿ ತುಳಿಯಬೇಡಿ ಎಂದು ಎಚ್ಚರಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸನ್ ಆಫ್ ಮುತ್ತಣ್ಣ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) +ರಾಮನಗರ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೀತ ಗಾಯನ ಸಂಭ್ರಮ ಕಾರ್ಯಕ್ರಮ



ಗೀತೆಗಳ ಗಾನ ಸಂಭ್ರಮ ಕಾರ್ಯಕ್ರಮದಲ್ಲಿ ಗಾಯಕ ಮೈಸೂರು ಎಂ.ಮಹಾಲಿಂಗ ಅವರಿಗೆ 'ಸುಗಮ ಸಂಗೀತ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮೈಸೂರು, ಸೆ.12(ಎಂಕೆ)– ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಮೈಸೂರಿನ ರಾಗತರಂಗ ಅಕಾಡೆಮಿ ವತಿಯಿಂದ ಗೀತೆಗಳ ಗಾನ ಸಂಭ್ರಮ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ರಾಗ ಮತ್ತು ಸಂಗೀತದಿಂದ ಎಲ್ಲರಿಗೂ ಮನಶಾಂತಿಯ ಜೊತೆಗೆ ಆರೋಗ್ಯ ವೃದ್ಧಿಸುತ್ತದೆ. ಸಂಸ್ಕೃತಿ ಕಟ್ಟುವಲ್ಲಿ, ಸಮಾಜದಲ್ಲಿ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡುವುದರಲ್ಲಿ ಸಂಗೀತ ಕಲಿಯುವುದು, ಕಲಿಸುವುದು ಮಹತ್ಕಾರ್ಯವಾಗಿದೆ ಎಂದು ತಿಳಿಸಿದರು.

ಬಳಿಕ ಗಾಯಕ ಮೈಸೂರು ಎಂ.ಮಹಾಲಿಂಗ ಅವರಿಗೆ 'ಸುಗಮ ಸಂಗೀತ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ ವಿ ಬೈರಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಸಿ.ವಿ.ಪಾರ್ಥಸಾರಥಿ, ಸ್ತ್ರೀರೋಗ ತಜ್ಞೆ ಡಾ.ರೇಖಾ, ಅನ್ನಪೂರ್ಣ ಶಂಕರ್, ರೂಪ ಮತ್ತಿತರರಿದ್ದರು.

ನಾಳೆ ಉದ್ಬೂರು ಬಳಿಯ ಡಾ.ವಿಷ್ಣು ಸ್ಮಾರಕದ ಬಳಿ ವಿಷ್ಣು ಗಾನ ಮಂಜರಿ

ಮೈಸೂರು, ಸೆ.12(ಜಿಎ)–ಡಾ.ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬದ ಪ್ರಯುಕ್ತ ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ವತಿಯಿಂದ ಸೆ.14ರಂದು ವಿಷ್ಣು ಗಾನ ಮಂಜರಿ ಕಾರ್ಯಕ್ರಮವನ್ನು ಉದ್ಬೂರ್ ಗೇಟ್ ಬಳಿ ಇರುವ ಡಾ.ವಿಷ್ಣುವರ್ಧನ್ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಿ.ಮೋಹನ್ ಕುಮಾರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 11ರಿಂದ ಸಂಜೆ 5ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದ್ದು, 18 ಗಾಯಕರು 45 ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು. ವಿಶೇಷ ಆಹ್ವಾನಿತರಾಗಿ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಭೈರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಆಟೋಮೋಟಿವ್ ಆಕ್ಸಿಲ್ಸ್ ಲಿಮಿಟೆಡ್‌ನ ಅಧ್ಯಕ್ಷ ನಾಗರಾಜ್ ಗರ್ಗೇಶ್ವರಿ, ಚಲನಚಿತ್ರ ನಿರ್ಮಾಪಕ ಎಂ.ಡಿ.ಪಾರ್ಥಸಾರಥಿ ಆಗಮಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಮಂಜುಳಾ, ಸುಪರ್ಣ ಗಣೇಶ್, ಭಾಸ್ಕರ್, ಚಂದ್ರಶೇಖರ್ ಶಿಂಧೆ, ರಮೇಶ್ ಬಾಳಪ್ಪ ಉಪಸ್ಥಿತರಿದ್ದರು.

ವಾರ್ಷಿಕ ಮಹಾಸಭೆ

ಮೈಸೂರು, ಸೆ.12– ಮೈಸೂರು ಜಯಲಕ್ಷ್ಮಿಪುರಂನಲ್ಲಿರುವ ಕೊಡಗು ಸಹಕಾರ ಸಂಘದ ಸಭಾಂಗಣದಲ್ಲಿ ಸೆ.21 ರಂದು ಬೆಳಗ್ಗೆ 10.30ಕ್ಕೆ 2024–2025ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಲಿದೆ. ಸಂಘದ ಅಧ್ಯಕ್ಷರಾದ ಶ್ರೀಮತಿ ಎ.ಸಿ.ನಂಜಮ್ಮ(ಚೆಂಬಾಂಡ) ಅವರ ಅಧ್ಯಕ್ಷತೆಯಲ್ಲಿ ಸಭೆಯ ನಡೆಯಲಿದ್ದು, ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕುಂಬಾರಕೊಪ್ಪಲು ಸರ್ಕಾರಿ ಶಾಲೆಯ ಕೊಠಡಿ ಉದ್ಘಾಟನೆ

ಮೈಸೂರು, ಸೆ.12(ಎಂಕೆ)– ಮಕ್ಕಳ ಮನಸ್ಸು ಮಣ್ಣಿನ ಮುದ್ದೆಯಂತೆ. ನಾವು ಕೊಡುವ ಆಕಾರದ ಮೇಲೆ ಅವರ ವ್ಯಕ್ತಿತ್ವ ರೂಪಿತವಾಗುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರು ಕುಂಬಾರಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಉನ್ನತೀಕರಿಸಿದ ಶಾಲೆ ಆವರಣದಲ್ಲಿ ಕಲಿಸು ಫೌಂಡೇಷನ್ ಸಹಯೋಗದೊಂದಿಗೆ ನೂತನವಾಗಿ ನಿರ್ಮಿಸಿರುವ ಶಾಲೆಯ ಕಾಂಪೌಂಡ್ ಹಾಗೂ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಅಭಿವೃದ್ಧಿಯಾಗಬೇಕಾದರೆ ಶಿಕ್ಷಕರು ಪಾಠ ಪ್ರವಚನದ ಜೊತೆಗೆ ದೇಶ, ಧರ್ಮ, ಅಭಿವೃದ್ಧಿ ಕುರಿತ ವಿಚಾರಗಳನ್ನು ಮಕ್ಕಳಿಗೆ ತಿಳಿಸಿಕೊಡಬೇಕು ಎಂದು ಸಲಹೆ ನೀಡಿದರು.

ಶಿಕ್ಷಣದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರೆ, ಅದು ಅವರ ಬದುಕನ್ನು ಉಜ್ವಲಗೊಳಿಸುತ್ತದೆ. ಹಾಗೆಯೇ ಕುಂಬಾರಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಉನ್ನತೀಕರಿಸಿದ ಶಾಲೆ ಮಾದರಿ ಶಾಲೆಯಾಗಿದ್ದು, ನಾಲ್ಕು ಬಾರಿ ರಾಜ್ಯ ಪ್ರಶಸ್ತಿ ಪಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಉನ್ನತೀಕರಿಸಿದ ಮೈಸೂರು ಕುಂಬಾರಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶಾಲೆಯ ಕಾಂಪೌಂಡ್ ಹಾಗೂ ಕೊಠಡಿಗಳನ್ನು ಸಂಸದ ಯದುವೀರ್ ಉದ್ಘಾಟಿಸಿದರು

ಸಂವಾದ: ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಯದುವೀರ್, ಮೈಸೂರು ಅರಮನೆಯ ಇತಿಹಾಸ, ದಸರಾ ಹಾಗೂ ರಾಜಕೀಯ ಜೀವನ ಕುರಿತು ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಕುತೂಹಲದಿಂದ ಉತ್ತರ ನೀಡಿದರು. ಹಾಗೆಯೇ ಶಾಲೆಗೆ ಇನ್ನಷ್ಟು ಕಂಪ್ಯೂಟರ್ ಹಾಗೂ ಕ್ರೀಡಾ ಸಾಮಗ್ರಿಗಳ ಅವಶ್ಯವಿರುವ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡರು.

ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಶಾಸಕ ಎಲ್.ನಾಗೇಂದ್ರ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ, ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಲೋಹಿತೇಶ್, ಎಸ್‌ಡಿಎಂಸಿ ಅಧ್ಯಕ್ಷ ರಂಗೇಗೌಡ, ಪೈಲೋಕೇಶ್, ಕಲಿಸು ಫೌಂಡೇಷನ್ ಮುಖ್ಯಸ್ಥ ನಿಖಿಲೇಶ್ ಮತ್ತಿತರರಿದ್ದರು.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಪ್ರಮಾಣ ವಚನ

ರಾಜೀನಾಮೆ ನಂತರ ಮೊದಲ ಬಾರಿಗೆ ಕಾಣಿಸಿಕೊಂಡ ಧಂಕರ್

ನವದೆಹಲಿ, ಸೆ.12– ದೇಶದ 15ನೇ ಉಪರಾಷ್ಟ್ರಪತಿಯಾಗಿ ಸಿ.ಪಿ.ರಾಧಾಕೃಷ್ಣನ್ ಅವರು ಪ್ರಮಾಣವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಧಾಕೃಷ್ಣನ್‌ಗೆ ಪ್ರಮಾಣವಚನ ಬೋಧಿಸಿದರು.

ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್ ಶುಕ್ರವಾರ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಭಾರತದ 15 ನೇ ಉಪರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಿರಿಯ ಸರ್ಕಾರಿ ಅಧಿಕಾರಿಗಳು ಮತ್ತು ಗಣ್ಯರ ಸಮ್ಮುಖದಲ್ಲಿ ರಾಧಾಕೃಷ್ಣನ್ ಅವರಿಗೆ ಪ್ರಮಾಣವಚನ ಬೋಧಿಸಿದರು.



ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪರಾಷ್ಟ್ರಪತಿಯಾಗಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಜಗದೀಪ್ ಧನಕರ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾಗಿದ್ದ ಹುದ್ದೆಗೆ ಮಂಗಳವಾರ (ಸೆ.9) ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ರಾಧಾಕೃಷ್ಣನ್, ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿ ಬಿ.ಸುದರ್ಶನ ರೆಡ್ಡಿ ಅವರನ್ನು ಮಣಿಸಿದ್ದರು.

ರಾಧಾಕೃಷ್ಣನ್ ಪರ ಒಟ್ಟು 452 ಮತಗಳು ಚಲಾವಣೆಯಾಗಿದ್ದವು. ರೆಡ್ಡಿ 300 ಮತಗಳನ್ನು ಗಳಿಸಿದ್ದರು. ರಾಜೀನಾಮೆ ನೀಡಿದ ನಂತರ ಮೊದಲ ಬಾರಿಗೆ ಧನಕರ್ ಸಾರ್ವಜನಿಕವಾಗಿ ಕಾಣಿಸಿಕೊಂಡರು.

ಕುವೆಂಪು ಅವರಿಗೆ ಭಾರತರತ್ನ ಪ್ರಶಸ್ತಿಗೆ ಶಿಫಾರಸ್ಸು

ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಮೆಚ್ಚುಗೆ

ಮೈಸೂರು, ಸೆ. 12– ಕುವೆಂಪು ಅವರಿಗೆ ಭಾರತರತ್ನ ಪ್ರಶಸ್ತಿಗೆ ಶಿಫಾರಸ್ಸು ಮಾಡಿರುವ ರಾಜ್ಯ ಸರ್ಕಾರದ ನಡೆ ಅಭಿನಂದನಾರ್ಹ. ಕೇಂದ್ರ ಸರಕಾರ ರಾಜ್ಯ ಸರಕಾರದ ಶಿಫಾರಸ್ಸನ್ನು ಪರಿಗಣಿಸಿ ಈ ಬಾರಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ಘೋಷಿಸಬೇಕು ಎಂದು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ. ಮಲ್ಲೇಶ್ ತಿಳಿಸಿದ್ದಾರೆ.



ಕೆ.ವಿ. ಮಲ್ಲೇಶ್

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಭಾರತರತ್ನದಂತಹ ಪರಮೋಚ್ಚ ಪ್ರಶಸ್ತಿಗೆ ಕುವೆಂಪು ಅವರನ್ನು ಆಯ್ಕೆ ಮಾಡುವ ಮೂಲಕ ರಾಜ್ಯ ಸರ್ಕಾರ ಇಡೀ ಸಾಹಿತ್ಯ ಲೋಕಕ್ಕೆ ದೊಡ್ಡ ಕೊಡುಗೆ ನೀಡಿದೆ.

'ನೂರು ದೇವರನೆಲ್ಲಾ ನೂಕಾಚೆ ದೂರ, ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರಾ' ಎಂಬ ಕುವೆಂಪು ಅವರ ಕವಿವಾಣಿಯ ಉಕ್ತಿಯಂತೆ ಭಾರತರತ್ನ ನೀಡುವ ಸದವಕಾಶಕ್ಕೆ ರಾಜ್ಯ ಸರ್ಕಾರ ಮುಂದಡಿ ಇಟ್ಟಿರುವುದು ಈ ನೆಲದ ಸಾಹಿತಿಸಂತನಿಗೆ ಸಂದ ಗೌರವವೇ ಸರಿ.

ಕುವೆಂಪು ಅವರ ಬದುಕು, ಬರಹ, ಆದರ್ಶ, ನೈತಿಕ ಮೌಲ್ಯಗಳಿಗೆ ಮತ್ತಷ್ಟು ಬಲ ಬರಬೇಕಿದ್ದಲ್ಲಿ ಈ ಪ್ರಶಸ್ತಿ ಎಂದೋ ಬರಬೇಕಿತ್ತು. ಆದರೆ, ನಾನಾ ಕಾರಣಗಳಿಂದಾಗಿ ಸಾಧ್ಯವಾಗದ ವಿಚಾರವೊಂದು ಇಂದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದಲ್ಲಿ ಸಾಧನೆ ಕಂಡಿದೆ. ಅದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ನೇತೃತ್ವದ ಬಳಗಕ್ಕೆ ಅಭಿನಂದನೆಗಳು.

ರಾಜ್ಯ ಸರ್ಕಾರದ ಈ ಶಿಫಾರಸ್ಸನ್ನು ಕೇಂದ್ರ ಸರ್ಕಾರ ತಕ್ಷಣ ಪುರಸ್ಕರಿಸಿ ಪ್ರಶಸ್ತಿ ಘೋಷಣೆ ಮಾಡಬೇಕು. ನಾಡುಮೆಚ್ಚಿದ ಕವಿಗೆ ದಶಕಗಳ ನಂತರ ಮರಣೋತ್ತರ ಭಾರತರತ್ನ ನೀಡುವ ದಿಕ್ಕಿನಲ್ಲಿ ಯೋಚಿಸಿರುವುದೇ ರಾಜ್ಯ ಸರ್ಕಾರದ ಜಾತ್ಯಾತೀತ ಮನೋಭಾವನೆಗೆ ಸಾಕ್ಷಿ.

ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಅವರ ಬರಹಗಳು ಮತು ಚಿಂತನೆಗಳನ್ನು ರಾಷ್ಟ್ರವ್ಯಾಪಿಯಾಗಿಸಲು ಆ ಮೂಲಕ ಸಮಾಜದಲ್ಲಿ ಜಾತ್ಯಾತೀತ, ಸೌಹಾರ್ದ ಮನೋಭಾವ ಬೆಳೆಸಲು ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡುವುದು ಅಗತ್ಯವಾಗಿದೆ. ಈ ಬಗ್ಗೆ ಶಿಫಾರಸ್ಸಿನಲ್ಲಿ ರಾಜ್ಯ ಸರ್ಕಾರ ಸ್ಪಷ್ಟವಾಗಿ ಉಲ್ಲೇಖಿಸಿದೆ. ಕೇಂದ್ರ ಸರ್ಕಾರಕ್ಕೆ ನಿಜವಾಗಿಯೂ ಜಾತ್ಯತೀತ ತತ್ತ್ವದ ಮೇಲೆ ನಂಬಿಕೆಯಿದ್ದರೆ, ಸೌಹಾರ್ದ ಬದುಕಿನ ಆಶಯವಿದ್ದರೆ, ಸಮಸಮಾಜ ನಿರ್ಮಾಣದ ಗುರಿಯಿದ್ದರೆ ಕುವೆಂಪು ಅವರಿಗೆ ಭಾರತ ರತ್ನ ನೀಡಲೇಬೇಕು. ಆ ಮೂಲಕ ಅವರನ್ನು ರಾಷ್ಟ್ರವ್ಯಾಪಿಗೊಳಿಸಬೇಕು ಎಂದು ಅವರು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ ಪ್ರಕಟ

ಮೈಸೂರು, ಸೆ. 12– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2025ನೇ ಸಾಲಿನ ಹಿರಿಯ ಪತ್ರಕರ್ತರು, ಛಾಯಾಗ್ರಾಹಕರು ಹಾಗೂ ಅತ್ಯುತ್ತಮ ವರದಿ, ಉತ್ತಮ ಛಾಯಾಚಿತ್ರ ಉತ್ತಮ ವಿದ್ಯುನ್ಮಾನ ಮಾಧ್ಯಮ ವರದಿಗಳಿಗೆ ನೀಡಲಾಗುವ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಈ ಸಾಲಿನಲ್ಲಿ ವರ್ಷದ ಹಿರಿಯ ಪತ್ರಕರ್ತರಾಗಿ ವಿ. ಮಹೇಶ್‌ಕುಮಾರ್ (ಪ್ರಧಾನ ಸಂಪಾದಕರು, ಜಸ್ಟ್ ಕನ್ನಡ, ಮೈಸೂರು), ವರ್ಷದ ಹಿರಿಯ ಪತ್ರಕರ್ತರಾಗಿ (ಗ್ರಾಮಾಂತರ) ಸಾದಿಕ್ ಪಾಷ ಟಿ.ಎ. (ಆಂದೋಲನ, ತಲಕಾಡು), ಹಿರಿಯ ಉಪ ಸಂಪಾದಕರಾಗಿ ಕೆ.ಎಸ್. ಮಂಜುನಾಥಸ್ವಾಮಿ (ವಿಜಯ ಕರ್ನಾಟಕ), ವರ್ಷದ ಹಿರಿಯ ಛಾಯಾಗ್ರಾಹಕರಾಗಿ ಎಸ್. ಉದಯಶಂಕರ್ (ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್), ದೃಶ್ಯ ಮಾಧ್ಯಮ ವಿಭಾಗದಲ್ಲಿ ಸಿ.ಎಂ. ಮಧೂಸೂದನ್ (ಹಿರಿಯ ವರದಿಗಾರ, ಸುವರ್ಣ ನ್ಯೂಸ್), ಪ್ರಮೋದ್ ಪ್ರಭು (ಹಿರಿಯ ಛಾಯಾಗ್ರಾಹಕ) ಅವರನ್ನು ಆಯ್ಕೆ ಮಾಡಲಾಗಿದೆ.

ಅಲ್ಲದೆ, ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಅತ್ಯುತ್ತಮ ಕನ್ನಡ ವರದಿ ಪ್ರಶಸ್ತಿಗೆ ದಾ.ರಾ. ಮಹೇಶ್ (ಆಂದೋಲನ ದಿನಪತ್ರಿಕೆ), ಇಂಗ್ಲೀಷ್ ವರದಿಗೆ ಎ. ಗಣೇಶ್ (ಸ್ಟಾರ್ ಆಫ್ ಮೈಸೂರ್), ಫೋಟೋಗ್ರಫಿ ಪ್ರಶಸ್ತಿಗೆ ಎಸ್.ಆರ್. ಮಧುಸೂದನ್ (ಟೈಮ್ಸ್ ಆಫ್ ಇಂಡಿಯಾ), ದೃಶ್ಯ ಮಾಧ್ಯಮದ ಅತ್ಯುತ್ತಮ ವರದಿ ಪ್ರಶಸ್ತಿಗೆ ಕೆ.ಎಸ್. ಆನಂದ್ (ನ್ಯೂಸ್ 18), ವೀಡಿಯೋಗ್ರಾಫರ್ ವಿ. ರಾಹುಲ್, ಇಂಡಿಯನ್ ಟಿವಿ ವರದಿಗಾರ ಚಂದನ್ ಬಲರಾಮ, ವೀಡಿಯೋಗ್ರಾಫರ್ ಎಂ. ಸತೀಶ್ ಆಯ್ಕೆಯಾಗಿದ್ದಾರೆ.

ಹುಟ್ಟುಹಬ್ಬ ಆಚರಣೆ



ರಾಯಚೂರು ಸಂಸದ ಜಿ.ಕುಮಾರ್ ನಾಯಕ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಬಂಬೂ ಬಜಾರ್‌ನಲ್ಲಿರುವ ಅಂಧ ಮಕ್ಕಳ ಶಾಲೆಯ ಮಕ್ಕಳಿಗೆ ಗೋಡಂಬಿ, ದ್ರಾಕ್ಷಿ, ಕರ್ಜೂರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕುಮಾರ್ ನಾಯಕ್ ಅಭಿಮಾನಿ ಬಳಗದ ಅಧ್ಯಕ್ಷ ಹರೀಶ್, ಬಿಜೆಪಿ ಮುಖಂಡರಾದ ಗುರುದತ್, ಮಂಜು ನಾಯಕ, ರವಿ, ಜಯನಗರ ಸಿದ್ದರಾಜು, ನಿಂಗರಾಜ್ ಕೋಟೆ ಮುಂತಾದವರು ಶುಭ ಹಾರೈಸಿದರು.

ಚಾಮುಂಡಿಬೆಟ್ಟದಲ್ಲಿ ಯಂತ್ರದಿಂದ ಬಂಡೆಗಳ ಒಡೆಯುವ ಕಾರ್ಯಕ್ಕೆ ಆಕ್ಷೇಪ

ಮೈಸೂರು,ಸೆ.12(ಎಂಟಿವೈ)– ಚಾಮುಂಡಿಬೆಟ್ಟದ ಮೇಲಿನ ಖಾಸಗಿ ಭೂಮಿಯಲ್ಲಿದ್ದ ಬೃಹತ್ ಬಂಡೆಗಳನ್ನು ಅನುಮತಿ ಪಡೆಯದೆ ಡ್ರಿಲ್ಲಿಂಗ್ ಯಂತ್ರದಲ್ಲಿ ಪುಡಿ ಮಾಡುತ್ತಿರುವುದರ ಬಗ್ಗೆ ವಾಯುವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗಕ್ಕೆ ಹೊಂದಿಕೊಂಡಂತೆ, ಸರ್ಕಾರಿ ಶಾಲೆ ಹಿಂಭಾಗವಿರುವ ಸರ್ವೆ ನಂ.24/2ರ ಭೂಮಿಯಲ್ಲಿ ಐದಾರು ಬೃಹತ್ ಬಂಡೆಗಳಿದ್ದು, ಅವುಗಳನ್ನು ಆ ಭೂ ಮಾಲೀಕ ತೆರವು ಕಾರ್ಯ ಆರಂಭಿಸಿದ್ದಾರೆ. ಕಾರ್ಮಿಕರನ್ನು ಬಳಸಿಕೊಂಡು ಡ್ರಿಲ್ಲಿಂಗ್ ಯಂತ್ರದ ಮೂಲಕ ಬೃಹತ್ ಬಂಡೆಗಳ ಮೇಲೆ ರಂಧ್ರ ಕೊರೆದು ಪುಡಿ ಮಾಡಿ ತೆರವುಗೊಳಿಸುವ ಕಾರ್ಯ ಆರಂಭಿಸಲಾಗಿದೆ. ಕಳೆದ ಕೆಲವು ದಿನಗಳಿಂದ ಡ್ರಿಲ್ಲಿಂಗ್ ಯಂತ್ರದ ಮೂಲಕ ಬಂಡೆಗಳನ್ನು ಕೊರೆಯುವುದನ್ನು ಕಂಡ ಸಾರ್ವಜನಿಕರು ಬೆಟ್ಟದ ಮೇಲೆ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು.

ಡ್ರಿಲ್ಲಿಂಗ್ ಯಂತ್ರದಿಂದ ಬಂಡೆ ಕೊರೆಯುವ ದೃಶ್ಯ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಟ್ಟಿದ್ದರು. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಮಹೇಶ್ ಕುಮಾರ್ ಸೂಚನೆ ಮೇರೆಗೆ ಚಾಮುಂಡಿ ಬೆಟ್ಟದ ಗ್ರಾಮಲೆಕ್ಕಿಗ(ವಿಎ) ಎಸ್.ಮಹೇಶ್ ಶುಕ್ರವಾರ ಬೆಳಗ್ಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ, ಅದು ಹಿಡುವಳಿ ಭೂಮಿ ಎಂಬುದು ಖಚಿತವಾಗಿದೆ. ಖಾಸಗಿ ಭೂಮಿಯಾಗಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಆದರೆ, ಭೂಮಿಯಲ್ಲಿದ್ದ ಬಂಡೆ ತೆರವು ಮಾಡಲು ಅರಣ್ಯ ಇಲಾಖೆ ಅನುಮತಿ ಪಡೆಯಬೇಕಾಗಿತ್ತು. ಆ ನಿಯಮ ಉಲ್ಲಂಘಿಸಿರುವುದನ್ನು ಹೊರತುಪಡಿಸಿದರೆ, ಭೂ ಮಾಲೀಕರಿಂದ ಯಾವುದೇ ಲೋಪವಾಗಿಲ್ಲ. ಹಾಗಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳಲು ಅವಕಾಶವಿಲ್ಲ.



ಚಾಮುಂಡಿಬೆಟ್ಟದಲ್ಲಿ ಖಾಸಗಿ ಭೂಮಿಯಲ್ಲಿ ಬೃಹತ್ ಬಂಡೆಗಳನ್ನು ಡ್ರಿಲ್ಲಿಂಗ್ ಯಂತ್ರದ ಮೂಲಕ ಒಡೆಯುತ್ತಿರುವುದನ್ನು ಗ್ರಾಮಲೆಕ್ಕಿಗ ಎಸ್.ಮಹೇಶ್ ಭೇಟಿ ನೀಡಿ ಪರಿಶೀಲಿಸಿದರು

ಸಂಶಯಕ್ಕೆ ತೆರೆ: ಚಾಮುಂಡಿಬೆಟ್ಟದ ಮೇಲೆ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಸಂಬಂಧ ಉಂಟಾಗಿದ್ದ ಸಂಶಯಕ್ಕೆ ತೆರೆ ಬಿದ್ದಿದೆ. ಬೃಹತ್ ಬಂಡೆಗಳಿರುವ ಸ್ಥಳ ಸರ್ಕಾರಿ ಭೂಮಿಯಲ್ಲ. ಅದು, ಪಿತ್ರಾರ್ಜಿತವಾಗಿ ಬಂದ ಹಿಡುವಳಿ ಭೂಮಿಯಾಗಿದೆ. ಕೂಲಿ ಕಾರ್ಮಿಕರಿಂದ ಡ್ರಿಲ್ಲಿಂಗ್ ಯಂತ್ರ ಬಳಸಿ, ರಂಧ್ರ ಕೊರೆದು ಬಂಡೆಯನ್ನು ವಿಭಾಗಿಸುವ ಕಾರ್ಯನಡೆಸಲು ಮುಂದಾಗಿರುವುದನ್ನು ಕಂಡ ಸಾರ್ವಜನಿಕರು ಸರ್ಕಾರಿ ಭೂಮಿ ಆಕ್ರಮಿಸಿಕೊಳ್ಳಲು ಸಂಚು ನಡೆಸುತ್ತಿರುವ ಅನುಮಾನ ವ್ಯಕ್ತಪಡಿಸಿದ್ದರು. ಆದರೆ, ಕಂದಾಯ ಇಲಾಖೆ ಅಧಿಕಾರಿಗಳು ಬಂಡೆ ಹೊಡೆಯುತ್ತಿರುವುದು ಸ್ಥಳ ಹಿಡುವಳಿ ಭೂಮಿಯಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮನೆ ಮಾರಾಟಕ್ಕಿದೆ

#160 A ಬ್ಲಾಕ್ ವಿಜಯನಗರ 3ನೇ ಹಂತ, ಮೈಸೂರು
50 x 80=4000 ಚದರ ಅಡಿ,
1ನೇ ಮಹಡಿ ಹೋಮ್ ಥಿಯೇಟರ್, 2ನೇ ಮಹಡಿ ಶಟಲ್ ಕೋರ್ಟ್,
ಚೌಡೇಶ್ವರಿ ದೇವಸ್ಥಾನದ ಹತ್ತಿರ
ರೂ.7 ಕೋಟಿ ಸಿಆರ್ ನೊಂದಿಗೆ
Lite Negotiable
ಸಂಪರ್ಕಿಸಿ: **96866 68601**

5ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ
W/0 ಲೇ|| ಕರಿಯಪ್ಪ

ಅಮ್ಮನ ಪ್ರೀತಿಗೆ ಸರಿಸಾಟಿ ಯಾರು.
ಗೋವಿಂದರಾಜು
PWD CLASS 1 CONTRACTOR
ಜಯನಗರ, ಕೆ.ಜಿ ಕೊಪ್ಪಲು ಮೈಸೂರು
ಮತ್ತು ದೇವರಾಜ್ ಕುಟುಂಬವರ್ಗದವರು

ಮನೆ ಬಾಡಿಗೆಗೆ ಇದೆ

ಬಾಡಿಗೆಗೆ 30X50,
2BHK ಮನೆ
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ
ರಾಜರಾಜೇಶ್ವರಿ ನಗರ
BEML ಲೇಔಟ್ ಮೈಸೂರು–26
ADVANCE–2ಲಕ್ಷ ರೂ
ಬಾಡಿಗೆ 20,000 ರೂ
9483149994

ಐದನೇ ವರ್ಷದ ಪುಣ್ಯಸ್ಮರಣೆ



ಬಿ.ಪಿ. ಶಾರದಮ್ಮ ರವರು
ನಿಧನ 13.09.2020. ಬನ್ನಿಮಂಟಪ, ಮೈಸೂರು.

ನೀವು ನಮ್ಮನ್ನಗಲಿ ಇಂದಿಗೆ
ಐದು ವರ್ಷ ಕಳೆದರು
ನಿಮ್ಮ ನೆನಪು ನಮ್ಮ
ಮನದಾಳದಲ್ಲಿ ಹಸಿರಾಗಿದೆ
ನೀವು ತೋರಿದ ದಾರಿಯಲ್ಲೇ
ಸಾಗುತ್ತಿದ್ದೇವೆ ನಿಮ್ಮ ಆತ್ಮಕ್ಕೆ
ಸದಾ ಚಿರಶಾಂತಿ ಕೋರುವ
ಪತಿ–ಕೆ. ಮಂಜುನಾಥ
ನಿವೃತ್ತ ಕೆ.ಎಸ್.ಆರ್.ಟಿ.ಸಿ ಡ್ರೈವರ್,
ಮಕ್ಕಳು ಮತ್ತು ಮೊಮ್ಮಕ್ಕಳು
ಹಾಗೂ ಕುಟುಂಬ ವರ್ಗದವರು

Step beyond your expectations !! at Our Grand Venue

RAJENDRA KALAMANDHIRA



* Wedding / convention hall with special rates
* 2 Banquet halls to accommodate 200
* 45 Air conditioned rooms with discount
* WEDDING
* ENGAGEMENTS
* CONFERENCES
* TRADE FAIRS
* PRODUCT LAUNCHES
* SPECIAL OFFERS & DISCOUNTS

9845923388, 9845963388
Ramanuja Road, Mysuru
rajendrakalamandhira@rpsshotels.com
viceroyconforts@rpsshotels.com

ಶ್ರೀ ಶಾರದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ

ಸರಸ್ವತಿಪುರಂ, ಮೈಸೂರು

ರಜತ ಮಹೋತ್ಸವ ಸಮಾರಂಭ

ದಿನಾಂಕ 14–09–2025 ಭಾನುವಾರದಂದು
ಸ್ಥಳ: ಜಿ.ಎಲ್.ಎನ್. ಕನ್‌ವೆನ್ಷನ್ ಹಾಲ್, ಬೋಗಾದಿ, ಮೈಸೂರು
ಸಮಯ: ಬೆಳಿಗ್ಗೆ 10.30 ಗಂಟೆಗೆ

ಉದ್ಘಾಟನೆ: ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರು–ಕೊಡಗು ಕ್ಷೇತ್ರ ಲೋಕಸಭಾ ಸದಸ್ಯರು
ಮುಖ್ಯ ಅತಿಥಿಗಳು: ಶ್ರೀ ಜಿ.ಟಿ. ದೇವೇಗೌಡ, ಶಾಸಕರು
ಶ್ರೀ ಶ್ರೀವತ್ಸ, ಶಾಸಕರು * ಶ್ರೀ ಹರೀಶ್‌ಗೌಡ, ಶಾಸಕರು
* ಶ್ರೀ ಹೆಚ್.ವಿ. ರಾಜೀವ್, ಅಧ್ಯಕ್ಷರು, ಜಿಲ್ಲಾ ಸಹಕಾರ ಯೂನಿಯನ್.
ಅಧ್ಯಕ್ಷತೆ: ಶ್ರೀ ವಿ. ವೆಂಕಟೇಶ್, ಅಧ್ಯಕ್ಷರು, ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ.

ಸೈಟು ಮಾರಾಟಕ್ಕಿದೆ

30x40 ಪೂರ್ವ ದಿಕ್ಕು, ಸ್ಯಾನ್ ಸಿಟಿ, ಬಿಳಿಕೆರೆ– 13.5 ಲಕ್ಷ
30X40 ಇಲವಾಲ 26- ಲಕ್ಷ
9632211899

ಸೈಟುಗಳು ಮಾರಾಟಕ್ಕಿವೆ

(Starts 1299/- sq.ft.)
@ *ಇಲವಾಲ ಬಸ್ ನಿಲ್ದಾಣ* ಹತ್ತಿರ & ಮನುಗನಹಳ್ಳಿ ಚೆಕ್‌ಪೋಸ್ಟ್.
Mob: 9880774395

JOCKEY FACTORY SECONDS



UPTO 50% OFF* *T & C apply
10 am to 8 pm • Open All Days • Master / Visa Card Accepted
ONLY LEISUREWEAR, ACTIVEWEAR, KIDSWEAR, THERMALS & SOCKS

Venues in Mysore & Hassan
Mysore : Sri Bandanthamma Kaalamma Samudaya Bhavana, New Kanthraj Urs Road, Near Apollo Hospital, Kuvempu Nagara
Hassan : Sri Sringeri Shankar Math, Shankar Math Road, K.R. Puram
Org. by: Surya Agency Pvt. Ltd.

ಸೈಟುಗಳು ಮಾರಾಟಕ್ಕಿವೆ

DTCP ಅನುಮೋದಿತ
ಇಲವಾಲ ಹತ್ತಿರ
ಕೇವಲ Rs.1199/-Sq.ft
ಸಂಪರ್ಕಿಸಿ: 74833 38488

MUDA APPROVED SITES FOR SALE

AMS ENCLAVE
In a Prime Location, near Ring Road & T. Narasipura Highway Junction.
30x40 North & South Facing Sites
for Immediate Registration
@ Rs.5250/- Sq.ft.
To schedule a visit & know more about these sites Contact
9964906588/9901602702

IT PARK

DTCP Approved
SITES FOR SALE
at Jayapura, Phase-1
8kms from Ring Road Junction
Starts from 1550/- per sq.ft., Only
Bank Loan Available
For site visit & details contact :
91086 06262
IT PARK
Kuvempunagar, Mysore.

ವಾಣಿಜ್ಯ ಪದವೀಧರರೇ ಗಮನಿಸಿ

ಕಲಿಯಿರಿ ಟ್ಯಾಲಿ, ಇ–ಫೈಲಿಂಗ್, ಜಿಎಸ್‌ಟಿ & ಇನ್‌ಕಂ ಟ್ಯಾಕ್ಸ್
ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹುದು.
* ವಯಸ್ಸಿನ ಮಿತಿ ಇಲ್ಲ * ಗೃಹಿಣಿಯರಿಗೂ ಅವಕಾಶ.
ತರಗತಿಗಳು ಪ್ರಾರಂಭ 20-9-2025 ರಿಂದ
Contact: GLOBAL ACCOUNTS
Mob: 8951525007

ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಚಾಮರಾಜ ಜೋಡಿ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.–4

ಸ್ಥಾಪನೆ:1916 ದೂರವಾಣಿ: 0821–2448947
ನೋಂದಣಿ ಸಂಖ್ಯೆ :937.R.C.S,31/01-11-1916. Email-tmcchsltd@gmail.com

ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮೇಲ್ಕಂಡ ಸೊಸೈಟಿಯ 107ನೇ ಸಾಲಿನ ಸರ್ವಸದಸ್ಯರ ಸಭೆಯು 2025ನೇ ಇಸವಿ ಸೆಪ್ಟೆಂಬರ್ ಮಾಹೆ ದಿನಾಂಕ ಹದಿನಾಲ್ಕರಂದು [14–09–2025] ಭಾನುವಾರ ಮಧ್ಯಾಹ್ನ 3–00 ಘಂಟೆಗೆ ಸರಿಯಾಗಿ ಸಂಘಕ್ಕೆ ಸೇರಿದ ಅಮೃತ ಮಹೋತ್ಸವ ಸಭಾಂಗಣದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತೆ.

ಸಂಘದ ಅಧ್ಯಕ್ಷರಾದ
ಶ್ರೀ ಬಿ. ನಾಗರಾಜು (ಎಂ.ಎ)
ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತೆ

ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ಸಕಾಲಕ್ಕೆ ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ವಿಶೇಷ ಸೂಚನೆ: ವಾರ್ಷಿಕ ಮಹಾಸಭೆಗೆ ಹಾಜರಾಗುವ ಮಾನ್ಯ ಸದಸ್ಯರುಗಳು ಸೊಸೈಟಿಯಿಂದ ನೀಡಿರುವ ಷೇರು ಪಾಸ್ ಪುಸ್ತಕ/ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಲು ಕೋರಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/–ಬಿ.ಎಸ್.ಶ್ರೀನಾಥ್
ಕಾರ್ಯದರ್ಶಿ, ಮೊ: 9945228842

HOUSE & PLOTS FOR SALE

30x40, 3 BHK
EAST FACING
Semi furnished
Duplex House & plots
for sale in Srirampura & 3rd Stage, Vijayanagar.
Call : 95357 18132 / 63642 04222

ಹಸಿರು ನಮ್ಮ ಉಸಿರು

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ), ಮೈಸೂರು

ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು–570 004. ಫೋನ್: 0821–2447492

ಸರ್ವಸದಸ್ಯರ 36ನೇ ವಾರ್ಷಿಕ ಸಾಮಾನ್ಯ ಸಭೆ

ಸಂಘದ ಸರ್ವಸದಸ್ಯರ 36ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: **14–09–2025 ನೇ ಭಾನುವಾರ ಬೆಳಗ್ಗೆ 10–00 ಗಂಟೆಗೆ, ಮೈಸೂರಿನ ಜೆ.ಕೆ. ಗ್ರೌಂಡ್‌ನ ಮೆಡಿಕಲ್ ಅಲೂಮ್ನಿ ಅಸೋಸಿಯೇಷನ್** ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಕೆ.ಎನ್. ಅಣ್ಣೇಗೌಡ** ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಪ್ರಮಾಣ ಪತ್ರದ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಅರ್ಹ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ವಿಶೇಷ ಸೂಚನೆ: 1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಸಂಘದ ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರಲು ಕೋರಿದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.) ಮೈಸೂರು

ಕಲಾಭಾರತಿ ವಿದ್ಯಾಸಂಸ್ಥೆ (ರಿ). ಇಲವಾಲ, ಮೈಸೂರು

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಸ್ಪರ್ಧಾರ್ಥಿಗಳಿಗೆ ಬೋಧಿಸಲು ನುರಿತ ಅನುಭವಿ ಅಧ್ಯಾಪಕರು ಬೇಕಾಗಿದ್ದಾರೆ. ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳ ಶಾಸ್ತ್ರ, ವಿಜ್ಞಾನ & ತಂತ್ರಜ್ಞಾನ, ಪ್ರಚಲಿತ ವಿದ್ಯಮಾನ, ಅರ್ಥಶಾಸ್ತ್ರ, ಮೆಂಟಲ್ ಎಬಿಲಿಟಿ, ಕನ್ನಡ, ಇಂಗ್ಲೀಷ್, ಕಂಪ್ಯೂಟರ್
9663680463, 9035480666

Exchange your old sofa set to brand new sofa set.

Also repair done.
Mob: 9591012944

mysilkerae

KALENI SILK INDUSTRY
FACTORY SALE
ಅಪ್ಪಟ ಚಿನ್ನದ ಜರಿಯ ಸೀರೆಗಳು
100% PURE SILK / GOLD ZARI SAREES
UP TO 30% DISCOUNT
Woven on traditional looms exclusively with pure silk from the historic region of Mysore.
KALENI SILK INDUSTRY
#263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

ವಾಣಿವಿಲಾಸ ಮೊಹಲ್ಲಾ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

(ನೋಂದಣಿ ಸಂಖ್ಯೆ : 870 ಡಿ.ಆರ್.ಎಂ.64–65) ದೂ: 0821–2512258
ನಂ. 1789, ಹಂಪಿವೃತ್ತ, 2ನೇ ಹಂತ, ಹೆಬ್ಬಾಳ್ (ವಿಜಯನಗರ), ಮೈಸೂರು – 570017

60ನೇ ಸಂಘದ ವಾರ್ಷಿಕ ಮಹಾಸಭೆಯ ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 14.09.2023 ಭಾನುವಾರ ಬೆಳಗ್ಗೆ 10.30ಗಂಟೆಗೆ ಸಂಘದ 60ನೇ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀಯುತ ಹೆಚ್.ಲಂಕೇಗೌಡ ರವರ ಅಧ್ಯಕ್ಷತೆಯಲ್ಲ ನಡೆಯಲ್ಲಿದ್ದು, ಈಗಾಗಲೇ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತಿಕೆ ಕಳುಹಿಸಿದ್ದು ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಸಭೆಗೆ ಸಕಾಲಕ್ಕೆ ತಪ್ಪದೆ ಹಾಜರಾಗಬೇಕೆಂದು ಈ ಮೂಲಕ ವಿನಂತಿ ಮಾಡಲಾಗಿದೆ.

ವಂದನೆಗಳೊಂದಿಗೆ
ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಸಭಾಂಗಣ, ಚಾಮುಂಡಿ ಗೆಸ್ಟ್ ಹೌಸ್ ಪಕ್ಕ, ಕೃಷ್ಣ ವಿಲಾಸ್ ರಸ್ತೆ, ಮೈಸೂರು ಇಲ್ಲಿ
ಸಹಿ/– ಕಾರ್ಯದರ್ಶಿ
ಕುಮಾರ್.ಎಂ

ಮಧುವನ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ನಂ. 222, 12ನೇ ಮೇನ್, 3ನೇ ಕ್ರಾಸ್,
ಸರಸ್ವತಿಪುರಂ, ಮೈಸೂರು–09 ಫೋನ್: 2449852

46ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮಾನ್ಯ ಸದಸ್ಯರೇ,

ಸಂಘದ 2024–2025ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ **ಶ್ರೀಯುತ ಡಿ.ಬಿ. ಪ್ರಕಾಶರವರ** ಘನ ಅಧ್ಯಕ್ಷತೆಯಲ್ಲಿ **ದಿನಾಂಕ: 14–09–2025ನೇ ಭಾನುವಾರ ಬೆಳಗ್ಗೆ 11.00 ಗಂಟೆಗೆ "ಶ್ರೀರಾಮ ಮಂದಿರ"**, ಕಾಂತರಾಜ ಅರಸ್ ರಸ್ತೆ, ಬಲ್ಲಾಳ್ ಸರ್ಕಲ್ ಹತ್ತಿರ, ಕೃಷ್ಣಮೂರ್ತಿಪುರಂ, ಮೈಸೂರು ಇಲ್ಲಿ ನಡೆಸಲಾಗುವುದು. ಈ ಸಂಬಂಧ ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಹಾಜರಾಗಲು ಕೋರುತ್ತೇವೆ.

ಸಹಿ/– ಕಾರ್ಯದರ್ಶಿ
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸೂಚನೆ : ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯರುಗಳು ಕಡ್ಡಾಯವಾಗಿ ಸಂಘದಿಂದ ನೀಡಿರುವ ಪಾಸ್ ಪುಸ್ತಕವನ್ನು ತರಬೇಕಾಗಿ ವಿನಂತಿ.

The Best WATER PROOF Plywood



66/- PER SQFT
15 YEARS CERTIFIED WARRANTY
Neem BOND PLATINUM
Neem AKSHAYAGOLD
99012-91267 / 97315-91267

ಹೂಡಿಕೆ ಹಣಕಾಸು ಅಗತ್ಯವಿದೆ

ಅಂದದಲ್ಲಿ ಹೂಡಿಕೆ ಮಾಡಿ....ವಿಶ್ವಾಸದಿಂದ ಲಾಭ ಗಳಿಸಿ. ನಾವು ನಮ್ಮ ಅತ್ಯಾಕರ್ಷಕ ಗೇಟೆಡ್ ಕಮ್ಯುನಿಟಿ ವಿಲ್ಲಾ ಯೋಜನೆಗಾಗಿ ಹೂಡಿಕೆ ಹಣಕಾಸು ಎದುರು ನೋಡುತ್ತಿದ್ದೇವೆ. ಮೈಸೂರು ವಿಮಾನ ನಿಲ್ದಾಣದ ಸಮೀಪದ 3 ಎಕರೆ 30 ಗುಂಟೆ ಭೂಮಿಯಲ್ಲಿ 76 ಪ್ರೀಮಿಯಂ ವಿಲ್ಲಾಗಳನ್ನು ನಿರ್ಮಿಸಿ ಅವುಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಯೋಜನೆ ಶೀರ್ಷಿಕೆ: ರಾಯಲ್ ಗ್ರೀನ್ಸ್ ವಿಲ್ಲಾಗಳು: 76 ಉನ್ನತ ಮಟ್ಟದ ವಿಲ್ಲಾಗಳು. ಸ್ಥಳ: ಮೈಸೂರು ವಿಮಾನ ನಿಲ್ದಾಣದ ಸಮೀಪ. ಕಾನೂನು ಸ್ಥಿತಿ: 100% ಸ್ಪಷ್ಟ ಮತ್ತು ಕಾನೂನುಬದ್ಧವಾಗಿ.ಅಗತ್ಯ ಹೂಡಿಕೆ: ರೂ. 2,00,00,000 (ರೂ. ಎರಡು ಕೋಟಿ ಮಾತ್ರ) ಲಾಭಂಶ:100%
ಕಾನೂನು ಭದ್ರತೆಯೊಂದಿಗೆ ಅತ್ಯಂತ ಆಕರ್ಷಕ ಲಾಭ
82776 90979, 82776 67569

ಅರಸು ಮಂಡಳಿ ಸಹಕಾರ ಸಂಘ ನಿಯಮಿತ

ಸ್ಥಾಪನೆ: 1935 ನೋಂದಣಿ ಸಂಖ್ಯೆ: 1520/18/12–1935
ನಂ. 1483/1, 5ನೇ ಕ್ರಾಸ್, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು–570 004
Mob: 7019480195. Email: umcsociety1935@gmail.com

2024–25ನೇ ಸಾಲಿನ ಸಂಘದ 90ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ನಮ್ಮ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು, ದಿನಾಂಕ 14–9–2025ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಮ್ಮ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎ.ಆರ್. ಮಲ್ಲರಾಜೇ ಅರಸ್ (ಅಚ್ಯುತ) ರವರ ಅಧ್ಯಕ್ಷತೆಯಲ್ಲಿ ಶ್ರೀ ಶ್ರೀ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನ, ತ್ಯಾಗರಾಜ ರಸ್ತೆ, ಮೈಸೂರು, ಇಲ್ಲಿ ಏರ್ಪಾಡು ಮಾಡಲಾಗಿದೆ. ಆಹ್ವಾನ ಪತ್ರ ತಲುಪದೆ ಇದ್ದಲ್ಲಿ ಮಾನ್ಯ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಕೋರುತ್ತೇವೆ. ಸದಸ್ಯರು ಸಹಕಾರ ಸಂಘದ ಗುರುತಿನ ಚೀಟಿಯನ್ನು ತರತಕ್ಕದ್ದು.

ಆಡಳಿತ ಮಂಡಳಿ ಪರವಾಗಿ
ದಿನಾಂಕ: 11–9–2025 ಸಹಿ/– ಪ್ರಭುಸ್ವಾಮಿ, ಕಾರ್ಯದರ್ಶಿ

PROPERTIES FOR SALE

Ready for Registration
Prime Locations
30x40
Near Vivekananda Circle
43X93
East Facing Ashokapuram
Railway Station 100Mtr
Near Bedarakanappa Temple.
40x90
South Facing
Kote Hundi Main Road
(Brokers Excuse)
9008111454

WANTED

Counter Boys : SSLC / PUC
With or without experience.
Two wheeler with Driving Licence compulsory.
Please send resume addressed to:
The Manager, RAGHULAL & CO.,
Sayyaji Rao Road, Mysore-570 001

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ಎಂ.ಡಿ.ಎ. ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು.
ದೂರವಾಣಿ ಸಂಖ್ಯೆ –0821–2424246

2024–2025 ನೇ ಸಾಲಿನ ಸಂಘದ ಇಪ್ಪತ್ತಮೂರನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ

ಸೂಚನಾ ಪತ್ರ (ನೋಟೀಸ್)

ಸಂಘದ 2024–2025ನೇ ಸಾಲಿನ ಇಪ್ಪತ್ತಮೂರನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಮಹಾಲಿಂಗಂ ರವರ ಅಧ್ಯಕ್ಷತೆಯಲ್ಲಿ ದಿನಾಂಕ 14–09–2025 ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸೊಸೈಟಿಯ ಕೇಂದ್ರ ಕಛೇರಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು. ಇಲ್ಲಿ ನಡೆಯಲಿದೆ. ಮಾನ್ಯ ಸಂಘದ ಗುತ್ತಿಗೆದಾರ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿ ಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳಲಾಗಿದೆ. ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ವೆಂದು ತಿಳಿದು ದಯಮಾಡಿ ಭಾಗವಹಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವಿಶೇಷ ಸೂಚನೆ:

1. ಮಾನ್ಯ ಸದಸ್ಯರುಗಳು **K.Y.C.** ಅಂದರೆ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ನೀಡಿ ನವೀಕರಿಸಿಕೊಳ್ಳುವುದು.
2. ದಯವಿಟ್ಟು ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ನಿಮ್ಮ ಸಂಗಡ ತನ್ನಿ.
3. ದಿನಾಂಕ 14.09.2025 ರಂದು ಸಂಘದ ವಾರ್ಷಿಕ ಮಹಾಸಭೆ ಪ್ರಯುಕ್ತ ದಿನಾಂಕ 15.09.2025 ರ ಸೋಮವಾರದಂದು ಸಂಘಕ್ಕೆ ರಜೆ ಘೋಷಿಸಲಾಗಿದೆ. ಮಾನ್ಯ ಸದಸ್ಯರುಗಳು ಸಹಕರಿಸಬೇಕಾಗಿ ವಿನಂತಿ.

ಸ್ಥಳ: ಮೈಸೂರು. ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ದಿನಾಂಕ: 06.09.2025 ಸಹಿ/–ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, ಮೈಸೂರು

ಸಹಕಾರ ಸಂಕೀರ್ಣ, "ಸಹಕಾರ ಭವನ" ಚಾಮರಾಜ ಜೋಡಿ ರಸ್ತೆ, ಮೈಸೂರು–570004
ಮೊ–9008033838 | E-mail:info@mahilabank. in | Website:www.mahilabank.in

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2024-2025ನೇ ಸಾಲಿನ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ: 14–09–2025ನೇ ಭಾನುವಾರ ಬೆಳಗ್ಗೆ 11.00ಗಂಟೆಗೆ ಬ್ಯಾಂಕಿನ ಶಾಖಾ ಕಛೇರಿಯಾದ ನಂ–09 ಕೆ ಬ್ಲಾಕ್ ಅಶೋಕಪುರಂ ಪೊಲೀಸ್ ಠಾಣೆ ಹಿಂಭಾಗ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ ಮೈಸೂರು–570023 ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮಂಜುಳ ಮಾನಸ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದ್ದು, ಬ್ಯಾಂಕಿನ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಒಳಗೊಂಡ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದೆ. ವರದಿ ಪುಸ್ತಕ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ.

ಸಹಿ/– ಆಡಳತ ಮಂಡಳ ಆದೇಶದ ಮೇರೆಗೆ
ಎನ್.ಸುಮಾ.ಬಿ.ಕಾಂ, ವ್ಯವಸ್ಥಾಪಕರು

ವಿಶೇಷ ಮನವಿ:
1) ಮಾನ್ಯ ಸದಸ್ಯರುಗಳಿಗೆ ಮಾತ್ರವೇ ದಿನಾಂಕ–14–09–2025ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ ಸಿಹಿ ತಿಂಡಿ ನೀಡುವ ವ್ಯವಸ್ಥೆ ಮಾಡಲಾಗಿದೆ. ನಂತರ ಬ್ಯಾಂಕಿನಲ್ಲಿ ಸಿಹಿ ತಿಂಡಿ ವಿತರಿಸುವ ವ್ಯವಸ್ಥೆ ಇರುವುದಿಲ್ಲ. ಸದಸ್ಯರುಗಳು ಸಹಕರಿಸಬೇಕಾಗಿ ವಿನಂತಿ.
2) ಲಘು ಉಪಹಾರದ ವ್ಯವಸ್ಥೆ ಇರುತ್ತದೆ.

ಮಾನ್ಯ ಸದಸ್ಯರು ಮತ್ತು ಗ್ರಾಹಕರುಗಳಿಗೆ ಸಾಲ ಸೌಲಭ್ಯ:
1) ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ) ವಾಸಿಸುವ ಸ್ಥಿರಾಸ್ತಿ ಹೊಂದಿರುವ ನಾಗರೀಕರಿಗೆ ಬ್ಯಾಂಕಿನ ಸದಸ್ಯರಲ್ಲದವರಿಗೂ (ಮಹಿಳೆ ಮತ್ತು ಪುರುಷ) ಸಹಸದಸ್ಯರನ್ನಾಗಿ ಮಾಡಿಕೊಂಡು ಗರಿಷ್ಠ 60 ಲಕ್ಷ ರೂ.ಗಳವರೆಗೆ ಸ್ಥಿರಾಧಾರ ಸಾಲವನ್ನು ನೀಡಲಾಗುತ್ತಿದೆ.
2) ಸದಸ್ಯರು ಮತ್ತು ಸದಸ್ಯರಲ್ಲದವರಿಗೂ 1 ಗ್ರಾಂ ಶುದ್ಧ ಚಿನ್ನಕ್ಕೆ 6000/– ರೂ.ಗಳ ನಗಾಧಾರ ಸಾಲವನ್ನು ಅತೀ ಕಡಿಮೆ ಬಡ್ಡಿದರದಲ್ಲಿ ಗರಿಷ್ಠ ಮಿತಿ ರೂ.25 ಲಕ್ಷದವರೆಗೆ ಸಾಲ ನೀಡಲಾಗುವುದು. ಸಾಲಕ್ಕೆ ಅಡವು ಮಾಡುವ ಚಿನ್ನಾಭರಣಗಳಿಗೆ ವಿಮಯ ಸೌಲಭ್ಯ ಇರುತ್ತದೆ.

G9 projects – Vee2 Developers

Designing your Dreams
POORVA SHELTERS
Near to Lalithadripura Ring road Mysuru
Book your plot, we'll Build your dream home
20×30 | 30×40 & 20×40 | 30×50
₹ 3,999/- per sqft
8088-707-707

Jnana Vaahini Shikshana Samsthe, Mysore (R.)

MYSORE COLLEGE OF ENGINEERING & MANAGEMENT
Approved by AICTE & Affiliated to VTU Belagavi, # 1072, Near Big Baniyan Tree, T. Narasipura Road, NH-766, Chikkahalli, Mysuru-570028
CET CODE-E252 | COMED-K CODE-E172
MYCEM - MYSURU
B.E. COURSES OFFERED
FEW SEATS AVAILABLE
ADMISSIONS OPEN FOR 2025-26
HURRY-UP

- CIVIL ENGINEERING (CV)
- MECHANICAL ENGINEERING (ME)
- COMPUTER SCIENCE & ENGINEERING (CSE)
- INFORMATION SCIENCE ENGINEERING (ISE)
- ELECTRONICS & COMMUNICATION ENGINEERING (ECE)
- COMPUTER SCIENCE ENGINEERING ARTIFICIAL INTELLIGENCE & MACHINE LEARNING (CI)
- COMPUTER SCIENCE ENGINEERING DATA SCIENCE (CD)

For Admission Contact:
Dr. MANJUNATHA T.S., Principal: 9108012040. Office: 9108012039
1072, Near Big Baniyan Tree, T. Narasipura Road, NH-766, Chikkahalli, Mysuru-570028. www.mycem.edu.in